ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 32 | ಆಗಸ್ಟ್ 6-12, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



'ಬಚಾವ್' ಆಗದ ಇನ್ನೊಬ್ಬ 'ಬೇಟಿ' **ರಕ್ಷಿತಾ**



ಆಗಸ್ಟ್ 9 ಜೈಲ್ ಭರೋ

ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಿರಿ

ಜನಪರ ಹಕ್ಕೊತ್ತಾಯಗಳ ಹೋರಾಟವನ್ನ ಬಲಪಡಿಸಿರಿ

ರೈತ - ಕಾರ್ಮಿಕ - ಕೂಲಿಕಾರರ



ಜೈಲ್ ಭರೋ ಚಳುವಳಿ

9 ಆಗಸ್ಟ್ 2018 ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ



ಅಸ್ಸಾಂ NRC : ಯಾವುದೇ ಭಾರತೀಯ ಹೊರಗಿರಬಾರದು




ಪ್ರತ್ಯೇಕ ರಾಜ್ಯ ಪರಿಹಾರವಲ್ಲ



BBMP ಪುನರ‍್ರಚನೆ ಹೇಗಿರಬೇಕು?





ಧಾರವಾಡದಲ್ಲಿ

ಗ್ರೀಸ್ ಕಮ್ಯೂನಿಸ್ಟ್ ಪಕ್ಷಕ್ಕೆ 100 ರ ಸಂಭ್ರಮ



ಅಸ್ಸಾಂನಲ್ಲಿ ಎನ್‌ಆರ್‌ಸಿಯಿಂದ ಯಾವುದೇ ಭಾರತೀಯರನ್ನು ಹೊರಗಿಡಬಾರದು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಸ್ಸಾಂನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಕರಡು ಪಟ್ಟಿ ಜುಲೈ 31ರಂದು ಪ್ರಕಟವಾಗಿದ್ದು ಅದರಲ್ಲಿ ಸುಮಾರು 40ಲಕ್ಷ ಹೆಸರುಗಳು ಸೇರ್ಪಡೆಯಾಗಿಲ್ಲ ಎಂದು ವರದಿಯಾಗಿದೆ. ಈ ರೀತಿ ಪಟ್ಟಿಯಲ್ಲಿ ತಮ್ಮ ಹೆಸರು ಕಾಣದಿರುವ ಜನಗಳ ನಡುವೆ ವ್ಯಾಪಕ ಸಂದೇಹ ಮತ್ತು ಆತಂಕ ಉಂಟಾಗಿದೆ. ಇಂತವರ ದೂರುಗಳನ್ನು ಆಮೂಲಾಗ್ರವಾಗಿ ಮತ್ತು ಗಂಭೀರವಾಗಿ ಪರಿಶೀಲಿಸಬೇಕು ಮತ್ತು ಸರಿಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಎನ್‌ಆರ್‌ಸಿ ಅಸ್ಸಾಂ ಒಪ್ಪಂದದ ಭಾಗ. ಅಸ್ಸಾಂನಲ್ಲಿ ನೆಲೆಸಿರುವ ಕಾನೂನುಬಾಹಿರ ವಲಸಿಗರ ಪ್ರಶ್ನೆಯನ್ನು ನಿರ್ಧರಿಸಲು 1971ನ್ನು ಅಂತಿಮ ವರ್ಷವೆಂದು ಅಸ್ಸಾಂ ಒಪ್ಪಂದ ನಿರ್ಧರಿಸಿತ್ತು. ಇಂತಹ ಒಂದು ನೋಂದಣಿಯನ್ನು ಸಿದ್ಧಪಡಿಸುವ ಕೆಲಸ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸುವ ವರೆಗೆ ನಡೆಯಲಿಲ್ಲ. ಈಗ ಅದರ ನಿರ್ದೇಶನ ಮತ್ತು ಉಸ್ತುವಾರಿಯಲ್ಲಿ ಕರಡು ಎನ್‌ಆರ್‌ಸಿ ಯನ್ನು ಸಿದ್ಧಪಡಿಸಲಾಗಿದೆ.

ಈ ಕರಡಿನ ಸಿದ್ಧತೆಯಲ್ಲಿ ಹಲವಾರು ಅಸಂಗತತೆಗಳು ಕಂಡು ಬಂದಿವೆ. ಸುಪ್ರಿಂ ಕೋರ್ಟ್ ಪಂಚಾಯತಿನ ಪ್ರಮಾಣ ಪತ್ರವನ್ನು ಒಂದು ದಾಖಲೆಯಾಗಿ ಸ್ವೀಕರಿಸಬೇಕು ಎಂದು ಘೋಷಿಸಿತ್ತು. ಆದರೂ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರ ಹೆಸರುಗಳನ್ನು ಬಿಡಲಾಗಿದೆ. ಇನ್ನು ಕೆಲವರು ಸರಿಯಾದ ಕ್ಷೇತ್ರ ಪರಿಶೀಲನೆಗಳನ್ನು ನಡೆಸದೆ ತಮ್ಮನ್ನು ಕೈಬಿಡಲಾಗಿದೆ ಎಂದು ದೂರುತ್ತಿದ್ದಾರೆ. ಕೆಲವು ಪ್ರಕರಣಗಳಲ್ಲಿ ರೇಶನ್ ಕಾರ್ಡನ್ನು ಬೆಂಬಲ ದಸ್ತಾವೇಜಾಗಿ ಪರಿಗಣಿಸಲು ನಿರಾಕರಿಸಲಾಗಿದೆ ಎಂದು ವರದಿಯಾಗಿದೆ. ವಿಚಿತ್ರವೆಂದರೆ, ಒಂದು ಕುಟುಂಬದಲ್ಲಿ ಕೆಲವರನ್ನು ಸೇರಿಸಲಾಗಿದೆ, ಇನ್ನು ಕೆಲವರನ್ನು ಕೈಬಿಡಲಾಗಿದೆ. ಇದರಿಂದಾಗಿ ಎನ್‌ಆರ್‌ಸಿಯಲ್ಲಿ ತಮ್ಮ ಹೆಸರು ಕಾಣದ ಸುಮಾರು 40 ಲಕ್ಷ ಜನಗಳಲ್ಲಿ ಸಂದೇಹ ಮತ್ತು ಆತಂಕ ಉಂಟಾಗಿದೆ.

ಹೆಸರುಗಳನ್ನು ಸೇರಿಸಲು ಇರುವ ಸಮಯ ಮಿತಿಯನ್ನು ವಿಸ್ತರಿಸಿ ಜನಗಳು ತಮ್ಮ ದೂರುಗಳನ್ನು ಸಲ್ಲಿಸಲು ಅನುವು ಮಾಡಿ ಕೊಡಬೇಕು. ಆನಂತರವೇ ಅಂತಿಮ ಎನ್‌ಆರ್‌ಸಿ ಯನ್ನು ಪ್ರಕಟಿಸಬೇಕು. ಯಾವುದೇ ಭಾರತೀಯರನ್ನು ಇದರಿಂದ ಹೊರಗಿಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕರಡು ಎನ್‌ಆರ್‌ಸಿಯಲ್ಲಿ ಹೆಸರು ಸೇರಿರದ ಎಲ್ಲ 40 ಲಕ್ಷ ಜನರೂ 'ಕಾನೂನುಬಾಹಿರ ವಲಸಿಗರು' ಎನ್ನುವ ಬಿಜೆಪಿ ಅಧ್ಯಕ್ಷರ ಮಾತು ವ್ಯಾಪಕ ಭಯವನ್ನು ಹುಟ್ಟಿಸುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜನತೆ ಶಾಂತಿ ಮತು ನೆಮ್ಮದಿಯನ್ನು ಕಾಯ್ದುಕೊಳ್ಳಬೇಕು, ನಮ್ಮ ದೇಶದ ಮತ್ತು ನಮ್ಮ ಜನತೆಯ ಐಕ್ಯತೆ ಮತ್ತು ಸಮಗ್ರತೆಯನ್ನು ಶಿಥಿಲಗೊಳಿಸುವ ಎಲ್ಲ ಪ್ರಯತ್ನಗಳನ್ನು ವಿಫಲಗೊಳಿಸಬೇಕು ಎಂದು ಮನವಿ ಮಾಡಿದೆ.

ಲೋಕಸಭೆಯಲ್ಲಿ ಇದನ್ನು ಎತ್ತಿದ ಸಿಪಿಐ(ಎಂ) ಸದಸ್ಯ ಮಹಮ್ಮದ್ ಸಲೀಂ ಅವರು ಇದೊಂದು ಬಹಳ ಸೂಕ್ಷ್ಮ ವಿಷಯ, ಧರ್ಮ, ಭಾಷೆಯ ಆಧಾರದಲ್ಲಿ ಪೌರತ್ವದಲ್ಲಿ ಕೈಯಾಡಿಸುವ ಪ್ರಯತ್ನಗಳನ್ನು ಮಾಡಬಾರದು ಎಂದು ಹೇಳಿದರು. 40 ಲಕ್ಷ ಜನರನ್ನು ಬೇರೆ ದೇಶಗಳಿಗೆ ಅಥವ ಕ್ಯಾಂಪುಗಳಿಗೆ ಕಳಿಸಲು ಸಾಧ್ಯವಿಲ್ಲ, ಅವರ ಮಾನವ ಹಕ್ಕುಗಳನ್ನು ರಕ್ಷಿಸಬೇಕಾಗುತ್ತದೆ ಎಂದು ಅವರು ಹೇಳಿದರು.

ಅಸ್ಸಾಂ ಸಿಪಿಐ(ಎಂ) ಕರೆ

ವ್ಯಾಪಕ ಭೀತಿ, ತಲ್ಲಣ, ಬಲವಾದ ಪ್ರಚೋದನೆ ಮತ್ತು ದಾರಿ ತಪ್ಪಿಸುವ ಪ್ರಚಾರಗಳ ನಡುವೆಯೂ ಶಾಂತಿಯನ್ನು ಅಸ್ಸಾಂ ಜನತೆ ಕಾಯ್ದುಕೊಂಡಿದ್ದಾರೆ ಎಂದಿರುವ ಸಿಪಿಐ(ಎಂ) ಅಸ್ಸಾಂ ರಾಜ್ಯಸಮಿತಿ ಮುಂಬರುವ ದಿನಗಳಲ್ಲೂ ಎಲ್ಲ ಪ್ರಚೋದನೆಗಳು ಮತ್ತು ಪಿತೂರಿಗಳನ್ನು ವಿಫಲಗೊಳಿಸಿ ಐಕ್ಯತೆ ಮತ್ತು ಸಮಗ್ರತೆಯನ್ನು ಉಳಿಸಿಕೊಳ್ಳಬೇಕು ಎಂದು ಮನವಿ ಮಾಡಿದೆ.

ಈಗ ಎನ್‌ಆರ್‌ಸಿಯಲ್ಲಿ ಹೆಸರು ಕೈಬಿಟ್ಟು ಹೋದವರಿಗೆ ಅವರ ಹೆಸರುಗಳನ್ನು ಅಂತಿಮ ಎನ್‌ಆರ್‌ಸಿಯಲ್ಲಿ ಸೇರಿಸಲು ನೆರವಾಗಬೇಕು ಎಂದು ಪಕ್ಷದ ಸದಸ್ಯರಿಗೆ ನಿರ್ದೇಶನ ನೀಡಿದೆ.

ಸಂವಿಧಾನದ 35 ಎ ಕಲಮನ್ನು ರದ್ದು ಮಾಡಬಾರದು: ಸಿಪಿಐ(ಎಂ) ನಿಂದ ಮಧ್ಯಪ್ರವೇಶ ಅರ್ಜಿ

ಕಾಶ್ಮೀರಿ ಜನತೆಯಲ್ಲಿ ಇನ್ನಷ್ಟು ಪರಕೀಯ ಭಾವ ಹೆಚ್ಚದಿರಬೇಕಾದರೆ ಈ ಕಲಮು ಇರಬೇಕು–ತರಿಗಾಮಿ

ಸಂವಿಧಾನದ 35 ಎ ಕಲಮು ಸಂವಿಧಾನ(ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ 1954 ರ ಪ್ರಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ನೀಡಿರುವ ವಿಶೇಷ ನಿಬಂಧನೆ. ಇದನ್ನು ಪ್ರಶ್ನಿಸಿ ಸುಪ್ರಿಂ ಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಹಾಕಲಾಗಿದೆ. ಇದರ ವಿಚಾರಣೆ ಸದ್ಯಕ್ಕೆ ಆರಂಭವಾಗಲಿದೆ. ಈ ಬಗ್ಗೆ ಕಾಶ್ಮೀರ ಕಣಿವೆಯಲ್ಲಿ ಆತಂಕ, ತಲ್ಲಣ ಉಂಟಾಗಿದೆ. ಈ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಿರುವ ಕಲಮು 370ನ್ನು ಬಹಳಷ್ಟು ದುರ್ಬಲಗೊಳಿಸಿರುವ ಸನ್ನಿವೇಶದಲ್ಲಿ ಈ ಕಲಮು ಬಹಳ ಅಗತ್ಯ, ಕಾಶ್ಮೀರದ ಜನತೆಯಲ್ಲಿ ಭಾರತದ ಬಗ್ಗೆ ಹೆಚ್ಚುತ್ತಿರುವ ಪರಕೀಯ ಭಾವವನ್ನು ಮತ್ತಷ್ಟು ಉಲ್ಬಣಗೊಳಿಸದಿರಬೇಕಾದರೆ ಇದು ಅಗತ್ಯ ಎಂಬ ಕಾರಣಕ್ಕೆ ಸಿಪಿಐ(ಎಂ) ಪರವಾಗಿ ರಾಜ್ಯದ ಹಿರಿಯ ಮುಖಂಡರೂ, ಶಾಸಕರೂ ಆಗಿರುವ ಮಹಮ್ಮದ್ ಯುಸುಫ್ ತರಿಗಾಮಿ ಒಂದು ಮಧ್ಯಪ್ರವೇಶ ಅರ್ಜಿಯನ್ನು ಸಲ್ಲಿಸಿದ್ದಾರೆ.

ವಾಸ್ತವವಾಗಿ ಕಲಮು 35ಎ ನ್ನು ಪ್ರಶ್ನಿಸಿ ಹಾಕಿರುವ ಈ ರಿಟ್‌ಅರ್ಜಿಯಲ್ಲಿ ಪ್ರಸ್ತುತ ಪಡಿಸಿರುವ ವಾದಗಳನ್ನು'ಈ ಕುರಿತ ಸುಪ್ರಿಂ ಕೋರ್ಟಿನ ಪ್ರತ್ಯೇಕ ಸಂವಿಧಾನ ಪೀಠಗಳು 1962 ಮತ್ತು 1969ರ ಎರಡು ಅರ್ಜಿಗಳ ಮೇಲಿನ ತೀರ್ಪುಗಳಲ್ಲಿ ಈಗಾಗಲೇ ತಿರಸ್ಕರಿಸಿವೆ ಎಂಬ ಸಂಗತಿಯನ್ನು ತರಿಗಾಮಿಯವರು ಸಲ್ಲಿಸಿರುವ ಮಧ್ಯಪ್ರವೇಶ ಅರ್ಜಿ ನಮೂದಿಸಿದೆ.

1947ರಲ್ಲಿ ಭಾರತ ಸ್ವತಂತ್ರವಾದಾಗ ಜಮ್ಮು ಮತ್ತು ಕಾಶ್ಮೀರಕ್ಕೆ ಭಾರತ ಸೇರುವ, ಅಥವ ಪಾಕಿಸ್ತಾನ ಸೇರುವ ಅಥವ ಸ್ವತಂತ್ರವಾಗಿರುವ ಅವಕಾಶವಿತ್ತು. ಇದು ಇಸ್ಲಾಮಿ ಧರ್ಮಾವಲಂಬಿಗಳು ಬಹುಸಂಖ್ಯಾತರಾಗಿರುವ ಪ್ರದೇಶವಾದರೂ, ಇಸ್ಲಾಮ್ ಹೆಸರಲ್ಲಿ ಸ್ಥಾಪನೆಗೊಂಡ ಪಾಕಿಸ್ತಾನವನ್ನು ಸೇರಲು ನಿರ್ಧರಿಸದೆ ಭಾರತವನ್ನು ಸೇರಲು ನಿರ್ಧರಿಸಿತು. ಹಾಗೆ ಸೇರುವ ಶರತ್ತುಗಳ ಬಗ್ಗೆ ಮಾತುಕತೆ ನಡೆಸಿದ, ತನ್ನದೇ ಸಂವಿಧಾನವನ್ನು ಹೊಂದುವುದಾಗಿ ಹೇಳಿದ ಏಕೈಕ ರಾಜ್ಯ ಇದಾಗಿದೆ.

ಈ ಬಗ್ಗೆ ದೀರ್ಘ ಮಾತುಕತೆಗಳ ನಂತರ ಸಂವಿಧಾನದ 370ನೇ ಕಲಮಿನಲ್ಲಿ ಈ ಎಲ್ಲ ಅಂಶಗಳನ್ನು ಒಳಗೊಳ್ಳಲಾಯಿತು.

1954ರ ಆದೇಶದ ನಂತರ ಕಲಮು 370ನ್ನು ಮತ್ತೆ–ಮತ್ತೆ ಹಲವು ಬಾರಿ ದುರುಪಯೋಗಪಡಿಸಲಾಗಿದೆ, ವಸ್ತುತಃ ಅದನ್ನು ನಿರಾಕರಿಸಲಾಗಿದೆ. ಆದರೆ ಸಂವಿಧಾನದ ನಾಲ್ಕನೇ ಭಾಗವಾದ ಪ್ರಭುತ್ವ ಧೋರಣೆಯ ನಿರ್ದೇಶಕ ಸೂತ್ರಗಳು ಮತ್ತು ಮೂರನೇ ಭಾಗದ ಅಡಿಯಲ್ಲಿರುವ ಮೂಲಭೂತ ಹಕ್ಕುಗಳ ಗುರಿಗಳು ಈಡೇರಬೇಕಾದರೆ ಭಾರತದ ವೈವಿಧ್ಯತೆಯಲ್ಲಿನ ಏಕತೆಯನ್ನು ರಕ್ಷಿಸಬೇಕು ಎಂಬುದು ಸಿಪಿಐ(ಎಂ)ನ ದೃಢ ನಂಬಿಕೆ ಎಂದು ಈ ಮಧ್ಯಪ್ರವೇಶದ ಅರ್ಜಿಯಲ್ಲಿ ಹೇಳಲಾಗಿದೆ.

ಅಲ್ಲದೆ ಭಾರತದ ಸಂವಿಧಾನದ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿರುವ ವಿಶೇಷ ಸ್ಥಾನಮಾನ ಸಂವಿಧಾನದ ಶಾಶ್ವತ ಲಕ್ಷಣವನ್ನು ಪಡೆದಿರುವುದರಿಂದ ಅದನ್ನೂ ರಕ್ಷಿಸಬೇಕಾಗಿದೆ ಎಂದೂ ಸಿಪಿಐ(ಎಂ) ಈ ಅರ್ಜಿಯಲ್ಲಿ ಹೇಳಿದೆ.

ಕಲಮು 35ಎ ಸಂವಿಧಾನದ ಭಾಗ 3ರ ಅಡಿಯಲ್ಲಿ ಬರುವ ಮೂಲಭೂತ ಹಕ್ಕುಗಳ ಭಾಗವೇ ಆಗಿದೆ, ಅದು ಕಲಮು 14 ಸೇರಿದಂತೆ ಬೇರೆ ಯಾವುದೇ ಮೂಲಭೂತ ಹಕ್ಕನ್ನು ಉಲ್ಲಂಘಿಸುವದಿಲ್ಲ ಎಂದೂ ಸಿಪಿಐ(ಎಂ)ನ ಈ ಮಧ್ಯಪ್ರವೇಶ ಅರ್ಜಿ ಅಭಿಪ್ರಾಯ ಪಟ್ಟಿದೆ.

ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ: ಕೊನೆಗೂ ಮಣಿದ ಮೋದಿ ಸರಕಾರ

9ನೇ ಶೆಡ್ಯೂಲಿನಲ್ಲಿ ಸೇರಿಸಲು ಹೋರಾಟ ಮುಂದುವರೆಯುತ್ತದೆ–ಡಿಎಸ್‌ಎಂಎಂ

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು(ದೌರ್ಜನ್ಯ ತಡೆ) ಕಾನೂನನ್ನು ಸಡಿಲಗೊಳಿಸುವ ತೀರ್ಪಿನ ವಿಷಯದಲ್ಲಿ ಕೊನೆಗೂ ಮೋದಿ ಸರಕಾರ ಮಣಿಯಬೇಕಾಗಿ ಬಂದಿದೆ. ಮಾರ್ಚ್ 20ರಂದು ಸುಪ್ರಿಂ ಕೋರ್ಟ್ ನೀಡಿದ ತೀರ್ಪಿನ ವಿರುದ್ಧ ಭುಗಿಲೆದ್ದ ದೇಶವ್ಯಾಪಿ ಆಕ್ರೋಶ ಏಪ್ರಿಲ್ 2ರ ದೇಶವ್ಯಾಪಿ ಬಂದ್ ನಲ್ಲಿ ಸ್ಪಷ್ಟವಾಗಿ ವ್ಯಕ್ತವಾಯಿತು. ಮರುದಿನ ಸರಕಾರ ಮರುವಿಮರ್ಶೆ ಅರ್ಜಿಯನ್ನು ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿತು. ಆದರೆ ಸುಪ್ರಿಂ ಕೋರ್ಟ್ ಈ ಬಗ್ಗೆ 'ಸ್ಪಷ್ಟೀಕರಣ' ನೀಡಿತಷ್ಟೇ. ಸರಕಾರ ಅಷ್ಟಕ್ಕೇ ಸುಮ್ಮನಾಯಿತು. ಅಲ್ಲದೆ ಏಪ್ರಿಲ್ 2ರ ಭಾರತ ಬಂದ್ ವೇಳೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ತೀವ್ರ ದಮನಕ್ಕೆ ಒಳಗಾದ ದಲಿತರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ.ಈ ಪ್ರತಿಭಟನೆಗಳಲ್ಲಿ ಕನಿಷ್ಟ 11 ಮಂದಿ ಪ್ರಾಣ ಕಳಕೊಂಡಿದ್ದಾರೆ, ನೂರಾರು ಮಂದಿ ಗಾಯಗೊಂಡಿದ್ದಾರೆ, ಹಲವಾರು ನಿರಪರಾಧಿ ದಲಿತರನ್ನು ಜೈಲಿಗೆ ಹಾಕಲಾಗಿದೆ.

ಇದೂ ಸಾಲದೆಂಬಂತೆ, ಎರಡು ತಿಂಗಳ ನಂತರ ಈ ತೀರ್ಪನ್ನು ನೀಡಿದ, ಮತ್ತು ನಿವೃತ್ತಿಯ ದಿನ ಅದನ್ನು ಮತ್ತೆ ಬಲವಾಗಿ ಸಮರ್ಥಿಸಿಕೊಂಡ ನ್ಯಾಯಾಧೀಶರನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ)ಯ ಅಧ್ಯಕ್ಷರನ್ನಾಗಿ ನೇಮಿಸಿ ಪುರಸ್ಕರಿಸಲಾಯಿತು.

ಇದು ಬಿಜೆಪಿಯ ಎನ್‌ಡಿಎ ಮಿತ್ರಪಕ್ಷಗಳಲ್ಲಿ ಮಾತ್ರವಲ್ಲ, ಬಿಜೆಪಿಯ ದಲಿತ ಎಂಪಿಗಳಲ್ಲೂ ಭಾರೀ ಕಸಿವಿಸಿ ಉಂಟು ಮಾಡಿತು.

ಅವರು ಕೇಳಿದಂತೆ ಸುಗ್ರೀವಾಜ್ಞೆ ತರುವುದಿರಲಿ, ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಹಲವು ಮಸೂದೆಗಳನ್ನು ತರಾತುರಿಯಲ್ಲಿ ಪಾಸು ಮಾಡಿಕೊಳ್ಳುವ ಯೋಜನೆ ಹಾಕಿಕೊಂಡಿದ್ದ ಈ ಸರಕಾರ ಈ ತೀರ್ಪನ್ನು ಸರಿಪಡಿಸುವ ಬಗ್ಗೆ ಯೋಚಿಸಲೂ ಇಲ್ಲ.

ಆದ್ದರಿಂದ ಆಗಸ್ಟ್ 9ರಂದು 'ಕ್ವಿಟ್ ಇಂಡಿಯಾ' ದಿನದಂದು ದಲಿತ ಸಂಘಟನೆಗಳು ಇನ್ನೊಂದು ದೇಶವ್ಯಾಪಿ ಪ್ರತಿಭಟನೆಗೆ ಸಿದ್ಧರಾಗುತ್ತಿದ್ದಂತೆ ಎನ್‌ಡಿಎ ಮಿತ್ರಪಕ್ಷಗಳು ಮತ್ತು ದಲಿತ ಎಂಪಿಗಳ ಮೇಲೂ ಒತ್ತಡ ಹೆಚ್ಚಿತು. ಅವರ ಮೂಲಕ ಸರಕಾರದ ಮೇಲೂ ಒತ್ತಡ ಹೆಚ್ಚಿತು.

ಈ ಹಿನ್ನೆಲೆಯಲ್ಲಿ ಮೋದಿ ಸಂಪುಟ ಕೊನೆಗೂ ಆಗಸ್ಟ್ 1 ರಂದು ಈ ಕಾಯ್ದೆಯನ್ನು ಮೂಲಸ್ವರೂಪದಲ್ಲೇ ಉಳಿಸುವ ಒಂದು ಮಸೂದೆಯನ್ನು ಪ್ರಸಕ್ತ ಸಂಸತ್ ಅಧಿವೇಶನದಲ್ಲಿ ಮಂಡಿಸಲು ನಿರ್ಧರಿಸಬೇಕಾಗಿ ಬಂದಿದೆ.

ಹೋರಾಟಕ್ಕೆ ಸಂದ ಜಯ

ಇದು ದಲಿತರ ಹೋರಾಟಕ್ಕೆ ಸಿಕ್ಕಿರುವ ಜಯ ಎಂದು ದಲಿತ ಶೋಷಿತ ಮುಕ್ತಿ ಮಂಚ್(ಡಿಎಸ್‌ಎಂಎಂ)ನ ಮುಖಂಡರಾದ ವಿ.ಶ್ರೀನಿವಾಸ ರಾವ್ ಮತ್ತು ಆಂಧ್ರ ಮಲಯಾದ್ರಿ ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈಗ ಮೋದಿ ಸರಕಾರ ಈ ಕಾಯ್ದೆಯ ಮೂಲಸ್ವರೂಪವನ್ನು ಉಳಿಸಿಕೊಳ್ಳುವ ಮಸೂದೆಯನ್ನು ತರುವುದಾಗಿ ಹೇಳಿದೆ. ಆದರೆ ಇನ್ನು ಮುಂದೆಯೂ ಈ ಕಾನೂನನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯದಂತೆ ತಡೆಯಲು ಇದನ್ನು ಸಂವಿಧಾನದ 9ನೇ ಶೆಡ್ಯೂಲ್ಲಲ್ಲಿ ಸೇರಿಸಬೇಕು ಎಂಬುದು ದಲಿತ ಸಂಘಟನೆಗಳ ಮತ್ತೊಂದು ಆಗ್ರಹ. ಸರಕಾರ ಈ ಆಗ್ರಹಕ್ಕೆ ಕಿವಿಗೊಟ್ಟಿಲ್ಲ.

ಈ ಕಾಯ್ದೆಗೆ ರಕ್ಷಣೆ ಬಲಗೊಳ್ಳಬೇಕಾದರೆ ಅದನ್ನು 9ನೇ ಶೆಡ್ಯೂಲಿನಲ್ಲಿ ಸೇರಿಸಲೇ ಬೇಕು, ಹಾಗೆ ಮಾಡುವ ವರೆಗೆ ಹೋರಾಟವನ್ನು ಮುಂದುವರೆಸಲಾಗುವುದು ಎಂದು ಡಿಎಸ್‌ಎಂಎಂ ಮುಖಂಡರು ಹೇಳಿದ್ದಾರೆ.

ಮುಂದಿನ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ವೇಳೆಗೆ ಮಹಿಳಾ ಮೀಸಲಾತಿ ಜಾರಿಗೆ ಬರಬೇಕು–ಲೋಕಸಭೆಯಲ್ಲಿ ಸಿಪಿಐ(ಎಂ) ಆಗ್ರಹ

ಮುಂದಿನ ವರ್ಷ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ವೇಳೆಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ 33% ಮಹಿಳಾ ಮೀಸಲಾತಿ ಜಾರಿಯಾಗುವಂತರ ಲೋಕಸಭೆಯಲ್ಲಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಪಾಸು ಮಾಡಬೇಕು ಎಂದು ಸಇಪಿಐ(ಎಂ) ಬಲವಾಗಿ ಆಗ್ರಹಿಸಿದೆ.

ಶೂನ್ಯವೇಳೆಯಲ್ಲಿ ಈ ವಿಷಯವನ್ನು ಎತ್ತಿದ ಸಿಪಿಐ(ಎಂ) ಸದಸ್ಯೆ ಪಿ ಕೆ ಶ್ರೀಮತಿ ಟೀಚರ್ ಲೋಕಸಭಾಧ್ಯಕ್ಷೆಯಾಗಿರುವ ಸುಮಿತ್ರಾ ಮಹಾಜನ್ ಅವರು ಮಧ್ಯಪ್ರವೇಶಿಸಿ ಸರಕಾರ ಈ ಮಸೂದೆಯನ್ನು ಎತ್ತಿಕೊಳ್ಳುವಂತೆ ಹೇಳಬೇಕು ಎಂದು ಕೇಳಿಕೊಂಡರು.

ಈ ಮಸೂದೆಯನ್ನು ಈಗಾಗಲೇ ರಾಜ್ಯಸಭೆ ಅಂಗೀಕರಿಸಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮಹಿಳೆಯರಿಗೆ ಸಮಾನ ಅವಕಾಶವನ್ನು ವಂಚಿಸಬೇಡಿ, ಎಂದು ಆಗ್ರಹಿಸಿದ ಸಿಪಿಐ(ಎಂ) ಸದಸ್ಯರು ಭಾರತೀಯ ಮಹಿಳೆಯರಿಗೆ ಸಮಾನ ಹಕ್ಕುಗಳು ದೊರೆಯುವಂತಾಗಲು ಕಾನೂನು ಅಗತ್ಯ ಎಂದರು. ಲೋಕಸಭೆಯಲ್ಲಿ ಮಹಿಳ ಅಸದಸ್ಯರು ಇಗ 11.7% ಮಾತ್ರ, ರಾಜ್ಯ ವಿಧಾನಸಭೆಗಳಲ್ಲೂ "ಲಿಂಗ ಅಸಮತೋಲನ" ಇದೆ. ಬಿಜೆಪಿ ನೇತೃತ್ವದ ಸರಕಾರ ಮಹಿಳೆಯರಿಗೆ ಬಹಳಷ್ಟು ಆಶ್ವಾಸನೆಗಳನ್ನು ನೀಡಿದೆ, ಆದರೆ ಅವು ಕ್ರಿಯೆಯಲ್ಲಿ ಕಾಣಿಸುತ್ತಿಲ್ಲ ಎಂದರು.

ಪ್ರಾದೇಶಿಕ ಅಸಮಾನತೆಗೆ, ಹಿಂದುಳಿದಿರುವಿಕೆಗೆ ಪ್ರತ್ಯೇಕ ರಾಜ್ಯ ಪರಿಹಾರವಲ್ಲ

ಸಂಪಾದಕೀಯ

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂಬ ಕೂಗು ಇದ್ದಕ್ಕಿದ್ದ ಹಾಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಾ ಬಣದಿದೆ. ಅಗಸ್ಟ್ 2ರಂದು ಉತ್ತರ ಕರ್ನಾಟಕದ ಜಿಲ್ಲೆಗಳ ಬಂದ್ ಗೆ ಕರೆ ಕೊಟ್ಟು ಅದು ವಿಫಲವಾಗಿದೆ. ಉತ್ತರ ಮತ್ತು ಇಡೀ ಕರ್ನಾಟಕದ ಜನ ಪ್ರತ್ಯೇಕತೆಯ ಪರವಾಗಿಲ್ಲ ಎಂಬುದು ಮತ್ತೆ ಸಾಬೀತಾಗಿದೆ ಎಂಬುದು ಸಮಾಧಾನಕರ ವಿಷಯ. ಈ ಕೂಗು ಮತ್ತು ಬಂದ್ ಹಿಂದೆ ಬಿಜೆಪಿಯ ಹತಾಶೆ, ಗೋಸುಂಬೆತನ, ಲೋಕಸಭಾ ಚುನಾವಣೆಗೆ ಯೋಜಿತ ತಂತ್ರ ಇವೆಲ್ಲಾ ಇವೆ ಎಂಬುದು ಸ್ಪಷ್ಟ. ಸಾಲದ್ದಕ್ಕೆ ಕುಮಾರಸ್ವಾಮಿ, ದೇವೇಗೌಡರು, ಎಚ್.ಕೆ.ಪಾಟೀಲ ಅಂಥವರ ಬೇಜವಾಬ್ದಾರಿ ಹೇಳಿಕೆಗಳೂ ಇವಕ್ಕೆ ಕಾರಣವಾಗಿವೆ ಎಂಬುದರ ಬಗ್ಗೆ ಅನುಮಾನವಿಲ್ಲ. ಮೂರೂ ಪಕ್ಷಗಳೂ ಇದಕ್ಕೆ ಜಾತಿ ಬಣ್ಣ ಕೊಡಲೂ ಪ್ರಯತ್ನಿಸಿವೆ. ಈ ಕೂಗು ಎಬ್ಬಿಸಿದ ಹಲವು ಬಿಜೆಪಿ ಶಾಸಕರು ಅವರು ಅಧಿಕಾರದಲ್ಲಿದ್ದಾಗ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕಿರುಬೆರಳು ಎತ್ತಿರಲಿಲ್ಲ ಎಂಬ ಟೀಕೆ ಸಹಜವಾಗಿಯೇ ಬಂದಿದೆ. ಆದರೆ ಪ್ರಾದೇಶಿಕ ಅಸಮಾನತೆಗೆ, ಕೆಲವು ಪ್ರದೇಶಗಳ ಹಿಂದುಳಿದಿರುವಿಕೆಗೆ ಪ್ರತ್ಯೇಕ ರಾಜ್ಯದ ಪರಿಹಾರದ ಕೂಗು ಎಬ್ಬಿಸಿ, ಇದಕ್ಕೆ ನಿಜವಾದ ಕಾರಣಗಳನ್ನು ಮರೆಮಾಚುವ, ನಿಜವಾದ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯುವ, ಜನರನ್ನು ಮರುಳು ಮಾಡುತ್ತಾ ಅಣಿ ನೆರೆಸುವ ರಾಜಕೀಯ ತಂತ್ರಕ್ಕೆ ಭಾರತದಲ್ಲಿ ದೀರ್ಘ ಇತಿಹಾಸವಿದೆ. ನಮ್ಮ ದೇಶದ ಬೂರ್ಜ್ವಾ–ಭೂಮಾಲಕ ಪಕ್ಷಗಳು ಈ ತಂತ್ರವನ್ನು ಬೇಕಾದಾಗಲೆಲ್ಲ ಬಳಸಿಕೊಂಡು ಬಂದಿದ್ದಾರೆ. ಬಿಜೆಪಿ (ಮತ್ತು ಅದರ ಹಿಂದಿನ ಅವತಾರವಾದ ಜನಸಂಘ) ಮೊದಲಿನಿಂದಲೂ 'ಪ್ರಬಲ ಕೇಂದ್ರ, ದುರ್ಬಲ ಸಣ್ಣ ರಾಜ್ಯಗಳು' ಧೋರಣೆ ತಳೆದಿವೆ. ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳು ತಮಗೆ ಅನುಕೂಲವಾದಂತೆ ಇದನ್ನು ಬೆಂಬಲಿಸುತ್ತಾ ಬಂದಿವೆ.

ಆದರೆ ಇಂತಹ ಪ್ರತ್ಯೇಕ ರಾಜ್ಯಗಳಾದ ನಂತರ ಜಾರ್ಖಂಡ್, ಛತ್ತಿಸಗಡ, ತೆಲಂಗಾಣ ರಾಜ್ಯಗಳ ಅನುಭವ ಈ ಪರಿಹಾರ ಬೊಗಳೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಈಗಾಗಲೇ ಹಿಂದುಳಿದ ಈ ಪ್ರದೇಶಗಳು ಪ್ರತ್ಯೇಕವಾದ ಮೇಲೆ ಇನ್ನಷ್ಟು ಸಂಪನ್ಮೂಲದ ಕೊರತೆ ಎದುರಿಸುತ್ತಾ ಕೇಂದ್ರ ಸರಕಾರದ ಎದುರು ಭಿಕ್ಷಾಪಾತ್ರೆ ಹಿಡಿದು ನಿಂತಿವೆ. ಈ ಕಾಲಾವಧಿಯಲ್ಲಿ ಕೇಂದ್ರ–ರಾಜ್ಯ ಹಣಕಾಸು ಸಂಬಂಧ ಮತ್ತು ಇತರ ಪ್ರಮುಖ ನೀತಿಗಳೂ ಬದಲಾವಣೆಯಾದ ಹಿನ್ನೆಲೆಯಲ್ಲಿ ಮುನ್ನಡೆ ಸಾಧಿಸುವ ಬದಲು ಹಿನ್ನಡೆ ಕಂಡಿವೆ. ನಮ್ಮ ನೆರೆಯ ತೆಲಂಗಾಣ–ಆಂಧ್ರ ವಿಭಜನೆಯ ಪರಿಣಾಮವನ್ನು ಪ್ರತ್ಯೇಕ ರಾಜ್ಯದ ಕೂಗು ಎಬ್ಬಿಸುವವರು ವಿಶೇಷವಾಗಿ ಗಮನಿಸಬೇಕು. ವಿಭಜನೆಯ ನಂತರ ರಾಜ್ಯದ ಸಂಪನ್ಮೂಲಗಳ ವಿಭಜನೆಯ ತೊಡಕುಗಳಿಂದಾಗಿ ಮತ್ತು ಕೇಂದ್ರದ ವಿಶೇಷ ಪ್ಯಾಕೇಜು ಬರದ ಕಾರಣ, ಅಭಿವೃದ್ಧ ಪ್ರದೇಶವೆಂದು ಪರಿಗಣಿತವಾಗಿದ್ದ ಆಂಧ್ರ ಪ್ರದೇಶದ ಸರಕಾರಕ್ಕೆ ತನ್ನ ನೌಕರರಿಗೆ ವೇತನ ಕೊಡಲೂ ಕಾಸಿಲ್ಲದಂತಾಗಿದೆ! ಆ ರಾಜ್ಯದ ಪಾರ್ಲಿಮೆಂಟ್ ಸದಸ್ಯರು ರಾಜಿನಾಮೆ ಕೊಟ್ಟು ತಮ್ಮ ರಾಜ್ಯ ಸಮಸ್ಯೆಗಳತ್ತ ಕೇಂದ್ರದ ಗಮನ ಸೆಳೆಯುವ ಸ್ಥಿತಿಗೆ ಬಂದಿದ್ದಾರೆ. ತೆಲಂಗಾಣದ ಹಿಂದುಳಿದ ಜಿಲ್ಲೆಗಳೇನೂ ಅಭಿವೃದ್ಧಿಯಾಗುವ ಲಕ್ಷಣಗಳಿಲ್ಲ. ಯಾಕೆಂದರೆ ನಿಜವಾದ ಸಮಸ್ಯೆ 'ಅಭಿವೃದ್ಧಿ' ಮತ್ತು 'ಸಂಪನ್ಮೂಲ'ಗಳು ಹೈದರಾಬಾದು ನಗರ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದು. ಕಾರ್ಪೊರೇಟ್ ಗಳಿಗೆ ಹೈದರಾಬಾದಿನ ಬೆಳವಣಿಗೆ ಮಾತ್ರ ಆಸಕ್ತಿ ಇರುವಂಥದ್ದು. ಎರಡೂ ರಾಜ್ಯ ಸರಕಾರಗಳೂ ಕೇಂದ್ರದ ಅಥವಾ ಕಾರ್ಪೊರೇಟ್ ಗಳ ಮೊರೆ ಹೋಗುವ ಪರಿಸ್ಥಿತಿ.

ಕರ್ನಾಟಕದಲ್ಲೂ ಹಿಂದುಳಿದಿರುವಿಕೆ ಒಂದು ಇಡೀ ಪ್ರದೇಶಕ್ಕೆ ವ್ಯಾಪಿಸಿಲ್ಲ. ಇಡೀ ಉತ್ತರ ಕರ್ನಾಟಕ ಹಿಂದುಳಿದಿದೆ ಎನುವ ಹಾಗಿಲ್ಲ ಅಥವಾ ಇಡೀ ದಕ್ಷಿಣ ಕರ್ನಾಟಕ ಅಭಿವೃದ್ಧಿ ಹೊಂದಿದೆ ಎನ್ನುವಂತಿಲ್ಲ. ಯಾಕೆಂದರೆ ಅವಿಭಜಿತ ಕೋಲಾರ ಮತ್ತು ತುಮಕೂರಿನ ಹಲವು ಪ್ರದೇಶಗಳು ಬಹಳ ಹಿಂದುಳಿದಿವೆ. 'ಅಭಿವೃದ್ಧ' ಬೆಂಗಳೂರಿನಲ್ಲೇ ಹಲವು ಪ್ರದೇಶಗಳು, ವರ್ಗಗಳು ಬಹಳ ಹಿಂದುಳಿದಿವೆ. ಇಲ್ಲಿ ಅಭಿವೃದ್ಧಿ ಅಥವಾ ಹಿಂದುಳಿದಿರುವಿಕೆ ಗಮನಿಸುವಾಗ ಮೂರು – ಮೂಲ ಸೌಕರ್ಯಗಳ ಒದಗಿಸುವಿಕೆ, ಆರ್ಥಿಕ ಬೆಳವಣಿಗೆ ಮತ್ತು ಮಾನವ ಅಭಿವೃದ್ಧಿ – ಪ್ರಮುಖ ಭಾಗಗಳನ್ನು ಗುರುತಿಸಬಹುದು. ಇವು ಮೂರೂ ಸ್ವತಂತ್ರವಾದವೂ ಹೌದು, ಅವುಗಳಿಗೆ ಪರಸ್ಪರ ಸಂಬಂಧವಿದೆ ಕೂಡಾ. ಸಾಮಾನ್ಯವಾಗಿ ಮೊದಲ ಎರಡು 'ಅಭಿವೃದ್ಧಿ'ಗಳ ಬಗ್ಗೆ ಮಾತ್ರ ಚರ್ಚೆಯಾಗುತ್ತಿದ್ದು, ಮೂರನೇಯದು ಚರ್ಚೆಗೆ ಬರುವುದಿಲ್ಲ. ಯಾಕೆಂದರೆ ಮಾನವ ಅಭಿವೃದ್ಧಿಗೆ ವರ್ಗ–ಜಾತಿಗಳ ಸಾಮಾಜಿಕ–ಆರ್ಥಿಕ ಆಯಾಮಗಳಿವೆ. ಆದರೆ ನಿಜವಾದ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿ ಸೂಚಕಗಳಿಂದ ಮಾತ್ರ ಅಳೆಯಲು ಸಾಧ್ಯ.

ಕರ್ನಾಟಕದ ಪ್ರಾದೇಶಿಕ ಅಸಮಾನತೆಗೆ ಏಕೀಕರಣ–ಪೂರ್ವ ಅಭಿವೃದ್ಧಿ ಮಟ್ಟದಲ್ಲಿ ವಿಷಮತೆಯೇ ಮೂಲಕಾರಣ. ಮುಂಬಯಿ, ಮದ್ರಾಸ್ ನ ಬ್ರಿಟಿಶ್ ನೇರ ಆಡಳಿತದ ಪ್ರೆಸಿಡೆನ್ಸಿಗಳು, ಮೈಸೂರು, ಹೈದರಾಬಾದು ಮತ್ತಿತರ ರಾಜರುಗಳ ಸಂಸ್ಥಾನಗಳ ಪ್ರದೇಶಗಳಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಮತ್ತು ಪಾಳೆಯಗಾರಿ ಪದ್ಧತಿಯ ಹಿಡಿತದ ಮಟ್ಟದ ಆಧಾರದ ಮೇಲೆ ವಿಷಮತೆಗಳಿದ್ದವು. ಏಕೀಕರಣದ ನಂತರದ ಆರು ದಶಕಗಳ ನಂತರವೂ ಅವು ಬಹುಪಾಲು ಮುಂದುವರೆದಿವೆ. ಪಾಳೆಯಗಾರಿ ಪದ್ಧತಿಯನ್ನು ಆಮೂಲಾಗ್ರವಾಗಿ ಕಿತ್ತು ಹಾಕದೆ ಬಂಡವಾಳಶಾಹಿ ಬೆಳವಣಿಗೆಗೆ ಪ್ರಯತ್ನವೇ, ಈ ಅಸಮಾನತೆಗಳು ಉಳಿಯಲು ಕೆಲವು ವಿಷಯಗಳಲ್ಲಿ ಬೆಳೆಯಲು ಕಾರಣ. ಯಾಕೆಂದರೆ ಎಲ್ಲಾ ರೀತಿಯ (ಪ್ರಾದೇಶಿಕ, ವರ್ಗವಾರು, ಜಾತಿವಾರು, ಲಿಂಗವಾರು) ಅಸಮಾನ ಬೆಳವಣಿಗೆ ಬಂಡವಾಳಶಾಹಿಯ ಮೂಲ ಸ್ವಭಾವ. ಬ್ರಿಟಿಶ್ ವಸಾಹತುಶಾಹಿಯ ಅವಧಿಯಲ್ಲಿ ಅವರ ಆಡಳಿತ ಮತ್ತು ಆರ್ಥಿಕ ಹಿತಾಸಕ್ತಿಗೆ ಸೀಮಿತವಾಗಿತ್ತು. ಉದಾಹರಣೆಗೆ ಗಣಿ ಇತ್ಯಾದಿ ಪ್ರಾಕೃತಿಕ ಸಂಪತ್ತು, ಕಾರ್ಖಾನೆ, ಮಿಲಿಟರಿ ತಂಗುದಾಣಗಳ ಸಂಪರ್ಕಕ್ಕೆ ಸೀಮಿತವಾದ ರೈಲು–ರೋಡು ಬೆಳವಣಿಗೆ.

ಸ್ವಾತಂತ್ರ್ಯದ ನಂತರ ಭಾರತದ ಗುತ್ತೇದಾರಿ ಬಂಡವಾಳಶಾಹಿಯ ಹಿತಾಸಕ್ತಿಗಳಿಗೆ ಸೀಮಿತವಾದ ಬೆಳವಣಿಗೆ ಆಗಿದೆ. 1970ರ ದಶಕದ ವರೆಗೆ ಸ್ವಾತಂತ್ರ್ಯ ಚಳುವಳಿಯ ಆಶಯಗಳ ಒತ್ತಡದಲ್ಲಿ ಪ್ರಾದೇಶಿಕ ಅಸಮಾನತೆ, ಪಾಳೆಯಗಾರಿಯ ಹಿಡಿತ ಕಡಿಮೆ ಮಾಡುವ ಅಭಿವೃದ್ಧಿಯನ್ನು ಯೋಜಿಸುವ ಯೋಜನಾ ಆಯೋಗದಿಂದ ಸ್ವಲ್ಪ ಮಟ್ಟಿಗಾದರೂ ಅಸಮಾನತೆ ಕಡಿಮೆಯಾಗುತ್ತಾ ನಡೆದಿತ್ತು. ಆದರೆ ಬರಬರುತ್ತಾ ಉದಾರೀಕರಣದಿಂದ ಅದರ ಅಧಿಕಾರ ಕುಗ್ಗುತ್ತಾ ಈಗ ಅದು ಇಲ್ಲವಾಗಿದೆ. ಈಗ ನವ–ಉದಾರೀಕರಣದ ನೀತಿಗಳ ಫಲವಾಗಿ ಸಾರ್ವಜನಿಕ ರಂಗದಲ್ಲಿ ಕೈಗಾರಿಕೆ, ಕೃಷಿ, ಆರೋಗ್ಯ, ಶಿಕ್ಷಣಗಳಿಗೆ ಯೋಜಿತ ಬೆಳವಣಿಗೆ ಹೋಗಿ, ಎಲ್ಲಾ ಈ ನೀತಿಗಳ ಮೇಲೆ ಕಾರ್ಪೊರೇಟ್ ಹಿಡಿತ ಬಲವಾಗಿದೆ. ರಾಜ್ಯಗಳ ಹಣಕಾಸು ಪರಿಸ್ಥಿತಿ ಬಿಗಡಾಯಿಸುತ್ತಾ ಹೋಗಿ ಜಿ.ಎಸ್.ಟಿ. ಜಾರಿಯ ನಂತರ ಕೇಂದ್ರ ಸರಕಾರದ ಮರ್ಜಿಯ ಮೇಲೆ, ಕೇಂದ್ರ ಸರಕಾರದ ಮೇಲೆ ಹೇರಬಹುದಾದ ರಾಜಕೀಯ ಒತ್ತಡದ ಮೇಲೆ ಆಧಾರಿತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತ್ಯೇಕ ಸಣ್ಣ ರಾಜ್ಯ ಅಸಮಾನತೆಗೆ ಪರಿಹಾರವೆಂಬುದು ಹಾಸ್ಯಾಸ್ಪದ ಮಾತ್ರವಲ್ಲ, ಶುದ್ಧ ಮೋಸದ ರಾಜಕಾರಣ.

ಕರ್ನಾಟಕದ ಪ್ರಾದೇಶಿಕ ಅಸಮಾನತೆ ಮತ್ತು ಹಿಂದುಳಿದಿರುವಿಕೆಯ ಸಮಸ್ಯೆ ಅರ್ಥ ಮಾಡಿಕೊಳ್ಳಲು ಮತ್ತು ಪರಿಹರಿಸಲು ಸ್ವಲ್ಪವಾದರೂ ವಾಸ್ತವಿಕ ನೆಲೆ ಹಾಕಿಕೊಟ್ಟದ್ದು ನಂಜುಂಡಪ್ಪ ಸಮಿತಿಯ ವರದಿ. ಅದರಲ್ಲಿ ಗುರುತಿಸಿದ ಎಲ್ಲಾ 114 ತಾಲೂಕುಗಳು ಉತ್ತರ ಅಥವಾ ಹೈದರಾಬಾದ್ ಕರ್ನಾಟಕದಲ್ಲಿ ಇಲ್ಲ. 11 ವರ್ಷಗಳ ಅವಧಿಯಲ್ಲಿ ನಂಜುಂಡಪ್ಪ ಸಮಿತಿಯ ವರದಿ ಜಾರಿಯ ಮೌಲ್ಯಮಾಪಕ ಅಧ್ಯಯನ ಕೈಗೊಂಡ ಕೆ.ಇ.ಎ. ಇತ್ತೀಚೆಗೆ ಸಲ್ಲಿಸಿದ ವರದಿಯ ಪ್ರಕಾರ, ಕೇವಲ 26 ತಾಲೂಕುಗಳು 'ಹಿಂದುಳಿದಿರುವಿಕೆ'ಯಿಂದ ಹೊರ ಬಂದಿವೆ; ಆದರೆ 8 ಹೊಸ ತಾಲೂಕುಗಳು 'ಹಿಂದುಳಿದಿರುವಿಕೆ'ಗೆ ಜಾರಿವೆ ಎಂದು ವರದಿಯಾಗಿದೆ. ನಂಜುಂಡಪ್ಪ ಸಮಿತಿಯ ವರದಿಯ ಪ್ರಾಮಾಣಿಕ ಜಾರಿ ಸ್ವಲ್ಪ ಮಟ್ಟಿಗೆ ಪ್ರಾದೇಶಿಕ ಅಸಮಾನತೆಗೆ ಪರಿಹಾರ ಕೊಡಬಲ್ಲುದು. ಆದರೆ ಮೇಲೆ ಹೇಳಿದ ಮೂಲಕ್ಕೆ ಹೋಗದೆ ಇದಕ್ಕೆ ಪೂರ್ಣ ಪರಿಹಾರ ಸಾಧ್ಯವಿಲ್ಲ. ಅಸಮಾನತೆ ಹಿಂದುಳಿದಿರುವಿಕೆ ಹೋಗಲಾಡಿಸದೆ, ಇನ್ನೂ ಹೆಚ್ಚಲು ಕಾರಣವಾಗಿರುವ ನವ–ಉದಾರವಾದಿ ನೀತಿಗಳನ್ನು ಬಿಟ್ಟು, ಅದಕ್ಕೆ ಎಡ–ಪ್ರಜಾಸತ್ತಾತ್ಮಕ ಪರ್ಯಾಯ ನೀತಿಗಳನ್ನು ರೂಪಿಸಿ ಮಂಡಿಸುವುದು, ಇದನ್ನು ಜನತೆಗೆ ಮನವರಿಕೆ ಮಾಡುವುದು, ಜಾರಿಗೆ ಪ್ರಯತ್ನಿಸುವ ಮೂಲಕ ಮಾತ್ರ ಪರಿಹಾರ ಸಾಧ್ಯ. ಇದು ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯ. ●

ಪ್ರತ್ಯೇಕ ರಾಜ್ಯ ತಿರಸ್ಕರಿಸಿ ! ಅಗಸ್ಟ್ 2 ಬಂದ್ ಕರೆ ವಿಫಲಗೊಳಿಸಿ !!

ಕರ್ನಾಟಕವನ್ನು ಒಡೆದು ಎರಡು ರಾಜ್ಯಗಳನ್ನಾಗಿಸುವ ಬೇಜವಾಬ್ದಾರಿ ಅಭಿಪ್ರಾಯವನ್ನೂ ಅಗಸ್ಟ್ 1 ರಂದು ನೀಡಿದ ಹೇಳಿಕೆಯಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ರಾಜ್ಯದ ಜನತೆ ಒಕ್ಕೊರಲಿನಿಂದ ರಾಜ್ಯ ಒಡೆಯುವ ಈ ಯೋಚನೆಯನ್ನು ತಿರಸ್ಕರಿಸುವಂತೆ ಮತ್ತು ಈ ಕುರಿತು ಅಗಸ್ಟ್ 2 ರಂದು ಕರೆ ನೀಡಲಾದ ಉತ್ತರ ಕರ್ನಾಟಕದ ಜಿಲ್ಲೆಗಳ ಬಂದ್‌ನ್ನು ವಿಫಲಗೊಳಿಸುವಂತೆಯೂ ಕರೆ ನೀಡಿದೆ!

ಕರ್ನಾಟಕವನ್ನು ಒಡೆದು ಎರಡು ರಾಜ್ಯಗಳನ್ನಾಗಿಸುವುದರಿಂದ ಅದು ಒಟ್ಟು ಅಖಂಡ ಕರ್ನಾಟಕದ ಅಭಿವೃದ್ಧಿಗೆ ಪೂರಕವಾಗುವುದರ ಬದಲು ಮಾರಕವಾಗಲಿದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಸಣ್ಣ ರಾಜ್ಯಗಳ ಕಲ್ಪನೆ, ಭಾರತದ ಒಕ್ಕೂಟವಾದಿ ವ್ಯವಸ್ಥೆಯನ್ನೂ ತಿರಸ್ಕರಿಸುವ ಮತ್ತು ಕೇಂದ್ರ ಸರ್ಕಾರದ ಕೃಪಾಕಟಾಕ್ಷದ ಮೇಲೆ ಈ ರಾಜ್ಯಗಳು ಅವಲಂಭಿಸುವ ಪರಿಸ್ಥಿತಿಯನ್ನು ನಿರ್ಮಿಸಲಿದೆ ಎಂಬುದು ದೇಶದ ಅನುಭವವಾಗಿದೆ! ಆದ್ದರಿಂದ ಕರ್ನಾಟಕ ಒಡೆಯುವುದು ಸಾಧುವಾಗಿಲ್ಲ. ರಾಜ್ಯವನ್ನ ವಿಭಜಿಸಿ ಚಿಕ್ಕ ಚಿಕ್ಕ ರಾಜ್ಯಗಳಾಗಿ ಒಡೆಯುವುದು ಕೇಂದ್ರ ಸರ್ಕಾರದ ಸರ್ವಾಧಿಕಾರವನ್ನೂ ಸಣ್ಣ ರಾಜ್ಯಗಳ ಮೇಲೆ ಹೇರುವ ಸಾಧನವಾಗಲಿದೆ! ಎಂಬುದನ್ನು ರಾಜ್ಯದ ಜನತೆ ಗಂಭೀರವಾಗಿ ಪರಿಗಣಿಸಬೇಕಾಗಿದೆ!.

ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಶಾಸಕರ ಮೂಲಕ ರಾಜ್ಯದ ಜನರ ಗಮನವನ್ನು ಅವರನ್ನು ಭಾಧಿಸುವ ತೀವ್ರ ಸಮಸ್ಯೆಗಳಿಂದ ಬೇರೆಡೆ ತಿರುಗಿಸಿ ಚುನಾವಣಾ ಲಾಭ ಪಡೆಯುವ ತಂತ್ರದಿಂದ ಕೂಡಿದೆಯೆಂಬುದನ್ನು ರಾಜ್ಯದ ಜನತೆ ಗಮನಿಸಬೇಕಾಗಿದೆ.

ಉತ್ತರ ಕರ್ನಾಟಕದ ಹಿಂದುಳಿದಿರುವಿಕೆಯ ಕುರಿತಂತೆ ದೇವೆಗೌಡರ ಮತ್ತು ಹೆಚ್.ಕೆ. ಪಾಟೀಲರ್ ಹೇಳಿಕೆಗಳು – ಜವಾಬ್ದಾರಿಯಿಂದ ಕೂಡಿದವುಗಳಾಗಿಲ್ಲ. ಬದಲಿಗೆ ಅವು ಪ್ರತ್ಯೇಕ ರಾಜ್ಯ ಬೇಡಿಕೆಗೆ ಕುಮ್ಮಕ್ಕು ನೀಡಿವಂತಿವೆ. ಇವೆಲ್ಲವೂ ಖಂಡನಾರ್ಹವಾಗಿವೆ.

ನಿಜಾ! ರಾಜ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಳೆದ 70 ವರ್ಷಗಳ ಆಡಳಿತಗಳು ಪ್ರಾದೇಶಿಕ ಅಸಮತೋಲನಗಳನ್ನು ನಿರ್ಮಿಸಿವೆ. ಅದಕ್ಕಾಗಿ ಅದರ ನಿವಾರಣೆಗಾಗಿ ಅಗತ್ಯ ಕ್ರಮಗಳನ್ನು ವಹಿಸಬೇಕೆಂಬ ಹಕ್ಕೊತ್ತಾಯಗಳು ಮಂಡನೆಯಾಗಬೇಕೇ ಹೊರತು ಕರ್ನಾಟಕವನ್ನು ಒಡೆಯುವ ಹಕ್ಕೊತ್ತಾಯವಲ್ಲ!

ಈ ಹಿನ್ನೆಲೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಅಗತ್ಯ ಕ್ರಮಗಳನ್ನೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಹಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತದೆ.

ಅದೇ ರೀತಿ, ಪ್ರತ್ಯೇಕ ರಾಜ್ಯದ ವಿಚಾರವನ್ನು ಬಲವಾಗಿ ವಿರೋಧಿಸುತ್ತದೆ!

(ಅಗಸ್ಟ್ 1, 2018) ●

ಮಾಲೂರು ವಿದ್ಯಾರ್ಥಿನಿ ಮೇಲೆ ಬರ್ಬರ ಅತ್ಯಾಚಾರ–ಕೊಲೆ

ಭುಗಿಲೆದ್ದ ಆಕ್ರೋಶ: ತೀವ್ರ ಹೋರಾಟ







ಕೋಲಾರ ಜಿಲ್ಲೆಯ ಮಾಲೂರು ಪಟ್ಟಣದ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ಖಂಡಿಸಿ ಜಿಲ್ಲೆಯಾದ್ಯಂತ ಆಕ್ರೋಶ ಭುಗಿಲೆದ್ದಿದ್ದು, ವಿದ್ಯಾರ್ಥಿಗಳು ಮತ್ತು ವಿವಿಧ ಸಂಘಟನೆಗಳ ಸದಸ್ಯರು ಅಗಸ್ಟ್ 2ರಂದು ಬೀದಿಗಿಳಿದು ಬೃಹತ್ ಹೋರಾಟ ನಡೆಸಿದರು.

ಮಾಲೂರು ಪಟ್ಟಣದಲ್ಲಿ ಬೆಳಿಗ್ಗೆ ಅಂಗಡಿಗಳನ್ನು ಮುಚ್ಚಿ ವಹಿವಾಟು ಸ್ಥಗಿತಗೊಳಿಸಲಾಗಿತ್ತು. ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್, ಆಟೊಗಳು ಕೆಲ ಹೊತ್ತು ರಸ್ತೆಗಿಳಿಯಲಿಲ್ಲ. ಪಟ್ಟಣದಲ್ಲಿ ಅಘೋಷಿತ ಬಂದ್ ವಾತಾವರಣವಿತ್ತು. ಖಾಸಗಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಸರ್ಕಾರಿ ಶಾಲಾ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಆಕ್ರೋಶ ವ್ಯಕ್ತಪಡಿಸಿದರು. ತಾಲ್ಲೂಕು ಕ್ರೀಡಾಂಗಣದ ಬಳಿ ಸೇರಿದ ವಿದ್ಯಾರ್ಥಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಮೆರವಣಿಗೆ ಬಂದು ರಸ್ತೆ ತಡೆ ಮಾಡಿದರು.

‘ಪ್ರಕರಣದ ಬಗ್ಗೆ ಉನ್ನತ ತನಿಖೆ ನಡೆಸಬೇಕು. ಆರೋಪಿಗಳನ್ನು ಶೀಘ್ರವೇ ಬಂಧಿಸಬೇಕು’ ಎಂದು ಪಟ್ಟು ಹಿಡಿದ ಪ್ರತಿಭಟನಾಕಾರರು ಪೊಲೀಸರು ಹಾಗೂ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪೊಲೀಸರು ಪ್ರತಿಭಟನಾಕಾರರ ಮನವೊಲಿಕೆಗೆ ನಡೆಸಿದ ಪ್ರಯತ್ನ ವಿಫಲವಾಯಿತು. ಮತ್ತೊಂದು ಗುಂಪು ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿತು.

ಜಿಲ್ಲಾ ಕೇಂದ್ರ, ಮುಳಬಾಗಿಲು, ಶ್ರೀನಿವಾಸಪುರ ಹಾಗೂ ಬಂಗಾರಪೇಟೆಯಲ್ಲೂ ಎಸ್.ಎಫ್.ಐ., ಜನವಾದಿ ಮಹಿಳಾ ಸಂಘಟನೆ, ರೈತ ಸಂಘ ಮತ್ತು ಹಸಿರು ಸೇನೆ, ಮತ್ತಿತರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಕೊಲೆಗಾರನ ಬಂಧನ

ಮಾಲೂರು ಪಟ್ಟಣದ ಬಿಜಿಎಸ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿಯನ್ನು ಅತ್ಯಾಚಾರಕ್ಕೆ ಯತ್ನಿಸಿ ಕೊಲೆಗೈದ ಕಾಮುಕನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತ ರಂಜಿತ್ (22) ಎನ್ನುವವನಾಗಿದ್ದು, ಮಾಲೂರು ಮೂಲವದವನೇ ಆಗಿದ್ದಾನೆ ಎಂದು ತಿಳಿದು ಬಂದಿದೆ. ಮೃತ ಬಾಲಕಿಯ ಮನೆಯ ಬಳಿ ಗಾರೆ ಕೆಲಸಕ್ಕೆ ಆಗಮಿಸುತ್ತಿದ್ದ ಎಂದು ಹೇಳಲಾಗಿದೆ.

ಆರೋಪಿಯ ರೇಖಾ ಚಿತ್ರ ಬರೆದು ಪೊಲೀಸರು ಕಾರ್ಯಾಚರಣೆಗಿಳಿದಿದ್ದರು. ಅದರನ್ವಯ ಇಬ್ಬರು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆಯನ್ನೂ ನಡೆಸಿದ್ದರು ಎಂದು ತಿಳಿದು ಬಂದಿದೆ.

ಬಂಧಿತ ರಂಜಿತ್ ಬಾಲಕಿಯ ಬಳಿ ಪ್ರೀತಿ ನಿವೇದನೆ ಮಾಡಿಕೊಂಡಿದ್ದು, ತಿರಸ್ಕರಿಸಿದ ಕಾರಣಕ್ಕಾಗಿ ಬರ್ಬರವಾಗಿ ಹತ್ಯೆಗೈದಿದ್ದಾನೆ ಎಂದೂ ಹೇಳಲಾಗಿದೆ. ಈ ಬಗ್ಗೆ ಪೊಲೀಸ್ ತನಿಖೆ ನಡೆಯುತ್ತಿದ್ದು ನಿಖರ ಕಾರಣ ಇನ್ನಷ್ಟೇ ತಿಳಿದು ಬರಬೇಕಿದೆ.

ಮೂಲೂರು ತಾಲೂಕಿನಲ್ಲಿ ಅತ್ಯಂತ ಕರಾಳ ಎನ್ನುವ ಬಾಲಕಿ ಕೊಲೆ ಪ್ರಕರಣವನ್ನು ತೀವ್ರವಾಗಿ ಖಂಡಿಸಿದ ಹಲವು ಸಂಘಟನೆಗಳ ಮುಖಂಡರು, ಕೃಷಿಕ ಸಮಾಜದಲ್ಲಿ ಸಭೆ ನಡೆಸಿ ಅಗಸ್ಟ್ 4ರಂದು ಮಾಲೂರು ತಾಲೂಕು ಬಂದ್ ನಡೆಸಲು ತೀರ್ಮಾನಿದ್ದರು.

ಮಾಲೂರಿನ ಇಂದಿರಾ ನಗರದ ವಾಸಿ ಸ್ಥಳೀಯ ಕಾರ್ಖಾನೆಗಳಲ್ಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ದಂಪತಿಯ 15ರ ಹರೆಯದ ಪುತ್ರಿ ಪಟ್ಟಣದ ಬಿಜಿಎಸ್ ಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಶಾಲೆಯಲ್ಲಿ ನಡೆದ ಕ್ರೀಡೆಗಳಲ್ಲಿ ಭಾಗವಹಿಸಿ ಪಕ್ಕದ ಇಂದಿರಾ ನಗರಕ್ಕೆ ಕಾಲ್ನಡಿಗೆಯಲ್ಲಿ ತನ್ನ ಗೆಳತಿಯೊಂದಿಗೆ ನಡೆದು ಕೊಂಡು ಹೋಗುತ್ತಿದ್ದಳು.

ಈ ವೇಳೆ ರೈಲ್ವೆ ಸೇತುವೆ ಬಳಿ ಬಾಲಕಿಯನ್ನು ಅಡ್ಡಗಟ್ಟಿದ ದುಷ್ಕರ್ಮಿ ಆಕೆಯ ಬಟ್ಟೆಗಳನ್ನು ಹರೆದು ದುಷ್ಕೃತ್ಯ ಎಸಗಿದ್ದ. ಈ ವೇಳೆ ಜತೆಯಲ್ಲಿದ್ದ ಇನ್ನೊಬ್ಬ ವಿದ್ಯಾರ್ಥಿನಿ ಕಿರುಚಿಕೊಂಡು ಓಡಿಹೋಗಿದ್ದಳು.

ಆಗ ಅರೆಬರೆ ಬಟ್ಟೆಯಲ್ಲಿ ಓಡಿ ಹೋಗಲು ಮುಂದಾದ ಬಾಲಕಿ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಿ ಆರೋಪಿ ತಲೆ ಮರೆಸಿಕೊಂಡಿದ್ದ.





ನಾಳಿನ ಕಾರ್ಯಕ್ರಮಗಳು

ಸಾರಿಗೆ ಮುಷ್ಕರ ಅಗಸ್ಟ್ 7
AIRTWF, FKARDU, CITU

ಬೀಡಿ ಕಾರ್ಮಿಕರ ಅನಿರ್ದಿಷ್ಟ ಪ್ರತಿಭಟನೆ, ಅಗಸ್ಟ್ 7 ರಿಂದ
ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್

ರೈತರ ಜೈಲು ಭರೋ ಅಗಸ್ಟ್ 9
ದೇಶವ್ಯಾಪಿ, ರೈತ ಕೃಷಿಕೂಲಿಕಾರ ಸಂಘಟನೆಗಳು

ಅಹೋರಾತ್ರಿ ಸಾಮೂಹಿಕ ಜಾಗರಣೆ ಅಗಸ್ಟ್ 14
ಸಿಐಟಿಯು, ತಾಲೂಕು/ಜಿಲ್ಲಾ ಕೇಂದ್ರಗಳಲ್ಲಿ

ಮಾರ್ಕ್ಸ್200–ಕ್ಯಾಪಿಟಲ್150, ಅಗಸ್ಟ್ 19, ಮಂಗಳೂರು
ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ ‘ಮಾರ್ಕ್ಸ್ ಎಂದಿಗೂ ಪ್ರಸ್ತುತ’

ಮಜದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಸೆಪ್ಟೆಂಬರ್ 5
ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ಇದು ನೆಮ್ಮದಿಯಲ್ಲ... ನಿಟ್ಟುಸಿರು.

ವಿದ್ಯಾರ್ಥಿ ಸಮುದಾಯದ ಮತ್ತು ಜನತೆಯ ಸಿಡಿಲಬ್ಬರದ ಹೋರಾಟ, ಕಾಮಾಂಧ ಕೊಲೆಗಡುಕರಿಗೆ ಕಠಿಣ ಶಿಕ್ಷೆಯಾಗಬೇಕೆಂಬ ಮಾನವೀಯ ಮನಸ್ಸುಗಳ ಹಾರೈಕೆಗಳು. ಸರ್ವಜನರ ಸಿಟ್ಟು, ಆಕ್ರೋಶ ಕ್ಕೆ ತುತ್ತಾಗಿದ್ದ ಪೋಲಿಸ್ ಇಲಾಖೆ ವಿಶೇಷ ತನಿಖಾ ತಂಡ ರಚಿಸಿ ಚುರುಕಿನ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಇದರಿಂದ ನ್ಯಾಯಕ್ಕಾಗಿ ಹೋರಾಡಿದ, ಧ್ವನಿ ಎತ್ತಿದ ಪ್ರತಿಯೊಬ್ಬರು ನೆಮ್ಮದಿಯ ನಿಟ್ಟುಸಿರು ಬಿಟ್ಟಿರಬಹುದು....!

ಆದರೆ ಈ ವ್ಯವಸ್ಥೆಯಲ್ಲಿ ಇಂತಹ ಘಟನೆಗಳು ಇಲ್ಲಿಗೆ ಕೊನೆಯಾಗುತ್ತಾದೇಯೇ...? ಎಂಬ ಆತಂಕದ ಪ್ರಶ್ನೆ ಮನದಲ್ಲಿ ಮುಳ್ಳಾಗಿ ಚುಚ್ಚುತ್ತಲಿದೆ...! ಮುಂದೇನು ಎಂಬ ಪ್ರಶ್ನೆ ಎಲ್ಲರನ್ನೂ ಕಾಡಬೇಕು... ಈ ವ್ಯವಸ್ಥೆಯ ಬದಲಾವಣೆಗಾಗಿ ಹಂಬಲಿಸಬೇಕು, ದುಡಿಯಬೇಕು. ಇಲ್ಲದಿದ್ದರೆ ಮುಂದೆ ಮತ್ತೆ ನಾವು ಕಂದಮ್ಮಗಳ ರಕ್ಷಣೆಗಾಗಿ ಕಣ್ಣೀರು ಸುರಿಸಿ ತಲ್ಲಣಿಸಲು ಸಿದ್ದರಿರಬೇಕು..

ನೆನಪಿರಲಿ ಇದು ನೆಮ್ಮದಿಯಲ್ಲ... ನಿಟ್ಟುಸಿರು ಅಷ್ಟೇ..?

– ಗುರುರಾಜ ದೇಸಾಯಿ,
ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ

ವಿದ್ಯಾರ್ಥಿ ರೌಡಿಶೀಟರ್: ರಾಯಚೂರಿನಲ್ಲಿ ಜಿಂದಾಲ್ ಕಮಾಲ್

ಕಾಲೇಜು ವಿದ್ಯಾರ್ಥಿ, ಅದರಲ್ಲೂ ಹೋರಾಟದ ದಾರಿ ತುಳಿದ ವಿದ್ಯಾರ್ಥಿ, ರೌಡಿ ಆಗೋಕೆ ಸಾಧ್ಯನಾ? ಇದು ರಾಯಚೂರಿನಲ್ಲಿ ರಾಜಕೀಯ ಪುಡಾರಿಗಳ ಕುತಂತ್ರದಿಂದ ನಡೆದ ಇದಕ್ಕೆ ತಕ್ಕ ಉತ್ತರ ನೀಡುತ್ತದೆ ಎಸ್.ಎಫ್.ಐ.

ಕಾಲೇಜು ಓದಿನ ಜೊತೆಯಲ್ಲಿ ವಿದ್ಯಾರ್ಥಿ ಸಂಘಟನೆ ಕಟ್ಟಿ ಶೈಕ್ಷಣಿಕ ಸಮಸ್ಯೆ, ಸಾಮಾಜಿಕ ಅನ್ಯಾಯಗಳ ವಿರುದ್ದ ಹೋರಾಟಗಳನ್ನು ನಡೆಸುತ್ತಾ ಸದಾ ಕ್ರಿಯಾಶೀಲರಾಗಿರುವ ನಮ್ಮ ಸಂಗಾತಿಗಳಾದ ಜಿಲ್ಲಾಧ್ಯಕ್ಷ ಶಿವಕುಮಾರ ಮ್ಯಾಗಲಮನಿ, ಲಿಂಗರಾಜು ಸೇರಿದಂತೆ ಹಲವು ವಿದ್ಯಾರ್ಥಿ ಮುಖಂಡರ ಮೇಲೆ ಪೊಲೀಸ್ ಇಲಾಖೆ ರೌಡಿಶೀಟ್ ತೆರೆದಿದೆ. ಬಳ್ಳಾರಿಯ ಜಿಂದಾಲ್ ಧಣಿಗಳ ಅಕ್ರಮ ಪ್ರಶ್ನಿಸಿದ ನಮ್ಮ ಡಿ.ವೈ.ಎಫ್.ಐ.ಹುಡುಗರನ್ನೂ ರೌಡಿ ಶೀಟರ್ ಪಟ್ಟಿಗೆ ಹಾಕಿದ್ದಾರೆ.

ಯಾವುದೇ ರೀತಿಯ ಅಕ್ರಮ, ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗದ, ಶಾಂತಿಯುತ ಪ್ರತಿಭಟನೆಗಳ ಮೂಲಕ ಅನ್ಯಾಯದ ವಿರುದ್ಧ ಹೋರಾಟಗಳನ್ನು ನಡೆಸಿದ ಈ ಎಳೆಯ ಹುಡುಗರ ಮೇಲೆ ರೌಡಿಶೀಟ್ ಬ್ರಹ್ಮಾಸ್ತ್ರ ಪ್ರಯೋಗಿಸಿ ಬಾಯಿಮುಚ್ಚಿಸಲು ನೋಡುತ್ತಿರುವ ವ್ಯವಸ್ಥೆಯ ಚಮಚಾಗಳಾದ ಪೊಲೀಸರ ಈ ನಡೆಯನ್ನು ನಾಡು ದೊಡ್ಡ ಧ್ವನಿಯಲ್ಲಿ ಪ್ರಶ್ನಿಸಬೇಕಿದೆ. ಕಾಂಗ್ರೆಸ್, ಜೆಡಿಎಸ್ ಸಮ್ಮಿಶ್ರ ಸರಕಾರ ತನ್ನ ಪೊಲೀಸರ ಈ ನಡೆಗೆ ತಕ್ಕ ಉತ್ತರ ನೀಡಬೇಕಿದೆ.

– ಶಬ್ಬೀರ್ ರಾಯಚೂರು

ರಾಷ್ಟ್ರವ್ಯಾಪಿ ಸಾರಿಗೆ ಮುಷ್ಕರ ಆಗಸ್ಟ್ 7, 2018

'ಮೋಟಾರು ವಾಹನ (ತಿದ್ದುಪಡಿ) ಮಸೂದೆ–2017' ನ್ನು ಹಿಂಪಡೆಯಲು, ಸಾರಿಗೆ ಉದ್ದಿಮೆಯನ್ನು ರಕ್ಷಿಸಲು ಮತ್ತು ಅಸಂಘಟಿತ ಸಾರಿಗೆ ಕಾರ್ಮಿಕರಿಗೆ ಸಾಮಾಜಿಕ ಸುರಕ್ಷಾ ಕಾಯ್ದೆಯನ್ನು ಜಾರಿಗೊಳಿಸಲು ಒತ್ತಾಯಿಸಿ ರಸ್ತೆ ಸಾರಿಗೆ ರಂಗದಲ್ಲಿರುವ ಕಾರ್ಮಿಕರು ಮತ್ತು ಮಾಲೀಕರ ಸಂಘಟನೆಗಳ ವೇದಿಕೆ ಆಗಸ್ಟ್ 7, 2018 ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿದೆ.

ಸಿಐಟಿಯು ರಾಜ್ಯ ಉಪಾಧ್ಯಕ್ಷ ಪ್ರಕಾಶ್ ಕೆ., ಕರಾರಸಾನಿ ನೌಕರರ ಫೆಡರೇಷನ್ ಅಧ್ಯಕ್ಷ ಹೆಚ್.ಡಿ.ರೇವಪ್ಪ, OTU ಚಾಲಕರು ಮತ್ತು ಮಾಲೀಕರ ಸಂಘ ಅಧ್ಯಕ್ಷರು ತನ್ವೀರ್ ಪಾಷಾ, ARDU ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಅಕರಾರಸಾನೌ ಮಹಾಪ್ರ. ಕಾರ್ಯದರ್ಶಿ ಜಯದೇವರಾಜೇ ಅರಸ್, ಕೆಎಸ್‌ಟಿಡಿಸಿ ಏರ್‌ಪೋರ್ಟ್ ಟ್ಯಾಕ್ಸಿ ಚಾಲಕರ ಸಂಘ ಕಾರ್ಯಾಧ್ಯಕ್ಷ ಸಿದ್ದಯ್ಯ, ಕಕೈಕ ಸಂಘಗಳ ಒಕ್ಕೂಟ ಪ್ರ. ಕಾರ್ಯದರ್ಶಿ ಶ್ರೀಧರ್, ಕರಾಖಾ ವಾಣಿಜ್ಯ ಕರಾಖಾ ವಾಣಿಜ್ಯ ಚಾಲಕರ ಸಂಘ ಅಧ್ಯಕ್ಷರು ಪುಟ್ಟಲಿಂಗಯ್ಯ, ಕಆ&ಟ್ಯಾ ಚಾಲಕರ ಸಂಘ ಅಧ್ಯಕ್ಷರು ವೆಂಕಟೇಗೌಡ, KSRTC SC/ST ನೌಕರರ ಸಂಘ ಪ್ರ.ಕಾರ್ಯದರ್ಶಿ ವೆಂಕಟರಾಮ್, ಪೀಸ್ ಆಟೋ ಸಂಚಾಲಕರು ರಘು, KSRTC/BMTC ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಜಂಟಿ ಹೇಳಿಕೆಯಲ್ಲಿ ಸಾರಿಗೆ ಮುಷ್ಕರಕ್ಕೆ ಕರೆ ನೀಡಿದ್ದಾರೆ.

ದೇಶದ ರಸ್ತೆ ಸಾರಿಗೆ ಉದ್ದಿಮೆಯಲ್ಲಿರುವ ಆಟೋ ರಿಕ್ಷಾ, ಟ್ಯಾಕ್ಸಿ, ಖಾಸಗಿ ಬಸ್, ಟ್ರಕ್, ರಾಜ್ಯ ರಸ್ತೆ ಸಾರಿಗೆ ನಿಗಮಗಳು, ಡ್ರೈವಿಂಗ್ ಶಾಲೆಗಳು, ವರ್ಕ್‌ಶಾಪ್‌ಗಳು, ಬಿಡಿ ಭಾಗಗಳ ಅಂಗಡಿಗಳು, ಮುಂತಾದ ಎಲ್ಲವೂ ಗಂಭೀರ ಬಿಕ್ಕಟ್ಟಿನಲ್ಲಿವೆ. ಇವುಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರು, ಮಾಲೀಕರು ಕಂ ಚಾಲಕರು, ಸಣ್ಣ ಮಾಲೀಕರು ಮುಂತಾದವರಿಗೆ ಸರ್ಕಾರದಿಂದ ಯಾವುದೇ ಸೌಲಭ್ಯ ಅಥವಾ ಸವಲತ್ತುಗಳಿಲ್ಲದಿದ್ದರೂ ಜನರಿಗೆ ಸೇವೆಯನ್ನು ನೀಡುತ್ತಿದ್ದಾರೆ. ಆದರೆ ಇವರೆಲ್ಲರೂ ಅಧಿಕಾರಿಗಳು ಮತ್ತು ಪೊಲೀಸರಿಂದ ನಿತ್ಯ ಕಿರುಕುಳ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ತಂದು, ಕೋಟ್ಯಾಂತರ ಒಂಟಿ ವಾಹನ ಮಾಲೀಕರನ್ನು ಮತ್ತು ಕಾರ್ಮಿಕರನ್ನು ನಾಶ ಮಾಡಿ, ಇಡೀ ಉದ್ದಿಮೆಯನ್ನು ಭಾರತೀಯ ಮತ್ತು ವಿದೇಶೀ ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸಲು ಹೊರಟಿದೆ. ಸಾರಿಗೆ ಉದ್ದಿಮೆಯಲ್ಲಿರುವವರ ಜೀವನಾಧಾರಗಳನ್ನು ರಕ್ಷಿಸಲು ಮತ್ತು ಸಾರಿಗೆ ರಂಗವನ್ನು ಭಾರತೀಯರ ಪರವಾಗಿ ಉಳಿಸಲು "ಮೋಟಾರು ವಾಹನ (ತಿದ್ದುಪಡಿ) ಮಸೂದೆ–2017"ನ್ನು ಕೇಂದ್ರ ಸರ್ಕಾರ ಕೈಬಿಡಬೇಕೆಂದು ಒತ್ತಾಯಿಸಿ ಆಗಸ್ಟ್ 7 ರಂದು ರಾಷ್ಟ್ರವ್ಯಾಪಿ ಸಾರಿಗೆ ಮುಷ್ಕರವನ್ನು ನಡೆಸಲು ವಿವಿಧ ಸಾರಿಗೆ ಕಾರ್ಮಿಕರ ಸಂಘಟನೆಗಳು ತೀರ್ಮಾನಿಸಿವೆ.

ಖಾಸಗಿ ಫೈನಾನ್ಸ್ ಕಂಪನಿಗಳಿಂದ ಅಥವಾ ಇತರೆ ಮೂಲಗಳಿಂದ ಸಾಲ ಪಡೆದು ಬಹುತೇಕ ಆಟೋ, ಟ್ಯಾಕ್ಸಿ, ಟ್ರಕ್, ಖಾಸಗಿ ಬಸ್‌ಗಳನ್ನು ತಮ್ಮ ಜೀವನ ನಿರ್ವಹಣೆಗಾಗಿ ನಡೆಸುತ್ತಾರೆ. ನಿರಂತರವಾಗಿ ಹೆಚ್ಚುತ್ತಿರುವ ಪೆಟ್ರೋಲ್/ಡೀಸೆಲ್ ದರಗಳು, ವಾಹನಗಳ ನೋಂದಣಿ ಶುಲ್ಕಗಳು, ಫಿಟ್ನೆಸ್, ಲೈಸೆನ್ಸ್, ನವೀಕರಣ ಮುಂತಾದ ಶುಲ್ಕಗಳ ಹೆಚ್ಚಳದಿಂದಾಗಿ ಸಾರಿಗೆ ಉದ್ದಿಮೆಯು ಗಂಭೀರವಾದ ಬಿಕ್ಕಟ್ಟಿಗೆ ಸಿಲುಕುತ್ತಿದೆ. ಖಾಸಗಿ ಸಾಲಗಾರರ ಕಿರುಕುಳ, ಸಾರಿಗೆ ಅಧಿಕಾರಿಗಳು ಮತ್ತು ಪೊಲೀಸರ ಕಿರುಕುಳ ಮತ್ತು ಕ್ಷುಲ್ಲಕ ಕಾರಣಗಳಿಗೆ ಹಾಕುವ ದಂಡಗಳಿಂದ ಸಾರಿಗೆ ನಡೆಸುವುದೇ ಕಷ್ಟವಾಗಿದೆ.

ಕಳೆದ 4 ವರ್ಷಗಳಲ್ಲಿ ಥರ್ಡ್ ಪಾರ್ಟಿ ಇನ್ಶೂರೆನ್ಸ್ ಪ್ರೀಮಿಯಂನ್ನು ಶೇ.100 ರಷ್ಟು ಹೆಚ್ಚಿಸಲಾಗಿದೆ. ಪ್ರೀಮಿಯಂ ರೂಪದಲ್ಲಿ ಸಂಗ್ರಹಿಸಲಾದ ವಿಮಾ ಹಣದ ಮೊತ್ತದ ವಿವರಗಳು ಮತ್ತು ಅಪಘಾತಗಳಿಗೆ ಬಲಿಯಾದವರಿಗೆ ವಿತರಿಸಲಾದ ಮೊತ್ತದ ವಿವರಗಳನ್ನು ಮಾಹಿತಿ ಹಕ್ಕಿನ ಕಾಯ್ದೆಯಡಿಯಲ್ಲಿ ಐಆರ್‌ಡಿಎ (IRDA) ಯನ್ನು ಕೇಳಿದಾಗ ತಮ್ಮ ಬಳಿ ಮಾಹಿತಿ ಇಲ್ಲವೆಂದು ಅದು ಹೇಳಿದೆ. ಹಾಗಿದ್ದಲ್ಲಿ, ಈ ಮಾಹಿತಿಗಳೇ ಇಲ್ಲದೆ ಸ್ವತಃ IRDA ಪ್ರತಿ ವರ್ಷ ಪ್ರೀಮಿಯಂ ದರಗಳ ಹೆಚ್ಚಳವನ್ನು ಹೇಗೆ ಮಾಡುತ್ತಿದೆ? ಇದು ವಾಹನ ಮಾಲೀಕರನ್ನು ವಂಚಿಸುವ ಕ್ರಮವಾಗಿದೆ.

ಅಸಂಘಟಿತ ಸಾರಿಗೆ ಕಾರ್ಮಿಕರಿಗೆ ಅನಾರೋಗ್ಯವಾದಲ್ಲಿ, ಅಪಘಾತಗಳಾದಲ್ಲಿ, ನಿವೃತ್ತಿಯಾದಲ್ಲಿ, ಅವರಿಗೆ ಸಹಕಾರಿಯಾಗುವಂತಹ ಪಿ.ಎಫ್., ಇಎಸ್‌ಐ, ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ ಅಥವಾ ಸಾಮಾಜಿಕ ಸುರಕ್ಷಾ ಯೋಜನೆ/ಕಾಯ್ದೆ ಯಾವುದೂ ಇಲ್ಲ. ರಸ್ತೆ ಸಾರಿಗೆ ಕಾರ್ಮಿಕರ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಿದ ವಿ.ವಿ.ಗಿರಿ ನ್ಯಾಷನಲ್ ಲೇಬರ್ ಇನ್‌ಸ್ಟಿಟ್ಯೂಟ್, ಕೇಂದ್ರ ಸರ್ಕಾರಕ್ಕೆ ವರದಿಯನ್ನು ನೀಡಿದ್ದು, ಸಾಮಾಜಿಕ ಸುರಕ್ಷಾ ಕಾಯ್ದೆ ಜಾರಿ ಮತ್ತು ಕಾರ್ಮಿಕ ಕಾನೂನುಗಳಿಗೆ ಕೆಲವು ತಿದ್ದುಪಡಿಗಳನ್ನು ತರಬೇಕಾದ ಕುರಿತು ಶಿಫಾರಸುಗಳನ್ನು ಮಾಡಿದೆ. ಆದರೆ ಸರ್ಕಾರ ಇವುಗಳ ಬಗ್ಗೆ ಯಾವುದೇ ಗಮನ ಹರಿಸುತ್ತಿಲ್ಲ.

ರಾಜ್ಯ ರಸ್ತೆ ಸಾರಿಗೆ ನಿಗಮಗಳು (STU) ಜನತೆಗೆ ಅನುಕೂಲ ಕಲ್ಪಿಸಲು ಲಾಭದಾಯಕವಾಗಿಲ್ಲದಿದ್ದರೂ ತೀರಾ ಕುಗ್ರಾಮಗಳಿಗೂ ಸಾರಿಗೆಯನ್ನು ಒದಗಿಸಿವೆ. ರಾಜ್ಯ ಸರ್ಕಾರಗಳು ಸಮಾಜದ ವಿವಿಧ ವಿಭಾಗಗಳಿಗೆ ರಿಯಾಯಿತಿ ಪಾಸುಗಳು ಮತ್ತು ಉಚಿತ ಪಾಸುಗಳನ್ನು ನೀಡುತ್ತಿವೆ. ಜನರಿಗೆ ಕಡಿಮೆ ದರದ ಸಾರಿಗೆಯನ್ನು ಒದಗಿಸಿವೆ. STU ಬಸ್‌ಗಳ ಅಪಘಾತ ಪ್ರಮಾಣವು ದೇಶದಲ್ಲೇ ಎಲ್ಲಕ್ಕಿಂತ ಕಡಿಮೆ ಇವೆ. ಮಹಿಳೆಯರಿಗೆ, ಸಮಾಜದ ದುರ್ಬಲ ದಲಿತ ವರ್ಗಗಳಿಗೆ ಮೀಸಲಾತಿ ಮೂಲಕ ಉದ್ಯೋಗಗಳನ್ನು STUಗಳು ನೀಡಿವೆ. STUಗಳ ಅಪಘಾತ ಪ್ರಮಾಣ ಅತ್ಯಂತ ಕಡಿಮೆ ಇರುವುದರಿಂದ ಥರ್ಡ್ ಪಾರ್ಟಿ ಇನ್ಶೂರೆನ್ಸ್‌ನಿಂದ ಈಗಿರುವ ಕಾಯ್ದೆಯಲ್ಲಿ ವಿನಾಯಿತಿ ನೀಡಲಾಗಿದೆ. ಆದರೆ ನೂತನ ಮಸೂದೆಯಲ್ಲಿ ಥರ್ಡ್ ಪಾರ್ಟಿ ಇನ್ಶೂರೆನ್ಸ್‌ನ್ನು ಸಾರಿಗೆ ನಿಗಮಗಳಿಗೆ ಕಡ್ಡಾಯಗೊಳಿಸಲಾಗಿದೆ. ಇದರಿಂದ STUಗಳು ನೂರಾರು ಕೋಟಿಗಳನ್ನು ಖಾಸಗಿ ವಿಮಾ ಕಂಪನಿಗಳಿಗೆ ಪ್ರೀಮಿಯಂ ಪಾವತಿಸಬೇಕಾಗುತ್ತದೆ. ಹೀಗಾದಲ್ಲಿ ಸಂಸ್ಥೆಗಳು ಉಳಿಯಲು ಸಾಧ್ಯವಿದೆಯಾ? ಇವು ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಲಿವೆ. ಸಾರಿಗೆ ಮೂಲತಃ ಸೇವೆಯಾಗಿದೆ. ಸಹಜವಾಗಿಯೇ ನಷ್ಟದಲ್ಲಿರುತ್ತವೆ. ಆಸ್ಪತ್ರೆಗಳು, ಪೊಲೀಸ್ ಠಾಣೆಗಳು, ಕೋರ್ಟುಗಳು ನಷ್ಟದಲ್ಲಿವೆ ಎಂದು ಖಾಸಗೀಕರಣ ಮಾಡಲಾಗುತ್ತದೆಯೇ?

ರಾಜ್ಯಗಳ ಅಧಿಕಾರ ಮೊಟಕು:

ವಾಹನಗಳ ಪರ್ಮಿಟ್ ನೀಡುವಿಕೆ, ರಾಜ್ಯಗಳ ಸಾರಿಗೆ ನೀತಿ ನಿರೂಪಣೆ, ತೆರಿಗೆ ಸಂಗ್ರಹ ಮುಂತಾದ ವಿಷಯಗಳಲ್ಲಿ ರಾಜ್ಯಗಳ ಅಧಿಕಾರ ಮೊಟಕಾಗಲಿದೆ. ಈಗ ರಾಜ್ಯಗಳ ಕೈಯಲ್ಲಿರುವ ಅಂತರ್‌ರಾಜ್ಯ ಪರ್ಮಿಟ್ ನೀಡುವ ಅಧಿಕಾರ ಪೂರ್ಣವಾಗಿ ಕೇಂದ್ರದ ಪಾಲಾಗಲಿದೆ. ಸ್ಟೇಜ್ ಪರ್ಮಿಟ್ ಮತ್ತು ಕಾಂಟ್ರಾಕ್ಟ್ ಪರ್ಮಿಟ್‌ಗಳ ಬದಲಿಗೆ ಒಂದೇ ಪರ್ಮಿಟ್ ಬರಲಿದೆ. 'ಲಾಸ್ಟ್ ಮೈಲ್ ಕನೆಕ್ಟಿವಿಟಿ' ಹೆಸರಲ್ಲಿ ಖಾಸಗಿ ವಾಹನಗಳಿಗೆ ಪರ್ಮಿಟ್ ಇಲ್ಲದೆಯೇ ಓಡಿಸುವ ಅವಕಾಶ ಸಿಗಲಿದೆ. ಪರ್ಮಿಟ್ ನೀಡುವ ರಾಜ್ಯಗಳ ವಿಶೇಷ ಹಕ್ಕು ಇಲ್ಲವಾಗಲಿದೆ. ರಾಷ್ಟ್ರೀಯ ಸಾರಿಗೆ ನೀತಿ ಎಂಬ ಹೊಸ ಅಂಶವನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ರಾಜ್ಯಗಳ ಒಪ್ಪಿಗೆ (concurrence) ಇಲ್ಲದೆ, ಕೇವಲ ಅಭಿಪ್ರಾಯ ಪಡೆದು (consultation) ಇದನ್ನು ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಮಸೂದೆಯು ಭಾರತ ಸಂವಿಧಾನದ ಮೂಲ ಸ್ಥಂಭವಾದ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ. ರಸ್ತೆ ಸಾರಿಗೆಯು ಸಂವಿಧಾನದ ಸಮವರ್ತಿ ಪಟ್ಟಿಯ ಭಾಗವಾಗಿದೆ. ಮಸೂದೆ ಅಂಗೀಕಾರವಾದಲ್ಲಿ ರಾಜ್ಯಗಳ ಕಾನೂನು ರೂಪಿಸುವ ಹಕ್ಕುಗಳು ನಾಶವಾಗಲಿವೆ. ಏಕ ಗವಾಕ್ಷಿ, ಏಕ ತೆರಿಗೆ ಮತ್ತು ನಿಯಂತ್ರಣ ಪ್ರಾಧಿಕಾರ ಮುಂತಾದ ಹೆಸರಿನಲ್ಲಿ ಎಲ್ಲವನ್ನೂ ಕೇಂದ್ರ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಲಿದೆ. ರಾಜ್ಯ ಸರ್ಕಾರಗಳ ಆದಾಯ ತೀವ್ರವಾಗಿ ಕಡಿಮೆಯಾಗಲಿದೆ. ರಾಜ್ಯ ಸರ್ಕಾರಗಳು ಗ್ರಾಮ ಪಂಚಾಯತ್‌ಗಳ ಮಟ್ಟಕ್ಕೆ ಇಳಿಯಲಿವೆ.

ಪ್ರಸ್ತುತ ಮಸೂದೆಯ ಪರಿಣಾಮವಾಗಿ, ದೊಡ್ಡ ಪ್ರಮಾಣದ ಉದ್ಯೋಗ ನಾಶವಾಗಲಿದೆ. ಬಿಡಿ ಭಾಗಗಳ ವ್ಯಾಪಾರಿಗಳು, ರಸ್ತೆ ಬದಿಯ ಸಣ್ಣ ಪುಟ್ಟ ವರ್ಕ್‌ಶಾಪ್‌ಗಳು, ರಿಪೇರಿ ಕೆಲಸಗಾರರು ಮುಂತಾದ ಅಸಂಖ್ಯಾತ ಅಸಂಘಟಿತ ಕಾರ್ಮಿಕರು ಮತ್ತು ಕುಶಲಕರ್ಮಿಗಳು ತಮ್ಮ ಕೆಲಸಗಳನ್ನು ಕಳೆದುಕೊಳ್ಳಿದ್ದಾರೆ. ಸಾರಿಗೆ ರಂಗದ ಕಾರ್ಪೊರೇಟೀಕರಣದ ಹಿನ್ನೆಲೆಯಲ್ಲಿ ಇದು ಜರುಗಲಿದೆ.

ಕಾರ್ಪೊರೇಟ್ ಕಂಪನಿಗಳಿಗೆ ರತ್ನಗಂಬಳಿ:

'ಅಗ್ರಿಗೇಟರ್' ಲೈಸೆನ್ಸ್‌ನ್ನು ರಾಜ್ಯಗಳು ನೀಡಬಹುದಾದರೂ, ನೀಡುವ ಮಾನದಂಡವನ್ನು ಕೇಂದ್ರ ಸರ್ಕಾರ ನಿಗದಿಪಡಿಸುತ್ತದೆ. ಇದರ ಮೂಲಕ ಬಿಡಿ ವಾಹನ ಮಾಲೀಕರು/ಚಾಲಕರು ಉಳಿಯುವುದು ಕಷ್ಟ. ಊಬರ್ ಮತ್ತು ಓಲಾದಂತಹ ಅಗ್ರಿಗೇಟರ್ ಕಂಪನಿಗಳು ಆಟೋ/ಟ್ಯಾಕ್ಸಿ ರಂಗವನ್ನು ಈಗಾಗಲೇ ಆಕ್ರಮಿಸಿಕೊಂಡಿವೆ. ರಾಜ್ಯ ಸಾರಿಗೆ ನಿಗಮಗಳನ್ನು ನಾಶ ಮಾಡಲು ಅಗ್ರಿಗೇಟರ್ ವ್ಯವಸ್ಥೆ ಬಳಕೆಯಾಗಲಿದೆ.

ಮಸೂದೆ ಜಾರಿಯಾದಲ್ಲಿ ವಾಹನಗಳನ್ನು "ರೀಕಾಲ್" ಮಾಡುವ ಹೊಸ ಅಧಿಕಾರ ಕೇಂದ್ರ ಸರ್ಕಾರಕ್ಕೆ ಬರಲಿದೆ. ಮಾನದಂಡಗಳನ್ನು ಪರಿಶೀಲಿಸಲು ಆಟೋಮೊಬೈಲ್ ಕಂಪನಿಗಳ ಮೂಲಕ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗುವುದು. ಇವುಗಳನ್ನು ಖಾಸಗಿ ಆಟೋಮೊಬೈಲ್ ಅಥವಾ 'ಆಪ್' ಆಧಾರಿತ ಕಂಪನಿಗಳ ಹಿಡಿತಕ್ಕೆ ಒಪ್ಪಿಸುವ ಅಪಾಯವಿದೆ. ಖಾಸಗಿಯವರ ಲಾಭಕ್ಕಾಗಿ ದುಬಾರಿ ಮಾನದಂಡಗಳನ್ನು ನಿಗದಿ ಮಾಡಿ ಬಹಳ ಬೇಗನೇ 'ಸ್ಕ್ರಾಪ್'ಗೆ ತಳ್ಳುವ ಒತ್ತಡ ನಿರ್ಮಾಣವಾಗುತ್ತದೆ. ವಾಹನ ಡೀಲರ್‌ಗಳು ಹೊಸ ವಾಹನಗಳನ್ನು ಆರ್‌ಟಿಓ ಬದಲಿಗೆ ತಾವೇ ರಿಜಿಸ್ಟರ್ ಮಾಡಬಹುದು. ಡ್ರೈವಿಂಗ್ ಲೈಸೆನ್ಸ್‌ಗಳನ್ನು ನ್ಯಾಷನಲ್ ರಿಜಿಸ್ಟರ್ ಅಡಿಯಲ್ಲೇ ಪಡೆಯಬೇಕು. ಎರಡು ರೀತಿಯ ಸಮಾನಾಂತರ ಡ್ರೈವಿಂಗ್ ಶಾಲೆಗಳು ಬರಲಿವೆ. ಈಗಿರುವ ಖಾಸಗಿ ಡ್ರೈವಿಂಗ್ ಶಾಲೆಗಳ ಜೊತೆಯಲ್ಲಿ ವಾಹನ ಉತ್ಪಾದಕ ಕಂಪನಿಗಳು ನೇರವಾಗಿ ಡ್ರೈವಿಂಗ್ ಶಾಲೆಗಳನ್ನು ತೆರೆಯುತ್ತಾರೆ. ಈ ರೀತಿಯಾಗಿ ಡ್ರೈವಿಂಗ್ ಲೈಸೆನ್ಸ್‌ನಿಂದ ಹಿಡಿದು, ವಾಹನದ ನೋಂದಣಿ, ನವೀಕರಣ, ಫಿಟ್ನೆಸ್ ಸರ್ಟಿಫಿಕೇಟ್, ವಾಹನ ರಿಪೇರಿ ಮುಂತಾದ ಎಲ್ಲಾ ವಿಭಾಗಗಳನ್ನೂ ಕಾರ್ಪೊರೇಟ್ ಆಟೋಮೊಬೈಲ್ ಕಂಪನಿಗಳ ಹಿಡಿತಕ್ಕೆ ಒಪ್ಪಿಸಲಾಗುತ್ತದೆ. ಎಲ್ಲವೂ ದುಬಾರಿ ಶುಲ್ಕಗಳ ಸುಲಿಗೆ ಕೇಂದ್ರಗಳಾಗುತ್ತವೆ.

ಅಪಘಾತಗಳಿಗೆ ಚಾಲಕರು ಮತ್ತು ನಿರ್ವಾಹಕರನ್ನೇ ಹೊಣೆ ಮಾಡಲಾಗಿದೆ. ಇತಿಮಿತಿಯಿಲ್ಲದ ರೀತಿಯಲ್ಲಿ ದಂಡಗಳ ಪ್ರಮಾಣವನ್ನು ನಿಗದಿಪಡಿಸಲಾಗಿದೆ. ರಸ್ತೆಗಳ ಪರಿಸ್ಥಿತಿ, ರಸ್ತೆಗಳ ವಾಹನಾ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಮಾಣದ ವಾಹನಗಳು, ಮುಂತಾದ ಅಂಶಗಳನ್ನು ಅಪಘಾತಗಳಿಗೆ ಕಾರಣ ಎಂಬುದನ್ನೇ ಈ ಮಸೂದೆ ಪರಿಗಣಿಸದಿರುವುದು ವಿಚಿತ್ರವಾಗಿದೆ. ಆದರೆ ಕೇಂದ್ರ ಸರ್ಕಾರ ಅಪಘಾತಗಳನ್ನು ಕಡಿಮೆ ಮಾಡಲೆಂದೇ ಈ ಮಸೂದೆಯನ್ನು ತರಲಾಗುತ್ತಿದೆ ಎಂದು ಜನರಿಗೆ ಸುಳ್ಳನ್ನು ಹೇಳುತ್ತಿದೆ. ವಿಷದ ಮಾತ್ರೆಗಳಿಗೆ ಸಿಹಿ ಲೇಪನವಾಗಿದೆ ಈ ಮಸೂದೆ.

ಇದರ ಜೊತೆಗೆ ಪೆಟ್ರೋಲ್ ಮತ್ತು ಡೀಸೆಲ್ ದರಗಳು ನಿರಂತರವಾಗಿ ಏರುತ್ತಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಡೀಸೆಲ್ ಪ್ರತಿ ಲೀ.ಗೆ 12 ರೂ. ಹೆಚ್ಚಾಗಿದೆ. ಇದರಿಂದಾಗಿ ಸಾಧಾರಣ ಪ್ರತಿ ದಿನ 300 ಕಿ.ಮೀ. ಓಡುವ ಬಸ್ ಅಥವಾ ಲಾರಿಯೊಂದು ಪ್ರತಿ ವರ್ಷ 2,60,000 ರೂಗಳನ್ನು ಹೆಚ್ಚುವರಿಯಾಗಿ ನೀಡುವಂತಾಗಿದೆ. ಮನಸ್ಸೋಚ್ಛೆ ಹೆಚ್ಚುತ್ತಿರುವ ಟೋಲ್ ದರಗಳು ಆದಾಯಗಳನ್ನು ಮತ್ತಷ್ಟು ಕಡಿಮೆ ಮಾಡಿವೆ. ಬೆಂಗಳೂರಿನ ಏರ್‌ಪೋರ್ಟಿಗೆ ಓಡಾಡುವ ಟ್ಯಾಕ್ಸಿಯೊಂದು ಪ್ರತಿ ದಿನ ಎರಡು ಬಾರಿ ಪ್ರಯಾಣ ಮಾಡಿದರೆ ವರ್ಷಕ್ಕೆ 1,16,800 ರೂಗಳನ್ನು ಟೋಲ್ ನೀಡಬೇಕಾಗಿದೆ. ಟೋಲ್ ದರಗಳಾಗಲೀ, ಡೀಸೆಲ್ ದರಗಳಾಗಲೀ, ವಿಮಾ ದರಗಳಾಗಲೀ ನಿರಂತರವಾಗಿ ಏರುತ್ತಿವೆ. ಇಂತಹ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಸಾರಿಗೆ ಉದ್ಯಮವನ್ನು ಸಂರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳುವುದರ ಬದಲು ಕೇಂದ್ರ ಸರ್ಕಾರವು ವಿನಾಶಕಾರಿಯಾದ ಮೋಟಾರು ವಾಹನ ಕಾಯ್ದೆ (ತಿದ್ದುಪಡಿ) ಮಸೂದೆಯನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಲು ಮುಂದಾಗಿದೆ.

ಈ ಹಿನ್ನೆಲೆಯಲ್ಲಿ "ಮೋಟಾರು ವಾಹನ (ತಿದ್ದುಪಡಿ) ಮಸೂದೆ – 2017" ನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯಬೇಕೆಂದು ಒತ್ತಾಯಿಸಿ, ಆಗಸ್ಟ್ 7 ರಂದು ರಾಷ್ಟ್ರವ್ಯಾಪಿ ಸಾರಿಗೆ ಮುಷ್ಕರವನ್ನು ನಡೆಸಲು ತೀರ್ಮಾನಿಸಿದ್ದು ಇದನ್ನು ಯಶಸ್ವಿಗೊಳಿಸಲು ರಾಜ್ಯದ ಎಲ್ಲಾ ಸಾರಿಗೆ ಕಾರ್ಮಿಕರು ಮತ್ತು ಮಾಲೀಕರಿಗೆ ಕರೆ ನೀಡಿವೆ. ■

ವಿಶೇಷ ವರದಿ

WFTU ಕಾನೂನು ಸಮಿತಿ ಸ್ಥಾಪನೆ

WFTU ರಾಷ್ಟ್ರೀಯ ಕೇಂದ್ರೀಯ ಟ್ರೇಡ್ ಯೂನಿಯನುಗಳ ಜಾಗತಿಕ ಫೆಡರೇಶನ್. ಅದರ ಕಾನೂನು ಸಮಿತಿಯ ಸ್ಥಾಪನಾ ಸಭೆ ಜುಲೈ 3 ನೇ ವಾರದಲ್ಲಿ ಗ್ರೀಸ್ ರಾಜಧಾನಿ ಅಥೇನ್ಸ್ ನಲ್ಲಿ ನಡೆಯಿತು. ಸಿಐಟಿಯು ಪ್ರತಿನಿಧಿಯಾಗಿ ಈ ಸಭೆಯಲ್ಲಿ ಭಾಗವಹಿಸಿದ್ದ

ಕೆ.ಎನ್. ಉಮೇಶ್ ಅವರ ವರದಿ.


ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ (WFTU) ತನ್ನ 17ನೇ ಮಹಾಧಿವೇಶನದ ನಿರ್ಣಯದಂತೆ, WFTU ಕಾನೂನು ಸಮಿತಿಯನ್ನು 2018 ಜುಲೈ 16ರಂದು ಗ್ರೀಸ್‌ನ ಅಥೆನ್ಸ್‌ನಲ್ಲಿ PAME ಕೇಂದ್ರ ಕಛೇರಿಯಲ್ಲಿ ನಡೆದ ಸಂಸ್ಥಾಪನ ಸಭೆಯಲ್ಲಿ ರಚಿಸಿದೆ. 2016 ಅಕ್ಟೋಬರ್ 5 ರಿಂದ 8ರವರೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆದ WFTU 17ನೇ ಮಹಾಧಿವೇಶನವು ಕಾನೂನು ಸಮಿತಿ ರಚಿಸಲು ನಿರ್ದೇಶಿಸಿತ್ತು. ಅದರಂತೆ ಜಾಗತಿಕವಾಗಿ ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಕಾರ್ಮಿಕ ಕಾನೂನುಗಳ ಸುಧಾರಣೆ ಹೆಸರಿನ ಕಾರ್ಪೊರೇಟ್ ಪರ ಕಾರ್ಮಿಕ ವಿರೋಧಿ ತಿದ್ದುಪಡಿಗಳು; WFTU ಅಂತರಾಷ್ಟ್ರೀಯವಾಗಿ ಎದುರಿಸುತ್ತಿರುವ ಕಾನೂನು ಸಮಸ್ಯೆಗಳಾದ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯಲ್ಲಿ(ILO) WFTU ಪ್ರಾತಿನಿಧ್ಯ ಮತ್ತು ಪ್ರಜಾಪ್ರಭುತ್ವ; ಕಾರ್ಮಿಕ ಪ್ರತಿನಿಧಿಗಳಿಗೆ ವೀಸಾ ನಿರಾಕರಣೆ; ಪ್ಯಾಲಿಸ್ತೇನಿ ಜನತೆಯ ಮೇಲಿನ ಸಾಮ್ರಾಜ್ಯಶಾಹಿ ಸಮರ; ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸುರಕ್ಷತೆ, ಕಾರ್ಮಿಕ ಸಂಬಂಧಗಳಲ್ಲಿ ಹೆಚ್ಚುತ್ತಿರುವ ಕೆಲಸದ ಅಭದ್ರತೆ, ಗರ್ಭಿಣಿ ಮಹಿಳೆಯರಿಗೆ ಕೆಲಸ ನಿರಾಕರಣೆಯ ಕ್ರಮಗಳು – ನ್ಯಾಯಾಲಯಗಳ ಸಮ್ಮತಿ; ಕ್ಯೂಬಾ ಜನತೆ ಎದುರಿಸುತ್ತಿರುವ ಆರ್ಥಿಕ ದಿಗ್ಬಂದನದ ಸವಾಲು; ಕಾರ್ಮಿಕ ದಿನಾಚರಣೆ ಮೇಲಿನ ನಿಷೇಧಗಳು, ಸಾಮೂಹಿಕ ಲೇ–ಆಫ್, ಪ್ರಾಕೃತಿಕ ದುರಂತ ಮತ್ತು ಕಾರ್ಮಿಕರಿಗೆ ಕಾನೂನು ಸಂರಕ್ಷಣೆ ಸಾಮೂಹಿಕ ಚೌಕಾಸಿ ಮತ್ತು ಸಾಮೂಹಿಕ ಒಪ್ಪಂದಗಳು; ಮುಷ್ಕರದ ಹಕ್ಕು ಮತ್ತು ಬೀಗಮುದ್ರೆ ವಿರುದ್ಧ ಹೋರಾಟ; ಕಾರ್ಮಿಕ ಸಂಘಗಳ ಪ್ರತಿನಿಧಿಗಳಿಗೆ ಕಿರುಕುಳ, ವಜಾ, ಕೊಲೆ; ರಾಸಾಯನಿಕ ಮತ್ತು ಅಣ್ವಸ್ತ್ರಗಳ ಬಳಕೆ; ನಾಪತ್ತೆಯಾಗಿರುವ WFTU ನ ಪತ್ರಾಗಾರ, ದಸ್ತಾವೇಜುಗಳು, ಸಾಮಗ್ರಿಗಳು ಮತ್ತು ಪಿಕಾಸೋ ಪೈಂಟಿಂಗ್‌ಗಳನ್ನು ಪಡೆದುಕೊಳ್ಳಲು ವಹಿಸಬೇಕಾದ ಕಾನೂನು ಕ್ರಮಗಳ – ಕುರಿತು ಸಭೆಯು ಚರ್ಚಿಸಿತು.

ಈ ಎಲ್ಲಾ ವಿಚಾರಗಳ ಕುರಿತು ಸುದೀರ್ಘ ಚರ್ಚೆ ನಡೆಸಿದ ಸಭೆಯು ಚರ್ಚಿಸಲಾದ 17 ಅಂಶಗಳ ಕುರಿತು 16 ಸಂಗಾತಿಗಳಿಗೆ ಒಂದೊಂದು ವಿಚಾರಗಳ ಕುರಿತು ನಿರ್ದಿಷ್ಟ ಜವಾಬ್ದಾರಿ ನೀಡಲು ನಿರ್ಧರಿಸಿತು. ಸಭೆಯಲ್ಲಿ ಭಾಗವಹಿಸಿದ್ದ 5 ಖಂಡಗಳ 20 ಸಂಗಾತಿಗಳನ್ನು ಒಳಗೊಂಡು WFTU ಕಾನೂನು ಸಮಿತಿಯನ್ನು, ಶ್ರೀಲಂಕಾದ ಸಂಗಾತಿ ಶ್ರೀ ಜನಕ ಅಧಿಕಾರಿ ಪ್ರಧಾನ ಸಂಯೋಜಕರಾಗಿ ಮತ್ತು ಬಲ್ಗೇರಿಯಾದ ಶ್ರೀಮತಿ ರೂಮಾನಿಯ ಇಲೈವಾ ಉಪ ಪ್ರಧಾನ ಸಂಯೋಜಕರಾಗಿ, ಆಯ್ಕೆ ಮಾಡಿದೆ. **'ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಸೇವೆಯಲ್ಲಿ ನ್ಯಾಯ'** ಎಂಬ ಘೋಷಣೆಯೊಂದಿಗೆ ನಡೆದ ಸಂಸ್ಥಾಪನ ಸಭೆಯಲ್ಲಿ ಸಮರಧೀರ ವಕೀಲರನ್ನು ಒಳಗೊಂಡು WFTU ಕಾನೂನು ಸಮಿತಿ ರಚನೆಗೊಂಡಿದೆ.

ಸಭೆಗೆ ಆಗಮಿಸಬೇಕಿದ್ದ ಅಂಗೋಲಾ, ಬಾಂಗ್ಲಾದೇಶ, ಇರಾನ್ ದೇಶದ ಪ್ರತಿನಿಧಿಗಳು ವೀಸಾ ನಿರಾಕರಣೆಯ ಕಾರಣದಿಂದಾಗಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಸಭೆಗೆ ಶ್ರೀಲಂಕಾದ ಕಾಂ. ಜನಕಾ ಅಧಿಕಾರಿ ವಿಚಾರ ಮಂಡನೆ ಮಾಡಿದರು, WFTU ಉಪಾಧ್ಯಕ್ಷರಾದ ಕಾಂ. ವ್ಯಾಲೆಂಟಿನ್ ಪಾಚೋ ಮಾತನಾಡಿದರು, WFTU ಪ್ರಧಾನ ಕಾರ್ಯದರ್ಶಿ ಕಾಂ. ಜಾರ್ಜ್ ಮಾವರೀಕೋಸ್ ಚರ್ಚೆಗೆ ಉತ್ತರ ನೀಡಿದರು. ನೂತನ ಸಮಿತಿಯು ವರ್ಷಕ್ಕೊಮ್ಮೆ ಸಭೆ ಸೇರಲು ತೀರ್ಮಾನಿಸಿತು. WFTU ಕಾನೂನು ಸಮಿತಿ ರಚೆಯ ಕುರಿತು ಬ್ರೋಶರ್–ಕರಪತ್ರ ಮತ್ತು ಕಾನೂನು ದತ್ತಾಂಶ ಪುಸ್ತಕ ಬಿಡುಗಡೆ ಮಾಡಲು ಸಭೆ ತೀರ್ಮಾನಿಸಿದೆ.

ಭಾರತದಿಂದ CITU ಪ್ರತಿನಿಧಿಸಿ ಭಾಗವಹಿಸಿದ್ದ ಕಾಂ.ಕೆ.ಎನ್.ಉಮೇಶ್ ರವರಿಗೆ 'ಅಂತರಾಷ್ಟ್ರೀಯ ಸಂಘಟನೆಗಳಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಾತಿನಿಧ್ಯ' ಮತ್ತು 'ವರ್ಗ ಆಧಾರಿತ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಮುಕ್ತ ಚಲನೆ ಮತ್ತು ವೀಸಾ ನೀಡುವಿಕೆ' ಕುರಿತು ನಿರ್ದಿಷ್ಟ ಜವಾಬ್ದಾರಿಯನ್ನು ಸಭೆ ನೀಡಿದೆ. ಅಂತೆಯೇ ಭಾರತದಿಂದ AITUC ಪ್ರತಿನಿಧಿಯಾಗಿ ಭಾಗವಹಿಸಿದ್ದ ಕಾಂ.ಅಶ್ವಿನಿ ಕುಮಾರ್ ಬಕ್ಷಿರವರಿಗೆ 'ಕೆಲಸ ಸಂಬಂಧಿತ ಅಪಘಾತಗಳ' ಕುರಿತು ಜವಾಬ್ದಾರಿ ನೀಡಲಾಗಿದೆ.

ಸಭೆಯಲ್ಲಿ ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಕಾರ್ಮಿಕ ಕಾನೂನುಗಳ ತಿದ್ದುಪಡಿ ಕುರಿತು ಮಾಹಿತಿ ವಿನಿಮಯ ಮಾಡಲಾಯಿತು. ಗ್ರೀಸ್ ದೇಶದಲ್ಲಿ ದಿನದ ಕೆಲಸದ ಅವಧಿಯನ್ನು 8 ಗಂಟೆಗಳಿಂದ 12 ಗಂಟೆಗೆ ಹೆಚ್ಚಿಸಿ ಮಾಡಲಾಗಿರುವ ಕಾನೂನು ತಿದ್ದುಪಡಿ, ಕೊಲಂಬಿಯಾ ದೇಶದಲ್ಲಿ 9 ಸಾವಿರಕ್ಕೂ ಹೆಚ್ಚು ಕಾರ್ಮಿಕ ಚಳುವಳಿಯ ಕಾರ್ಮಿಕರನ್ನು ಅಲ್ಲಿನ ಸರ್ಕಾರದ ಸೈನಿಕ ಪಡೆಗಳು ಕೊಂದಿರುವ ವಿಚಾರ, ವಿಶ್ವಸಂಸ್ಥೆಯ 25 ನಿರ್ಣಯಗಳಿದ್ದಾಗ್ಯೂ ಪ್ಯಾಲಿಸ್ತೇನಿ ಜನತೆಯ ರಕ್ಷಣೆಗೆ ಅವುಗಳ ಜಾರಿಗೆ ಕ್ರಮ ವಹಿಸದಿರುವ ಅಂಶ, ಆದರೆ ಇರಾಕ್ ವಿರುದ್ಧದ ಒಂದೇ ಒಂದು ನಿರ್ಣಯವನ್ನೇ ಆಧಾರಿಸಿ ಇರಾಕ್ ಮೇಲೆ ನಡೆಸಲಾದ NATO ಪಡೆಯ ಧಾಳಿ, WFTU ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಜಾರ್ಜ್ ಮಾವರಿಕೋಸ್ ರವರಿಗೆ ವಿಶ್ವಸಂಸ್ಥೆಯ ಸಭೆಯಲ್ಲಿ ಭಾಗವಹಿಸಲು ಅಮೇರಿಕಾ (USA) ಸರ್ಕಾರದಿಂದ ವೀಸಾ ನಿರಾಕರಣೆಯ ಅಂಶ, ಐರೋಪ್ಯ ಒಕ್ಕೂಟದ ನ್ಯಾಯಾಲಯ ಗರ್ಭಿಣಿ ಮಹಿಳಾ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸುವುದನ್ನು ನ್ಯಾಯಸಮ್ಮತಗೊಳಿಸಿರುವ ತೀರ್ಪು; ಪ್ಯಾಲಿಸ್ತೇನ್, ಗ್ವಾಟೆಮಾಲಾ, ಪರಾಗ್ವೆ, ಫ್ರಾನ್ಸ್, ಗ್ರೀಸ್ ಮುಂತಾದೆಡೆ ಸಮರಧೀರ ಕಾರ್ಮಿಕ ಚಳುವಳಿಯ ಸಂಗಾತಿಗಳಿಗೆ ನೀಡಲಾಗುತ್ತಿರುವ ಕಿರುಕುಳ ಬಂಧನ, ಜೈಲು ಶಿಕ್ಷೆ; ಕೊಲಂಬಿಯಾ ದೇಶದಲ್ಲಿ WFTU ಪ್ರಧಾನ ಕಾರ್ಯದರ್ಶಿ ಭಾಗವಹಿಸಬೇಕಿದ್ದ 5 ಬಹಿರಂಗ ಸಭೆಗಳನ್ನು ನಡೆಸಲು ಬಿಡದ ಅಲ್ಲಿನ ಸರ್ಕಾರ ಮತ್ತು ಅಲ್ಲಿನ ಸೈನಿಕ ಪಡೆಗಳಿಂದ ಬಹಿರಂಗ ಸಭೆಯ ಸ್ಥಳಗಳ ಮೇಲೆ ಗ್ರೆನೇಡ್ ದಾಳಿಗಳನ್ನು ನಡೆಸಿರುವ ಕುರಿತು ವರದಿಗಳನ್ನು ಮಂಡಿಸಲಾಯಿತು.



ಬಂಡವಾಳ ಹೂಡಿಕೆಗಳು ಉಸಿರುಗಟ್ಟುವ ವಾತಾವರಣದಿಂದಾಗಿ ಸಂಕಷ್ಟದಲ್ಲಿರುವ ಕಾರಣ ಶುಭ್ರ ವಾಯು ಸೇವನೆಗೆ ಅನುವಾಗುವಂತೆ ಸಾಮೂಹಿಕ ಲೇ–ಆಫ್‌ಗಳಿಗೆ ಅನುಮತಿಸಬೇಕೆಂಬ ಸಂಯುಕ್ತ ಅಮೇರಿಕಾ (USA), ಐರೋಪ್ಯ ಒಕ್ಕೂಟ, ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್‌ಗಳ ಪ್ರಸ್ತಾಪ ಮತ್ತು ವಾದಗಳ ಕುರಿತು ಸಭೆ ಚರ್ಚಿಸಿತು. ಅಂತೆಯೇ ಐರೋಪ್ಯ ಒಕ್ಕೂಟ, ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಸಂಘಟನೆಯ (OECD) ಸದಸ್ಯ ರಾಷ್ಟ್ರಗಳು ಮತ್ತು ಬಂಡವಾಳಗಾರರು ಕಾರ್ಮಿಕ ಸಂಘಗಳ ಸಾಮೂಹಿಕ ಚೌಕಾಸಿಯ ಹಕ್ಕಿನ ಮೇಲೆ ವಿಧಿಸಬೇಕೆಂದಿರುವ ನಿಯಂತ್ರಣದ ಕ್ರಮಗಳು ಮತ್ತು ಬಂಡವಾಳದ ಸ್ಪರ್ಧಾತ್ಮಕತೆಗೆ ಹೇಗೆ ಸಾಮೂಹಿಕ ವೇತನ ಒಪ್ಪಂದಗಳು ಅಡ್ಡಿಯಾಗುತ್ತಿವೆ ಎಂಬ ಅವರ ಪ್ರತಿಪಾದನೆಯ ವಿಚಾರಗಳು ಚರ್ಚೆಗೆ ಒಳಪಟ್ಟವು. USA, ಆಸ್ಟ್ರೇಲಿಯಾ, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳು ವಿಶ್ವ ಕಾರ್ಮಿಕ ದಿನ ಮೇ ದಿನವನ್ನು ಆಚರಣೆ ಮಾಡಲು ಬಿಡದಿರುವ ಬೆಳವಣಿಗೆಗಳು, ಅದಕ್ಕೆ ಮಾನ್ಯತೆ ನೀಡದಿರುವ ಅಂಶಗಳ ಕುರಿತು ಚರ್ಚಿಸಲಾಯಿತು.

WFTU ನ ಅಂತರಾಷ್ಟ್ರೀಯ ಕಛೇರಿಯನ್ನು 2005ರಲ್ಲಿ ಚೆಕ್ ರಾಜಧಾನಿ ಪ್ರಾಗ್ ನಿಂದ ಗ್ರೀಸ್‌ನ ಅಥೆನ್ಸ್‌ಗೆ ಸ್ಥಳಾಂತರಿಸುವಾಗ WFTU ನ ಪತ್ರಾಗಾರ, ದಾಖಲೆಗಳು, ದಸ್ತಾವೇಜು, ಸಾಮಗ್ರಿಗಳನ್ನು; ಮತ್ತು ಅದಕ್ಕೂ ಮುನ್ನ ಸಮಾಜವಾದಿ ಸೋವಿಯತ್ ರಷ್ಯದ ಪತನದ ನಂತರ ಕೊಂಡೊಯ್ಯಿದ್ದ ಫ್ರಾನ್ಸ್‌ನ ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳು ಅವುಗಳನ್ನು WFTU ಗೆ ಹಿಂತಿರುಗಿಸದಿರುವ ಅಂಶಗಳು, ಅವುಗಳನ್ನು ಮತ್ತೆ ಪಡೆಯಲು ವಹಿಸಬೇಕಾದ ಕಾನೂನು ಕ್ರಮಗಳ ಕುರಿತು ಸಭೆಯು ಚರ್ಚಿಸಿದೆ.

1955ರಲ್ಲಿ WFTU ದಶಮಾನೋತ್ಸವದ ಪ್ರಯುಕ್ತ ಪಿ.ಪಿಕಾಸೋ ರಚಿಸಿದ ಮತ್ತು 1979ರಲ್ಲಿ ಎಸ್.ಬಾಲಾದರಿನ್ ತೈಲವರ್ಣಕ್ಕೆ ಮಾರ್ಪಡಿಸಿದ್ದ ಪೈಂಟಿಂಗ್ ಚೆಕೊಸ್ಲಾವೋಕಿಯಾದಲ್ಲಿ ಪ್ರತಿಗಾಮಿ ಕ್ಷಿಪ್ರ ಕ್ರಾಂತಿಯ ನಂತರ ನಾಪತ್ತೆಯಾಗಿದೆ. ಅದನ್ನು ಮರುಪಡೆಯಲು ನಡೆಸಬೇಕಾದ ಕಾನೂನು ಕ್ರಮಗಳ ಕುರಿತು ಸಭೆ ಚರ್ಚಿಸಿ ನಿರ್ಣಯಿಸಿದೆ.

ಒಟ್ಟಾರೆ WFTU ಕಾನೂನು ಸಮಿತಿಯನ್ನು ಜಗತ್ತಿನಾದ್ಯಂತ ನಡೆಯುತ್ತಿರುವ ಸಮರಧೀರ ಕಾರ್ಮಿಕ ಚಳುವಳಿಯ ಶಸ್ತ್ರಾಗಾರದಲ್ಲಿನ ನೂತನ ಅಸ್ತ್ರವಾಗಿ ಬಳಕೆಯಾಗುವಂತೆ ಮಾಡಬೇಕು, ಬಂಡವಾಳಶಾಹಿ ಪರ ಕಾನೂನಿನ ಆಳ್ವಿಕೆಯ ಮಿತಿಗಳ ನಡುವೆಯೂ, ಸಮರಧೀರ ಹೋರಾಟಗಳ ಜೊತೆ ಜೊತೆಯಲ್ಲಿ ,ಕಾನೂನಾತ್ಮಕ ಹೋರಾಟಗಳ ಮೂಲಕವೂ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಕಟ್ಟಿಹಾಕಲು ಇರುವ ಮಾರ್ಗಗಳನ್ನು ಅನ್ವೇಷಿಸುತ್ತಾ **'ನ್ಯಾಯವನ್ನು ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಹಿತಾಸಕ್ತಿಗಳ ಸೇವೆ'**ಗೆ ಬಳಸಬೇಕೆಂಬ ದೃಢ ನಿರ್ಧಾರದೊಂದಿಗೆ ಸಭೆ ಸಮಾರೋಪಗೊಂಡಿತು. ●





ಎನ್‌ಆರ್‌ಸಿ: ಎಲ್ಲಾ ಭಾರತೀಯರನ್ನು ಸೇರಿಸುವ ಒಂದು ಪಕ್ಷಪಾತ–ಮುಕ್ತ ಪ್ರಕ್ರಿಯೆ ಬೇಕಾಗಿದೆ



ಎನ್.ಆರ್.ಸಿ. ಅಂದರೆ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ಸಮಕಾಲಿಕಗೊಳಿಸುವ ಕ್ರಿಯೆ ಒಂದು ರಾಜಕೀಯ ನಿರ್ವಾತದಲ್ಲೇನೂ ನಡೆಯುತ್ತಿಲ್ಲ.ಎಲ್ಲ ಬಂಗಾಲಿ ಭಾಷಿಕ ಮುಸ್ಲಿಮರನ್ನು ಕಾನೂನುಬಾಹಿರ ವಲಸಿಗರು ಎಂದು ಗುರಿಯಿಡಲು ಪ್ರಯತ್ನಿಸುವ ಒಂದು ಬಿಜೆಪಿ ನೇತೃತ್ವದ ಸರಕಾರ ಅಸ್ಸಾಂ ರಾಜ್ಯದಲ್ಲಿದೆ. ಕೋಮುವಾದಿ ವಿಭಜನೆಕೋರತೆಗೆ ಎದುರಾಗಿ, ಎಲ್ಲ ಭಾರತೀಯರನ್ನು ಪೌರರಾಗಿ ಸೇರಿಸುವ ಒಂದು ಪಕ್ಷಪಾತ–ಮುಕ್ತ ಪ್ರಕ್ರಿಯೆ ಬೇಕಾಗಿದೆ. ಈ ಪಕ್ಷಪಾತ ಗಣತಿಯ ಪ್ರಕ್ರಿಯೆಯಲ್ಲಿ ಪ್ರಕಟಗೊಳ್ಳದಂತೆ ಜಾಗರೂಕತೆಯನ್ನು ವಹಿಸಬೇಕಾಗಿದೆ. ಈ ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸಿರುವ ಸುಪ್ರಿಂ ಕೋರ್ಟ್ ಪೀಠಕ್ಕೆ ಈ ಬುಡಮಟ್ಟದ ವಾಸ್ತವತೆಯ ಅರಿವು ಸಾಕಷ್ಟು ಇರಬೇಕಾಗಿದೆ



– ಪ್ರಕಾಶ ಕಾರಟ್

ಅಸ್ಸಾಂನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ)ಯು ಕರಡಿನ ಪ್ರಕಟಣೆ ವ್ಯಾಪಕ ತಲ್ಲಣವನ್ನು ಉಂಟು ಮಾಡಿದೆ. ಏಕೆಂದರೆ ಪೌರತ್ವಕ್ಕೆ ಅರ್ಜಿ ಹಾಕಿದ್ದವರಲ್ಲಿ 40 ಲಕ್ಷಕ್ಕೂ ಹೆಚ್ಚು ವ್ಯಕ್ತಿಗಳ ಹೆಸರುಗಳು ಈ ಪೌರತ್ವದ ಪಟ್ಟಿಯಲ್ಲಿ ಕಾಣುತ್ತಿಲ್ಲ.

1951ರ ಎನ್‌ಆರ್‌ಸಿ ಯನ್ನು ಸಮಕಾಲಿಕಗೊಳಿಸುವುದು 1985ರ ಅಸ್ಸಾಂ ಒಪ್ಪಂದದ ಜಾರಿಯ ಒಂದು ಭಾಗವಾಗಿದೆ. ಮಾರ್ಚ್ 24, 1971ನ್ನು ಒಂದು ಗಡುವು ದಿನಾಂಕವಾಗಿ ನಿಗದಿ ಪಡಿಸಿ ಅದರ ನಂತರ ಬಂದವರನ್ನು ಕಾನೂನುಬಾಹಿರ ವಲಸಿಗರು ಎಂದು ನಿರ್ಧರಿಸಬೇಕಾಗಿತ್ತು. ಎನ್‌ಆರ್‌ಸಿ ಯನ್ನು ಸಮಕಾಲಿಕ ಗೊಳಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂಬ ಸುಪ್ರಿಂ ಕೋರ್ಟಿನ ನಿರ್ಧಾರವನ್ನು ಅಸ್ಸಾಂನಲ್ಲಿ ಸಾಮಾನ್ಯವಾಗಿ ಎಲ್ಲ ಜನವಿಭಾಗಗಳು ಸ್ವಾಗತಿಸಿದವು; ಕಾನೂನುಬಾಹಿರ ವಲಸೆಯಿಂದ ತಮ್ಮ ಮೇಲೆ ಸವಾರಿ ನಡೆಯುತ್ತಿದೆ ಎಂದು ಭಯಪಟ್ಟಿರುವ ಅಸಮಿಯ ಮತ್ತು ಇಲ್ಲಿನ ಮೂಲನಿವಾಸಿ ಸಮುದಾಯಗಳು ಮತ್ತು ತಮ್ಮ ಮೇಲಿನ ಕಿರುಕುಳ ಹಾಗೂ ತಮ್ಮ ಅಭದ್ರ ಸ್ಥಾನಮಾನ ಕೊನೆಗೊಳ್ಳಬೇಕೆಂದು ಬಯಸುವ ಪೂರ್ವ ಬಂಗಾಲ ಮೂಲದ ಭಾಷಿಕ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ಹೀಗೆ ಸುಮಾರಾಗಿ ಎಲ್ಲರೂ ಸ್ವಾಗತಿಸಿದರು.

ಜುಲೈ31 ರಂದು ಪ್ರಕಟಪಡಿಸಿರುವ ಎನ್‌ಆರ್‌ಸಿಯ ಅಂತಿಮ ಕರಡು 3,29,91,384 ಅರ್ಜಿದಾರರಲ್ಲಿ 2,89, 83, 677 ನ್ನು ಸೇರಿಸಲಾಗಿದೆ ಎಂದು ತೋರಿಸುತ್ತದೆ. ಅಂದರೆ 40,07,707 ವ್ಯಕ್ತಿಗಳನ್ನು ಕೈಬಿಡಲಾಗಿದೆ. ಇದು ಅಸ್ಸಾಂನ ಜನಸಂಖ್ಯೆಯ ಸುಮಾರು 12% ದಷ್ಟಾಗುತ್ತದೆ. ಎನ್‌ಆರ್‌ಸಿಯ ಗಣತಿಯ ಪ್ರಕ್ರಿಯೆಯಲ್ಲಿ ಹಲವಾರು ದೋಷಗಳು, ತಪ್ಪುಗಳು ಇವೆ. ಈ ಪಟ್ಟಿಯಿಂದ ಕೈಬಿಡಲಾದವರಲ್ಲಿ ಈ ಪಟ್ಟಿಯಲ್ಲಿ ಸೇರಿಸಿರುವವರ ಕುಟುಂಬದವರೂ ಇದ್ದಾರೆ. ಒಂದು ಅವಳಿ–ಜವಳಿಯಲ್ಲಿ ಒಬ್ಬರನ್ನು ಸೇರಿಸಿದ್ದರೆ, ಇನ್ನೊಬ್ಬರಿಗೆ ಅಂತಹ ಭಾಗ್ಯ ಸಿಕ್ಕಿಲ್ಲ. ಗಂಡನನ್ನು ಸೇರಿಸಲಾಗಿದೆ, ಆದರೆ ಹೆಂಡತಿಯ ಹೆಸರನ್ನು ಸೇರಿಸಿಲ್ಲ ಎಂಬಂತಹ ಪ್ರಕರಣಗಳಿವೆ.

ಈ ಪ್ರಕ್ರಿಯೆ ಒಟ್ಟಾರೆಯಾಗಿ ಮಹಿಳೆಯರ ವಿರುದ್ಧ ಪಕ್ಷಪಾತಿಯಾಗಿತ್ತು. ಪಂಚಾಯತು ಪ್ರಮಾಣ ಪತ್ರಗಳು 1971ರ ಮೊದಲು ಈ ರಾಜ್ಯದಲ್ಲಿ ನೆಲೆಸಿದ್ದ ಪಾಲಕರು ಮತ್ತು ಅವರ ಪಾಲಕರೊಂದಿಗೆ ಸಂಬಂಧದ ಕೊಂಡಿಯನ್ನು ಸಿದ್ಧಪಡಿಸುವ ದಸ್ತಾವೇಜುಗಳಲ್ಲಿ ಒಂದು. ಹೈಕೋರ್ಟ್ ಪಂಚಾಯತು ಇಂತಹ ಪ್ರಮಾಣ ಪತ್ರಗಳು ಕ್ರಮಬದ್ಧವಲ್ಲ ಎಂದು ಹೇಳಿತು. ಆದರೆ ಸುಪ್ರಿಂ ಕೋರ್ಟ್ ಈ ಪ್ರಮಾಣಪತ್ರಗಳ ತಪಾಸಣೆಯಾಗಿದ್ದಲ್ಲಿ ಅವು ಕ್ರಮಬದ್ಧ ಆಗುತ್ತವೆ ಎಂದು ತೀರ್ಪು ನೀಡಿತು.

ಮೊದಲ ಕರಡನ್ನು ಡಿಸೆಂಬರ್31, 2017ರಂದು ಪ್ರಕಟಿಸಿದಾಗ 27ಲಕ್ಷ ವಿವಾಹಿತ ಮಹಿಳೆಯರು ವಾರಸುದಾರಿಕೆಯ ದಸ್ತಾವೇಜಾಗಿ ಪಂಚಾಯತು ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದರು ಎಂದು ಅಂದಾಜು ಮಾಡಲಾಯಿತು. ಇವರಲ್ಲಿ ಹೆಚ್ಚಿನವರು ಮುಸ್ಲಿಂ ಮಹಿಳೆಯರು. ಅಂತಹ ಮಹಿಳೆಯರ ಬಳಿ ಜನನ ಪ್ರಮಾಣ ಪತ್ರವಾಗಲೀ, ಶಾಲಾ ಪ್ರಮಾಣ ಪತ್ರವಾಗಲೀ ಇರಲಿಲ್ಲ, ಏಕೆಂದರೆ ಅವರು ಅನಕ್ಷರಸ್ಥರು. ಅವರು ತಮ್ಮ ಪಾಲಕರೊಂದಿಗೆ ಕೊಂಡಿಯನ್ನು ಸಾಬೀತು ಪಡಿಸಲು ಪಂಚಾಯತು ಪ್ರಮಾಣ ಪತ್ರಗಳನ್ನು ಮಾತ್ರ ಪಡೆಯಲು ಸಾಧ್ಯವಾಗಿತ್ತು.

ಇಂತಹ ಹೆಚ್ಚಿನ ಪ್ರಕರಣಗಳಲ್ಲಿ ಪಂಚಾಯತೀ ಪ್ರಮಾಣ ಪತ್ರಗಳನ್ನು ಒಂದು ಪುರಾವೆಯಾಗಿ ಪರಿಗಣಿಸಿಲ್ಲ ಎಂಬುದನ್ನು ಕರಡು ಎನ್‌ಆರ್‌ಸಿ ತೋರಿಸುತ್ತದೆ. ಈಗ ದಾವೆಗಳನ್ನು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವಾಗ ಪಂಚಾಯತು ಪ್ರಮಾಣ ಪತ್ರವನ್ನು ಒಂದು ಕ್ರಮಬದ್ಧ ಕೊಂಡಿ ದಸ್ತಾವೇಜು ಎಂದು ಪರಿಗಣಿಸುವುದು ಅಗತ್ಯವಾಗಿದೆ. ರೇಶನ್ ಕಾರ್ಡ್‌ಗಳನ್ನು ಬೆಂಬಲ ದಸ್ತಾವೇಜುಗಳಾಗಿ ಸಲ್ಲಿಸಿದವರಲ್ಲಿ ಒಂದು ದೊಡ್ಡ ಸಂಖ್ಯೆಯ ಅರ್ಜಿದಾರರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಕೂಡ ವರದಿಯಾಗಿದೆ.

ಕರಡು ಎನ್‌ಆರ್‌ಸಿಯ ಪ್ರಕಟಣೆ ರಾಜಕೀಯ ಚದುರಂಗದಾಟಕ್ಕೆ ದಾರಿ ಮಾಡಿಕೊಟ್ಟಿದೆ. ಇದರಲ್ಲಿ ಹೆಸರು ಇಲ್ಲದವರೆಲ್ಲರೂ ಬಾಂಗ್ಲಾದೇಶಿ ನುಸುಳುಕೋರರು, ಅಥವ ಕಾನೂನುಬಾಹಿರ ವಲಸಿಗರು ಎಂದು ಬಿಜೆಪಿ ಅತ್ಯಂತ ಆಕ್ರಾಮಕ ರೀತಿಯಲ್ಲಿ ಬಿಂಬಿಸುತ್ತಿದೆ. ಅವರು ಹಿಂದೂ ನಿರಾಶ್ರಿತರು ಮತ್ತು ಕಾನೂನುಬಾಹಿರ ಮುಸ್ಲಿಂ ವಲಸಿಗರು ಎಂದು ಬೇಧ ಮಾಡಲು ಪ್ರಯತ್ನಿಸುತ್ತಿದ್ದಾರೆ. ಮುಸ್ಲಿಮೇತರ ವಲಸಿಗರಿಗೆ ಪೌರತ್ವ ಒದಗಿಸಬೇಕೆಂಬ 'ಪೌರತ್ವ ತಿದ್ದುಪಡಿ ಮಸೂದೆ' ಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

ಈ ಪಂಕ್ತಿಯ ಇನ್ನೊಂದು ತುದಿಯಲ್ಲಿ, ಮಮತಾ ಬ್ಯಾನರ್ಜಿ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಖಂಡಿಸಿದ್ದಾರೆ ಮತ್ತು ಅಸ್ಸಾಂನಿಂದ ಬಿಹಾರಿಗಳು ಮತ್ತು ಬಂಗಾಲಿಗಳನ್ನು ಓಡಿಸಲಾಗುತ್ತದೆ ಎಂಬ ಭೀತಿಯನ್ನು ಎತ್ತಿದ್ದಾರೆ. ಸಂಕುಚಿತ ರಾಜಕೀಯ ಉದ್ದೇಶಕ್ಕಾಗಿ ಇದು ಬಂಗಾಲಿ ಭಾವನೆಗಳನ್ನು ಬಡಿದೆಬ್ಬಿಸಿ ಅಲ್ಪಸಂಖ್ಯಾತರ ಭಯದೊಂದಿಗೆ ಆಟವಾಡಲು ಒಂದು ನೆವ ಎಂಬುದು ಸ್ವಯಂವೇದ್ಯ.



ರಾಜಕೀಯ ಚದುರಂಗದಾಟಕ್ಕೆ.............. ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ


ಕೋಮುವಾದಿ ವಿಭಜನೆಕೋರತೆಗೆ ಎದುರಾಗಿ, ಎಲ್ಲ ಭಾರತೀಯರನ್ನು ಎನ್‌ಆರ್‌ಸಿಯಲ್ಲಿ ಪೌರರಾಗಿ ಸೇರಿಸುವ ಒಂದು ಪಕ್ಷಪಾತ–ಮುಕ್ತ ಪ್ರಕ್ರಿಯೆ ಬೇಕಾಗಿದೆ. ಎನ್‌ಆರ್‌ಸಿಯನ್ನು ಸಮಕಾಲಿಕಗೊಳಿಸುವ ಕ್ರಿಯೆ ಒಂದು ರಾಜಕೀಯ ನಿರ್ವಾತದಲ್ಲೇನೂ ನಡೆಯುತ್ತಿಲ್ಲ. ಎಲ್ಲ ಬಂಗಾಲಿ ಭಾಷಿಕ ಮುಸ್ಲಿಮರನ್ನು ಕಾನೂನುಬಾಹಿರ ವಲಸಿಗರು ಎಂದು ಗುರಿಯಿಡಲು ಪ್ರಯತ್ನಿಸುವ ಒಂದು ಬಿಜೆಪಿ ನೇತೃತ್ವದ ಸರಕಾರ ರಾಜ್ಯದಲ್ಲಿದೆ. ಗಣತಿಯ ಪ್ರಕ್ರಿಯೆಯಲ್ಲಿ ಈ ಪಕ್ಷಪಾತ ಪ್ರಕಟಗೊಳ್ಳದಂತೆ ಜಾಗರೂಕತೆಯನ್ನು ವಹಿಸಬೇಕಾಗಿದೆ. ಈ ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸಿರುವ ಸುಪ್ರಿಂ ಕೋರ್ಟ್ ಪೀಠಕ್ಕೆ ಈ ಬುಡಮಟ್ಟದ ವಾಸ್ತವತೆಯ ಸಾಕಷ್ಟು ಅರಿವು ಇರಬೇಕಾಗಿದೆ.

ಎನ್‌ಆರ್‌ಸಿಯಲ್ಲಿ ಸೇರಿಸದಿರುವವರ ದಾವೆಗಳನ್ನು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲು ಒಂದು ಪ್ರಮಾಣಿತ ಕ್ರಿಯಾವಿಧಾನವನ್ನು ಸಿದ್ಧಪಡಿಸಬೇಕು ಎಂದು ಸುಪ್ರಿಂ ಕೋರ್ಟ್ ನಿರ್ದೇಶಿಸಿದೆ. ದಸ್ತಾವೇಜುಗಳನ್ನು ಮತ್ತು ಸಮರ್ಥನೆಯ ಪುರಾವೆಗಳನ್ನು ಯಾವ ಆಧಾರದಲ್ಲಿ ಸ್ವೀಕರಿಸಬೇಕು ಎಂಬ ಬಗ್ಗೆ ಸ್ಪಷ್ಟ ಮತ್ತು ಪಾರದರ್ಶಕ ಮಾರ್ಗನಿರ್ದೇಶನಗಳಿರಬೇಕು. ದಾವೆ ಸಲ್ಲಿಸಲು ಕೊಟ್ಟಿರುವ ಅವಧಿ ಸಪ್ಟಂಬರ್ 28ರ ವರೆಗೆ ಇದೆ. ಅದನ್ನು ವಿಸ್ತರಿಸಬೇಕು. ಈ ಮೂಲಕ ಯಾರೂ ವಿಚಾರಣೆಯ ಹಕ್ಕಿನಿಂದ ವಂಚಿರಾಗದಂತಾಗಬೇಕು.

ಯಾವ ಭಾರತೀಯರೂ ರಾಷ್ಟ್ರೀಯ ಪೌರತ್ವ ನೋಂದಣಿಯಲ್ಲಿ ತನ್ನ ಹೆಸರು ಸೇರಿಸಿಕೊಳ್ಳುವ ಪೌರತ್ವದ ಹಕ್ಕಿನಿಂದ ವಂಚಿರಾಗಬಾರದು ಎಂಬುದು ಅತ್ಯಗತ್ಯ.

ಹರ್ಕಿಶನ್ ಸಿಂಗ್ ಸುರ್ಜಿತ್: 10ನೇ ಮರಣ ವಾರ್ಷಿಕ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ನಿಧನರಾಗಿ ಈ ಆಗಸ್ಟ್1ಕ್ಕೆ 10ವರ್ಷಗಳಾಗಿವೆ. ಈ ಸಂದರ್ಭದಲ್ಲಿ ಚಂಡೀಗಡದಲ್ಲಿ ಅವರ ನಿಧನದ 10ನೇ ವಾರ್ಷಿಕವನ್ನು ಅವರೇ ಸ್ಥಾಪಿಸಿದ ದೈನಿಕ ದೇಶ ಸೇವಕ್ ಪತ್ರಿಕೆ, ಆಝಾದೀ ಲೆಹರ್ ವಿಸ್ಸಾರ್ ಸಂಭಾಲ್ ಮತ್ತು ಬಾಬಾ ಸೋಹನ್‌ಸಿಂಗ್ ಬಾಕ್ನಾ ಟ್ರಸ್ಟ್ ಜಂಟಿಯಾಗಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಆಚರಿಸಲಾಯಿತು.. ಸಿಪಿಐ(ಎಂ)ನ ಪ್ರಸಕ್ತ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮುಖ್ಯ ಅತಿಥಿಯಾಗಿದ್ದರು. ಸಿಪಿಐ(ಎಂ)ನ ಪಂಜಾಬ್ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ಸುರ್ಜಿತ್‌ರವರ ಕಿರಿಯ ಪುತ್ರನೂ ಆಗಿರುವ ಗುರುಚೇತನ್‌ಸಿಂಗ್ ಬಸ್ಸಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದೇಶ್‌ಸೇವಕ್ ದೈನಿಕದ ಸಂಪಾದಕರಾದ ಮದನ್‌ದೀಪ್ ಸಿಂಗ್, ಹಿರಿಯ ಪತ್ರಕರ್ತ ಗೋಬಿಂದ್ ತುಕ್ರಾಲ್, ಸಿಐಟಿಯು ಪಂಜಾಬ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಾಥ್ ಸಿಂಗ್, ಸಿಪಿಐನ ರಾಷ್ಟ್ರೀಯ ಮಂಡಳಿ ಸದಸ್ಯ ಜೊಗಿಂದರ್ ದಯಾಲ್, ಸಿಪಿಐನ ರಾಜ್ಯ ಕಾರ್ಯದರ್ಶಿ ಬಂತ್ ಬ್ರಾರ್ ಮತ್ತಿತರರು ಮಾತನಾಡಿದರು.





ಸೀತಾರಾಮ್ ಯೆಚುರಿಯವರು ಮಾತನಾಡುತ್ತ ಸುರ್ಜಿತ್‌ರವರ ಜೊತೆಗೆ ಕೆಲಸ ಮಾಡಿದ ದೀರ್ಘ ಅವಧಿಯನ್ನು ನೆನಪಿಸಿಕೊಂಡರು. ಅವರು ಅತ್ಯಂತ ಸರಳಜೀವಿಯಾಗಿದ್ದರು, ಆದರೆ ಎಂತಹ ಕ್ಲಿಷ್ಟ ವಿಷಯವನ್ನೂ ಸರಳವಾದ ಭಾಷೆಯಲ್ಲಿ ವಿವರಿಸಬಲ್ಲವರಾಗಿದ್ದರು.

2004ರಲ್ಲಿ ವಾಜಪೇಯಿ ಸ್ಥಾನದಲ್ಲಿ ಯಾರು ಬರಲು ಸಾಧ್ಯ ಎಂದು ಬಹಳ ಚರ್ಚೆ ನಡೆಯುತ್ತಿತ್ತು. ಅದಕ್ಕೆ ಸುರ್ಜಿತ್ ನೀಡಿದ ಉತ್ತರ– ಚುನಾವಣೆಗಳು ಪೂರ್ಣಗೊಳ್ಳಲಿ, ಹೊಳೆಯುತ್ತಿರುವ ಭಾರತ ಎಂಬ ಘೋಷಣೆ ಆವಿಯಾಗಿ ಹೋಗುತ್ತದೆ, ಎನ್‌ಡಿಎ, ವಾಜಪೇಯಿಯವರೊಂದಿಗೆ ಅಳಿಸಿ ಹೋಗುತ್ತದೆ. ಈಗ ಅಂತಹುದೇ ಪ್ರಶ್ನೆ, ಮೋದಿ ಸ್ಥಾನದಲ್ಲಿ ಯಾರು ಬರಲು ಸಾಧ್ಯ ಎಂಬುದು ಚರ್ಚೆಯಲ್ಲಿದೆ ಎನ್ನುತ್ತ ಯೆಚುರಿಯವರು, ಹಿಂದಿನ ಸಂದರ್ಭಗಳಲ್ಲಿ ಆದಂತೆ ಚುನಾವಣೆಗಳ ನಂತರ ಒಂದು ವೇದಿಕೆ ಅಸ್ತಿತ್ವಕ್ಕೆ ಬರುತ್ತದೆ, ಎಲ್ಲ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ದ್ವೇಷದ ರಾಜಕೀಯ ಮತ್ತು ಫ್ಯಾಸಿಸ್ಟ್ ಮಾದರಿ ಪ್ರವೃತ್ತಿಗಳನ್ನು ಸೋಲಿಸಲು ಒಟ್ಟುಗೂಡುವುದರಿಂದ ಬಿಜೆಪಿಯನ್ನು ಸೋಲಿಸಲಾಗುತ್ತದೆ ಎಂದು ಹೇಳಿದರು. ಒಂದು ಉತ್ತಮ, ಶಾಂತಿಯುತ ಮತ್ತು ಸಮೃದ್ಧಿಯ ಭಾರತಕ್ಕಾಗಿ ಒಂದಾಗಿ ಫ್ಯಾಸಿಸ್ಟ್ ಅರೆಸ್ಸೆಸ್ ಮಾರ್ಗದರ್ಶನದ ಈ ಕೋಮುವಾದಿ ಸರಕಾರವನ್ನು ಸೋಲಿಸಿ ಎಂದು ಸಭಿಕರಿಗೆ ಅವರು ಕರೆ ನೀಡಿದರು.



ಸಮಾಜವಾದಕ್ಕಾಗಿ ಗ್ರೀಸ್ ಜನತೆಯೊಂದಿಗೆ ಶತಮಾನ ಗ್ರೀಸ್ ಕಮ್ಯೂನಿಸ್ಟ್ ಪಕ್ಷ (KKE)

WFTU ಕಾನೂನು ಸಮಿತಿಯ ಸ್ಥಾಪನಾ ಸಭೆಯಲ್ಲಿ ಭಾಗವಹಿಸಲು ಜುಲೈ 3 ನೇ ವಾರದಲ್ಲಿ ತೆರಳಿದ್ದ ಕೆ.ಎನ್. ಉಮೇಶ್, ಗ್ರೀಸ್ ರಾಜಧಾನಿ ಅಥೇನ್ಸ್ ಭೇಟಿಯ ಸಮಯದಲ್ಲಿ, ಇಂದಿನ ಹಿಂದಿನ ಗ್ರೀಸ್ ಬಗ್ಗೆ ತಾವು ಕಂಡುಕೊಂಡ ಸಂಗತಿಗಳನ್ನು ಒಳಗೊಂಡ ವಿಶೇಷ ಲೇಖನ. ಗ್ರೀಸ್ ಕಮ್ಯುನಿಸ್ಟ್ ಪಕ್ಷ (KKE) ತನ್ನ ಸ್ಥಾಪನೆಯ ಶತಮಾನೋತ್ಸವ ಅಂಗವಾಗಿ ಪ್ರಕಟಿಸಿರುವ 100 ಪೋಸ್ಟ್‌ಕಾರ್ಡ್ ಪೈಂಟಿಂಗ್ಸ್ ನಲ್ಲಿ ಆಯ್ದ ಕೆಲವನ್ನೂ ಈ ಲೇಖನದ ಜತೆ ಮುದ್ರಿಸಲಾಗಿದೆ.

– ಕೆ.ಎನ್.ಉಮೇಶ್



ಗ್ರೀಸ್ ಕಮ್ಯೂನಿಸ್ಟ್ ಪಕ್ಷ (KKE) ಸ್ಥಾಪನೆಯಾಗಿ ಒಂದು ಶತಮಾನವನ್ನು ಪೂರೈಸುತ್ತಿದೆ. WFTU ಕಾನೂನು ಸಮಿತಿ ಸಭೆಯ ಬಳಿಕ KKE ಕೇಂದ್ರ ಸಮಿತಿ ಕಛೇರಿಗೆ ಭೇಟಿ ನೀಡಿದ ವಿವಿಧ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಸದಸ್ಯರಾಗಿದ್ದು ಸಭೆಯಲ್ಲಿ ಭಾಗವಹಿಸಿದ್ದ ಸಂಗಾತಿಗಳೊಂದಿಗೆ KKE ಪಾಲಿಟ್ ಬ್ಯೂರೋ ಸದಸ್ಯರು ಅಲ್ಲಿನ ಕಾರ್ಮಿಕ ರಂಗದ ಉಸ್ತುವಾರಿಯು ಆಗಿರುವ 36'ರ ಹರೆಯದ ಕಾಂ.ಪ್ರೊಟೋಲಿಸ್ ನಮ್ಮೊಂದಿಗೆ ಆತ್ಮೀಯವಾದ ಸಂವಾದ ನಡೆಸಿದರು. ಅಲ್ಲಿ KKE ನಡೆಸಿರುವ ಚಳುವಳಿ ಎದುರಿಸುತ್ತಿರುವ ಸವಾಲು, ಮುಂಬರುವ ಅಲ್ಲಿನ ಸಂಸದೀಯ ಚುನಾವಣೆ ಕುರಿತು ವಿಚಾರ ವಿನಿಮಯ ಮಾಡಿಕೊಂಡರು.

8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸಿದ ಸಿರಿಸಾ ಸರ್ಕಾರ

ಹೇಗೆ ಅಲ್ಲಿನ ಹಾಲಿ ಸಿರಿಸಾ ಸರ್ಕಾರವು ಎಡ ಪಂಥೀಯ ಹೆಸರಿನಲ್ಲಿ ತೀವ್ರವಾದಿ ಬಲಪಂಥೀಯ ಪಕ್ಷದೊಂದಿಗೆ ಸರ್ಕಾರ ರಚಿಸಿದೆ. ಸರ್ಕಾರದ ವೆಚ್ಚ ಕಡಿತ ಹಿಂಪಡೆಯುವ ನೆಪದಲ್ಲಿ 1897ರಿಂದ ಇದ್ದ 8 ಗಂಟೆಯ ದಿನದ ಕೆಲಸದ ಅವಧಿಯನ್ನು ಶಾಸನಾತ್ಮಕವಾಗಿ ದಿನಕ್ಕೆ 12 ಗಂಟೆಗೆ ಹೆಚ್ಚಿಸಿದೆ. ಅದರ ವಿರುದ್ಧ ಅಲ್ಲಿನ ಕೇಂದ್ರ ಕಾರ್ಮಿಕ ಸಂಘಟನೆ PAME ಜೊತೆಗೂಡಿ KKE ಹೇಗೆ ಪ್ರತಿ ಕೆಲಸದ ಸ್ಥಳಗಳಲ್ಲಿ ತಡೆಯೊಡ್ಡುತ್ತಿದೆ ಎಂಬುದನ್ನು ವಿವರಿಸಿದರು. ಅಲ್ಲಿನ ಪ್ರಧಾನಿ ಸಿಪ್ರಾಸ್ ತನ್ನ ಸುಳ್ಳು ಹೇಳಿಕೆ ನೀಡುವುದರಲ್ಲಿ ನಿಸ್ಸೀಮರಾಗಿದ್ದು, ಸದ್ಯದಲ್ಲಿಯೇ ಅದರಲ್ಲಿ ಸ್ನಾತಕೋತ್ತರ ಪದವಿ ಪಡೆಯಲಿದ್ದಾರೆ ಎಂದು ವಿವರಿಸಿದರು.

ಅಂತರ್ಯುದ್ಧದಲ್ಲಿ ಸಾವಿರಾರು ಸಂಗಾತಿಗಳ ತ್ಯಾಗ ಬಲಿದಾನ

KKE ತನ್ನ ಆರಂಭದಿಂದಲು ಗ್ರೀಕ್ ಜನತೆಯ ಪರವಾಗಿ ಹೋರಾಡುತ್ತಾ ಸಾವಿರಾರು ತನ್ನ ಕ್ರಾಂತಿಕಾರಿ ಸಂಗಾತಿಗಳನ್ನು ಕಳೆದುಕೊಂಡಿದೆ. ಅಲ್ಲಿನ ಸರ್ಕಾರಗಳ ದಾಳಿಯ ವಿರುದ್ಧ ಜನತೆಯ ಪ್ರಜಾಸತ್ತಾತ್ಮಕ ಸೈನ್ಯ ನಡೆಸಿದ ಅಂತರ್ಯುದ್ಧ, ಹಿಟ್ಲರ್‌ನ ಆಳ್ವಿಕೆ ವಿರುದ್ಧ, ಆನಂತರ ಬಂದ ಅಲ್ಲಿನ ಸ್ಥಳೀಯ ಸರ್ಕಾರಗಳ ವಿರುದ್ಧ ನಡೆಸಿದ ಹೋರಾಟ, ಅದಕ್ಕಾಗಿ ಬಳಸಲಾದ ಶಸ್ತ್ರಗಳನ್ನು ಒಳಗೊಂಡ ಪ್ರದರ್ಶನ, ಸರ್ಕಾರಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಭೂಗತ ಜೀವನ ನಡೆಸಲು ಅವರೇ ಮುದ್ರಿಸುತ್ತಿದ್ದ ಪಾಸ್‌ಪೋರ್ಟ್, ಕರಪತ್ರಗಳನ್ನು ಕದ್ದು ಸಾಗಿಸಲು ಬಳಸುತ್ತಿದ್ದ ಶೂಗಳು, ಕೈಬರಹದ ಪುಸ್ತಕಗಳ ಪ್ರದರ್ಶನ ಕೇಂದ್ರ ಸಮಿತಿ ಕಛೇರಿಯ ಪತ್ರಾಗಾರದಲ್ಲಿವೆ.



ಸುಸಜ್ಜಿತ 10 ಅಂತಸ್ತಿನ ಕಟ್ಟಡದಲ್ಲಿ ಸುಸಜ್ಜಿತ 1000 ಜನರ ಆಸನವುಳ್ಳ ಸಭಾಂಗಣವುಳ್ಳ ಕಛೇರಿ KKE ಕೇಂದ್ರ ಸಮಿತಿ ಕಛೇರಿಯಾಗಿದೆ. ಪ್ರಸಕ್ತ ವರ್ಷ ತನ್ನ ಸ್ಥಾಪನೆಯ 100 ವರ್ಷಗಳನ್ನು ಆಚರಿಸುತ್ತಿರುವ KKE **'100 ವರ್ಷಗಳು ಗ್ರೀಕ್ ಜನತೆಯೊಂದಿಗೆ ಸಮಾಜವಾದಕ್ಕಾಗಿ'** ಎಂಬ ಘೋಷಣೆಯೊಂದಿಗೆ ಅದನ್ನು ಸಂಘಟಿಸುತ್ತಿದೆ. ಭಾರತದ CPI(M), CPI ಒಳಗೊಂಡು ಜೆಕೋಸ್ಲೋವೋಕಿಯಾ, ಶ್ರೀಲಂಕಾ, ರಷ್ಯ, ಪ್ಯಾಲಿಸ್ಟೇನ್, ಬಲ್ಗೇರಿಯಾ, ಗ್ರೀಸ್, ದಕ್ಷಿಣ ಆಫ್ರಿಕಾ, ಸ್ವಿಟ್ಜರ್‌ಲ್ಯಾಂಡ್ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿ, ತನ್ನ ಶತಮಾನೋತ್ಸವ ಅಂಗವಾಗಿ ಪ್ರಕಟಿಸಿರುವ 100 ಪೋಸ್ಟ್‌ಕಾರ್ಡ್ ಪೈಂಟಿಂಗ್ಸ್ ಹಾಗು ರಷ್ಯಾ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವದ ಅಂಗವಾಗಿ KKE ಹೊರತಂದಿರುವ ಕಿರುಹೊತ್ತಿಗೆಯನ್ನು ಉಡುಗೊರೆಯಾಗಿ ನೀಡಿದರು.

ತತ್ವಶಾಸ್ತ್ರ, ಪ್ರಜಾಪ್ರಭುತ್ವ, ನಗರ ಪ್ರಭುತ್ವದ ತೊಟ್ಟಿಲು ಗ್ರೀಸ್ :

ಅರಿಸ್ಟಾಟಲ್, ಸಾಕ್ರೆಟೀಸ್, ಪ್ಲೂಟೋ, ಎಪಿಕ್ಯೂರಸ್, ಪೈತಾಗರಸ್ ಮುಂತಾದ ತತ್ವಜ್ಞಾನಿಗಳು, ಗ್ರೀಸ್ ದೇಶದವರು. ಹೋಮರ್‌ನಂತಹ ಕವಿಗಳು, ಹೆರೋಡೊಟಸ್ ನಂತಹ ಇತಿಹಾಸಕಾರರು, ಅಲೆಕ್ಸಾಂಡರ್ ದಿ ಗ್ರೇಟ್ ನಂತಹ ರಾಜಕಾರಣಿಗಳು ಗ್ರೀಸ್ ದೇಶದವರಾಗಿದ್ದಾರೆ.



ಭೌತಿಕವಾದಿ ತತ್ವಶಾಸ್ತ್ರ ನೀಡಿದ ಎಪಿಕ್ಯೂರಸ್ :

ಗ್ರೀಸ್ ದೇಶದ ತತ್ವಜ್ಞಾನಿ ಎಪಿಕ್ಯೂರಸ್ 2320 ವರ್ಷಗಳ ಹಿಂದೆ ಮನುಷ್ಯನನ್ನು ದಂಡಿಸುವ ದೇವರ ಭಯದಿಂದ ಮುಕ್ತಗೊಳಿಸಿದ. ಧರ್ಮವು ಅಜ್ಞಾನದ ಜೊತೆ ಜೊತೆಯಾಗಿ ನಡೆಯುತ್ತದೆ ಮತ್ತು ಅಜ್ಞಾನದಲ್ಲಿ ಬೆಳೆಯುತ್ತದೆ ಹಾಗೂ ದೇವರೆಂಬ ಸ್ವರ್ಗದ ಗೂಢಾಚಾರಿಗಳ ಭಯದ ನೆರಳನ್ನು ಜನತೆಯ ಮೇಲೆ ಬೀರುತ್ತದೆ ಎಂದು ತಾತ್ವೀಕರಿಸಿದ. ಪ್ರಾಕೃತಿಕ ವಿದ್ಯಮಾನಗಳನ್ನು ಪ್ರಕೃತಿ ನಿರ್ಧರಿಸುತ್ತದೆಯೇ ವಿನಹ ದೇವರುಗಳಲ್ಲ ಎಂದು ಪ್ರತಿಪಾದಿಸಿದ. ಬದುಕಿರುವ ಎಲ್ಲಾ ಜೀವಿಗಳು ನೋವನ್ನು ತಪ್ಪಿಸಿಕೊಳ್ಳಲು ಮತ್ತು ನಲಿವನ್ನು ಬಯಸುವುದರಿಂದ ನಲಿವು ಉತ್ಕೃಷ್ಟ ಒಳ್ಳೆಯದು ಎಂದು ಪ್ರತಿಪಾದಿಸಿದ. ನೈತಿಕತೆ ಭೌತಿಕವಾದಿ ನೆಲೆಗಟ್ಟು ಆಧಾರಿತವಾಗಿದೆಯೆ ವಿನಹ ಆಧ್ಯಾತ್ಮಿಕ ಆಧಾರಿತವಾದುದಲ್ಲ ಎಂದು ತಾತ್ವೀಕರಿಸಿದ ಅವನ ತತ್ವವನ್ನು ಒಪ್ಪಿಕೊಂಡ ಅಂದಿನ ಗ್ರೀಕ್ ಜನರು ಎಲ್ಲಾ ಸೇರಿ 80,000/– ಬೆಲೆಯ ತೋಟದ ಮನೆಯನ್ನು ಅಥೆನ್ಸ್ ನಗರದಲ್ಲಿ ನಿರ್ಮಿಸಿಕೊಟ್ಟಿದ್ದರು. ತರ್ಕಶಾಸ್ತ್ರ, ಭೌತಶಾಸ್ತ್ರ ಮತ್ತು ನೀತಿಶಾಸ್ತ್ರ ಕುರಿತು ತಾತ್ವಿಕ ಬರಹಗಳು ಆತನ ಪ್ರಧಾನ ಬರಹಗಳಾಗಿವೆ.

ಗೂಬೆ ಗ್ರೀಕ್ ಜನರ ವಿವೇಕ : ಅದೃಷ್ಟ


ಗೂಬೆ ಕಣ್ಣಿನ ದೇವತೆ ಅಥೆನ್ಸ್ ಗ್ರೀಕ್ ಜನರ ಆರಾಧ್ಯ ದೇವತೆ. ಗೂಬೆ ಅವರ ವಿವೇಕದ ಸಂಕೇತ. ಪ್ರತಿ ಮನೆ ಮನದಲ್ಲಿ, ಗೂಬೆ ಮತ್ತದವರ ಕಣ್ಣುಗಳೇ ಕಣ್ಣನ್ನು ಸೆಳೆಯುತ್ತವೆ. ಇಲ್ಲಿ ಬೈಗಳಕ್ಕೆ ಬಳಕೆಯಾಗುವ ಗೂಬೆ ಪದ ಗ್ರೀಕರ ಹೊಗಳಿಕೆಯ ಪದ ಗೌಕೆಸ್ – ಗೂಬೆ (gloukes). ಅಥೆನ್ಸ್ ನಗರದ ಹೆಸರು ದೇವತೆ ಅಥೆನಾದಿಂದ ಬಂದದು. ಗ್ರೀಕ್ ಪುರಾಣಗಳ ಪ್ರಕಾರ ದೇವರೆಂದರೆ ಅತಿಮಾನವ ಶಕ್ತಿಯಲ್ಲ, ಮನುಷ್ಯರಂತೆ ಸಾಮಾನ್ಯ ಮನುಷ್ಯ, ಅಂದಿನ ಸಮಾಜದ ಮೇಲಿನ ದಾಳಿಗಳ ವಿರುದ್ಧ ಸೆಣಿಸಿದ ಮನುಷ್ಯ, ಜನತೆಯನ್ನು ರಕ್ಷಿಸಿದಾತ.

ಕರಾಳ ಶಾಸನಗಳ ಪಿತಾಮಹ ಡ್ರಾಕೋಸ್ :

ಪ್ರಾಚೀನ ಅಥೆನ್ಸ್ ಇತಿಹಾಸದಲ್ಲಿ ನಗರ ಪ್ರಭುತ್ವದ ಸ್ಥಾಪನೆಗೆ ಕಾರಣವಾದ ಅಂದಿನ ಸಾಮಾಜಿಕ ಶಕ್ತಿಗಳ ನಡುವಿನ ಆಂತರಿಕ ಹೋರಾಟದ ಭಾಗವಾಗಿ 2640 ವರ್ಷಗಳ ಹಿಂದೆ ಜಗತ್ತಿನ ಮೊಟ್ಟಮೊದಲ ಲಿಖಿತ ಕಾನೂನಿನ ಸಂಹಿತೆಯನ್ನು ಅಂದಿನ ಆಡಳಿತದ ಭಾಗವಾಗಿ ರೂಪಿಸಿದಾತ 'ಡ್ರಾಕೋ'. ಆ ಕಾನೂನಿನ ಸಂಹಿತೆ ಎಷ್ಟು ಕರಾಳತೆಯನ್ನು ಮತ್ತು ಜನತೆಯ ತಿರಸ್ಕಾರಕ್ಕೆ ಒಳಗಾಗಿತ್ತು ಎಂಬುದಕ್ಕೆ ಇಂದಿಗೂ ಸಹಾ ನಾವು ಎಲ್ಲಾ ಕರಾಳ ಶಾಸನಗಳನ್ನು 'ಡ್ರಾಕೋನಿಯನ್' ಎಂದೆ ಕರೆಯುವುದಕ್ಕೆ ಕಾರಣೀಭೂತವಾಗಿದೆ. ಈ ಲಿಖಿತ ಶಾಸನದ ನಂತರವು ಸಹಾ ಅಲ್ಲಿನ ಸಾಮಾಜಿಕ ಅಶಾಂತಿ ಅಂತ್ಯಕಾಣಲಿಲ್ಲ.

ಬಡ ರೈತರ ಸಾಲ ಮನ್ನ ನಗರ ಪ್ರಭುತ್ವದ ಗ್ರೀಸ್ ದಾಖಲೆ:

ಅಂದಿನ ನಾಗರೀಕ ಅಶಾಂತಿಯನ್ನು ತಡೆಯಲು 25 ವರ್ಷಗಳ ನಂತರ 'ಸೋಲೊನ್' ಎಂಬಾತ ಮತ್ತೊಂದು 'ಕಾನೂನು ಸಂಹಿತೆ' ರೂಪಿಸುತ್ತಾನೆ. 2615 ವರ್ಷಗಳ ಹಿಂದೆಯೇ ಪ್ರಥಮ ಬಾರಿಗೆ ಅಲ್ಲಿನ 'ನಗರ ಪ್ರಭುತ್ವ' ವು ಬಡರೈತರ ಸಾಲ ಮನ್ನಾ ಮಾಡಿತ್ತು. ಸೋಲೊನ್ ರಚಿಸಿದ ಕಾನೂನು ಸಂಹಿತೆ ಅದಕ್ಕೆ ಅನುವುಗೊಳಿಸಿತ್ತು.



ಪ್ರಜಾಪ್ರಭುತ್ವ – ಅಥೆನ್ಸ್ ನಗರ ಪ್ರಭುತ್ವ :

ಆನಂತರವು ಅಲ್ಲಿ ನಾಗರೀಕ ಶಾಂತಿ ಸ್ಥಾಪನೆಯಾಗದ ಕಾರಣ ಆಯ್ಕೆಯಾದ **ಕ್ಲೈಸ್‌ಥೆನೆಸ್** ಆಡಳಿತದಲ್ಲಿ ಸುಧಾರಣೆ ತಂದು 2526 ವರ್ಷಗಳ ಹಿಂದೆ ಪ್ರಥಮ ಬಾರಿಗೆ **'ಮಧ್ಯಮ ಮತ್ತು ಕೆಳವರ್ಗದ ಜನತೆ' – 'ಡೆಮೋಸ್' (ಪ್ರಜೆಗಳನ್ನು)** ಬೆಂಬಲಿಸಿ ಅವರ ಪ್ರಭುತ್ವ **'ಪ್ರಜಾಪ್ರಭುತ್ವ'** ಸ್ಥಾಪನೆಗೆ ಇತಿಹಾಸದಲ್ಲಿ


ಪುಟ 10 ಕ್ಕೆ

ಅಖಿಲ ಭಾರತ ಕಿಸಾನ್ ಸಭಾ ಕರೆ

ಆಗಸ್ಟ್ 9 ಜೈಲ್ ಭರೋ ಯಶಸ್ವಿಗೊಳಿಸಿರಿ

ಯು. ಬಸವರಾಜ್

‘ಆಗಸ್ಟ್ 9 ಜೈಲ್ ಭರೋ’ ರಾಜ್ಯದಾದ್ಯಂತ ಸುಮಾರು 50,000 ರೈತರು, ಕೂಲಿಕಾರರು, ಕಾರ್ಮಿಕರು, ದಲಿತರು, ಮಹಿಳೆಯರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಜಿಲ್ಲೆಗಳಲ್ಲಿ ಹಲವೆಡೆ ಹಲವು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ರಾಜ್ಯದಾದ್ಯಂತ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಜಂಟಿ ಸಭೆಗಳು ನಡೆದಿವೆ. ಜಿಲ್ಲಾ ಹಾಗೂ ತಾಲೂಕಾ ಮಟ್ಟದಲ್ಲಿ ಜಂಟಿ ವಾಹನ ಜಾಥಾಗಳು ಜುಲೈ 20ರಿಂದ ರಾಜ್ಯದಾದ್ಯಂತ ಆರಂಭಗೊಂಡು, ರಾಜ್ಯದ ಲಕ್ಷಾಂತರ ರೈತರು-ಕೂಲಿಕಾರರು ಮತ್ತು ಕಾರ್ಮಿಕರು, ದಲಿತರು, ಮಹಿಳೆಯರ ನಡುವೆ ನೂರಾರು ಬೀದಿ ಬದಿ ಸಭೆಗಳನ್ನು ಸಂಘಟಿಸುವ, ಸಹಿ ಸಂಗ್ರಹ ಮಾಡುವ ಮತ್ತು ಲಕ್ಷಾಂತರ ಕರಪತ್ರಗಳನ್ನು ವಿತರಿಸುವ ಮೂಲಕ ವ್ಯಾಪಕವಾದ ಪ್ರಚಾರದಲ್ಲಿ ತೊಡಗಿದ ವರದಿಗಳಿವೆ. ಈ ಎಲ್ಲಾ ಜನಸಮುದಾಯಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.



ಅಖಿಲ ಭಾರತ ಕಿಸಾನ್ ಸಭಾ ಅಂದರೆ, ಕರ್ನಾಟಕ ಪ್ರಾಂತ ರೈತ ಸಂಘ ಸೇರ್ಪಡೆಗೊಂಡ ಅಖಿಲ ಭಾರತ ರೈತ ಸಂಘವು, ಕೇಂದ್ರ ಸರಕಾರದ ರೈತ ಹಾಗೂ ಪಾರಂಪರಿಕ ಕೃಷಿರಂಗದ ವಿರೋಧಿ ನೀತಿಗಳನ್ನು ಪ್ರತಿರೋಧಿಸಿ ಮತ್ತು 4 ಪ್ರಮುಖ ಹಕ್ಕೊತ್ತಾಯಗಳಿಗಾಗಿ, ಆಗಸ್ಟ್ 9, 2018 ರಂದು ದೇಶವ್ಯಾಪಿಯಾಗಿ ಜೈಲ್ ಭರೋ ಚಳುವಳಿಯನ್ನು ನಡೆಸಲು ಕರೆ ನೀಡಿದೆ. ಈ ಚಳುವಳಿಯಲ್ಲಿ ದೇಶದಾದ್ಯಂತ ಸುಮಾರು 5 ಲಕ್ಷಕ್ಕೂ ಹೆಚ್ಚಿನ ರೈತ–ಕೂಲಿಕಾರ ಸ್ವಯಂ ಸೇವಕರು ಜೈಲ್‌ಗೆ ತೆರಳಲಿದ್ದಾರೆಂದು ಅದಕ್ಕಾಗಿ ದೇಶದಾದ್ಯಂತ ತನ್ನ ರಾಜ್ಯ ಘಟಕಗಳು ಅಗತ್ಯ ವ್ಯಾಪಕ ಸಿದ್ದತೆ ನಡೆಸಿಯೆಂದು ಪ್ರಕಟಿಸಿದೆ. ಮುಂಬರುವ ದಿನಗಳಲ್ಲಿ ದೇಶದಾದ್ಯಂತ ರೈತ–ಕೂಲಿಕಾರ–ಕಾರ್ಮಿಕ ಮತ್ತಿತರೇ ಪ್ರಗತಿಪರ ಸಂಘಟನೆಗಳು ಒಟ್ಟಾಗಿ ನಡೆಸಲಿರುವ ಬಹುದೊಡ್ಡ ಜಂಟಿ ಚಳುವಳಿಗಳ ಭಾಗವಿದಾಗಿದೆ.



ಹಾಸನ

ಅಖಿಲ ಬಾರತ ಕಿಸಾನ್ ಸಭಾ ನೇತೃತ್ವದಲ್ಲಿ ಸ್ವತಂತ್ರವಾಗಿ ಮತ್ತು ಜಂಟಿಯಾಗಿ ದೇಶದ ಹಾಗೂ ಜಗತ್ತಿನ ಗಮನ ಸೆಳೆಯುವಂತಹ ರೈತ ಚಳುವಳಿಗಳು ಈ ಅವಧಿಯಲ್ಲಿ ಬೆಳೆದು ಬರುತ್ತಿರುವುದನ್ನು ಗಮನಿಸಿದ ದೇಶದ ಅತಿ ದೊಡ್ಡ ಸಮರಶೀಲ ಕಾರ್ಮಿಕರ ಸಂಘಟನೆಯಾದ ಸಿಐಟಿಯು ಈಚೆಗೆ ದೆಹಲಿಯಲ್ಲಿ ಸೇರಿದ ತನ್ನ ಅಖಿಲ ಬಾರತ ವರ್ಕಿಂಗ್ ಕಮಿಟಿ ಸಭೆಯಲ್ಲಿ ಅವುಗಳನ್ನು ಸ್ವಾಗತಿಸಿದೆ. ಅಖಿಲ ಭಾರತ ಕಿಸಾನ್ ಸಭಾ ಕರೆ ನೀಡಿದ ಆಗಸ್ಟ್ 9, 2018ರ ಜೈಲ್ ಭರೋ ಚಳುವಳಿಯನ್ನು ಸರ್ವಾನುಮತದಿಂದ ಬೆಂಬಲಿಸಲು ಮತ್ತು ಆ ಚಳುವಳಿಯಲ್ಲಿ ದೇಶದಾದ್ಯಂತ ಕಾರ್ಮಿಕರನ್ನು ತೊಡಗಿಸಲು ನಿರ್ಧರಿಸಿ ದೇಶದಾದ್ಯಂತ ಇರುವ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಕರ್ನಾಟಕದಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘ ಅಖಿಲ ಭಾರತ ಕಿಸಾನ್ ಸಭಾ ಗುರುತಿಸಿದ 4 ಹಕ್ಕೊತ್ತಾಯಗಳಿಗೆ ಇನ್ನೆರಡು ಸೇರಿಸಿ ಒಟ್ಟು 6 ಪ್ರಮುಖ ಹಕ್ಕೊತ್ತಾಯಗಳಿಗಾಗಿ ಸಿಐಟಿಯು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಲಿತ ಹಕ್ಕುಗಳ ಸಮಿತಿ (ಕರ್ನಾಟಕ), ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಹಾಗೂ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘಗಳ ಜೊತೆ ಸೇರಿ ಜಂಟಿಯಾಗಿ ಜೈಲ್ ಭರೋ ಚಳುವಳಿಯನ್ನು ರಾಜ್ಯದಾದ್ಯಂತ ಸಂಘಟಿಸಲು ನಿರ್ಧರಿಸಿದೆ.

ಅದಾಗಲೇ, ಈ ಜಂಟಿ ಚಳುವಳಿಯ ಸಿಧ್ಧತೆಗಳು ಭರದಿಂದ ಸಾಗಿವೆ. ಅಂದಾಜಿನಂತೆ ರಾಜ್ಯದಾದ್ಯಂತ ಸುಮಾರು 50,000 ರೈತರು, ಕೂಲಿಕಾರರು, ಕಾರ್ಮಿಕರು, ದಲಿತರು, ಮಹಿಳೆಯರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಜಿಲ್ಲೆಗಳಲ್ಲಿ ಹಲವೆಡೆ ಹಲವು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ರಾಜ್ಯದಾದ್ಯಂತ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಜಂಟಿ ಸಭೆಗಳು ನಡೆದಿವೆ. ಜಿಲ್ಲಾ ಹಾಗೂ ತಾಲೂಕಾ ಮಟ್ಟದಲ್ಲಿ ಜಂಟಿ ವಾಹನ ಜಾಥಾಗಳು ಜುಲೈ 20ರಿಂದ ರಾಜ್ಯದಾದ್ಯಂತ ಆರಂಭಗೊಂಡು, ರಾಜ್ಯದ ಲಕ್ಷಾಂತರ ರೈತರು–ಕೂಲಿಕಾರರು ಮತ್ತು ಕಾರ್ಮಿಕರು, ದಲಿತರು, ಮಹಿಳೆಯರ ನಡುವೆ ನೂರಾರು ಬೀದಿ ಬದಿ ಸಭೆಗಳನ್ನು ಸಂಘಟಿಸುವ, ಸಹಿ ಸಂಗ್ರಹ ಮಾಡುವ ಮತ್ತು ಲಕ್ಷಾಂತರ ಕರಪತ್ರಗಳನ್ನು ವಿತರಿಸುವ ಮೂಲಕ ವ್ಯಾಪಕವಾದ ಪ್ರಚಾರದಲ್ಲಿ ತೊಡಗಿದ ವರದಿಗಳಿವೆ. ಈ ಎಲ್ಲಾ ಜನಸಮುದಾಯಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಕೇಂದ್ರ ಸರಕಾರದ ಜನ ವಿರೋಧಿ ಕ್ರಮಗಳನ್ನು ಪ್ರತಿರೋಧಿಸಿರಿ :

ಕಳೆದ ಲೋಕ ಸಭಾ ಚುನಾವಣೆಯಲ್ಲಿ ದೇಶದ ಜನತೆಗೆ ನೀಡಿದ್ದ ಯಾವುದೇ ಭರವಸೆಗಳನ್ನು ಶ್ರೀ ನರೇಂದ್ರಮೋದಿ ನೇತೃತ್ವದ ಬಿಜೆಪಿಯ ಕೇಂದ್ರ ಸರಕಾರ ಈಡೇರಿಸದೇ, ದೇಶದ ದುಡಿಯುವ ಜನತೆಗೆ ಮುಖ್ಯವಾಗಿ ಗ್ರಾಮೀಣ ಪ್ರದೇಶದ ಜನತೆಗೆ ಹಾಗೂ ರೈತರ ಬೆನ್ನಿಗೆ ಚೂರಿ ಹಾಕಿದೆ.

ಬಿಜೆಪಿ ಹಾಗೂ ಸಂಘ ಪರಿವಾರಗಳು ಚುನಾವಣೆಯಲ್ಲಿ ಭರವಸೆ ನೀಡಿದ ಎಲ್ಲರಿಗೂ ‘ಒಳ್ಳೆಯ ದಿನ’ ತರುವ ಮತ್ತು ವಿದೇಶಗಳಲ್ಲಿರುವ ಭಾರತೀಯ ಖದೀಮರ ಕಪ್ಪು ಹಣವನ್ನು ಹೊರಗೆಳೆದು ಎಲ್ಲರ ಬ್ಯಾಂಕ್ ಖಾತೆಗಳಿಗೆ ತಲಾ 15 ಲಕ್ಷ ಜಮಾ ಮಾಡುವ ಒಂದೇ ಭರವಸೆಯನ್ನು ಈಡೇರಿಸಿದ್ದರೂ, ಈ ನಾಲ್ಕುವರೆ ವರ್ಷಗಳ ಅವಧಿಯಲ್ಲಿ ಸುಮಾರು 50,000ಕ್ಕೂ ಅಧಿಕ ಜನ ರೈತರು ಆತ್ಮಹತ್ಯೆ ಮಾಡಿಕೊಂಡು ಅವರ ಕುಟುಂಬಗಳನ್ನು ಬೀದಿ ಪಾಲು ಮಾಡುತ್ತಿರಲಿಲ್ಲ. ಲಕ್ಷಾಂತರ ಬಡವರು, ಮಕ್ಕಳು, ಮಹಿಳೆಯರು ಅಪೌಷ್ಠಿಕತೆಯ ಹಸಿವಿನ ಅಕಾಲಿಕ ಸಾವುಗಳಿಗೆ ಈಡಾಗುವುದನ್ನು ತಪ್ಪಿಸ ಬಹುದಾಗಿತ್ತು.


ಕಮಲಾಪುರ

ನರೇಂದ್ರ ಮೋದಿಯವರು ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ದೇಶದಾದ್ಯಂತ 300 ಕ್ಕೂ ಅಧಿಕ ಬೃಹತ್ ಬಹಿರಂಗ ಸಭೆಗಳನ್ನು ನಡೆಸಿ, ರೈತರ ಆತ್ಮಹತ್ಯೆಗಳನ್ನು ತಡೆಯಲು ರೈತರ ಕೃಷಿ ಉತ್ಪನ್ನಗಳಿಗೆ ಕೃಷಿ ಆಯೋಗದ ಅದ್ಯಕ್ಷರಾದ ಡಾ.ಎಂ.ಎಸ್.ಸ್ವಾಮಿನಾಥನ್‌ರ ಸಲಹೆಯಂತೆ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಲೆ ನೀಡುವುದಾಗಿ ಮತ್ತು ಸಾಲಮನ್ನಾ ಮಾಡುವುದಾಗಿ ಭರವಸೆ ನೀಡಿದ್ದರು. ಈ ನಾಲ್ಕುವರೆ ವರ್ಷಗಳಲ್ಲಿ ದೇಶದಾದ್ಯಂತ ರೈತಸಂಘಗಳ ಹಲವು ಬಾರಿ ಒತ್ತಾಯದ ಮತ್ತು ಹಲವು ರಾಜ್ಯ ಸರಕಾರಗಳ ಕೇಳಿಕೆಗಳ ನಂತರವೂ, ಕೇಂದ್ರ ಸರಕಾರ ರೈತರ ಸಾಲವನ್ನು ಮನ್ನಾ ಮಾಡಲಿಲ್ಲ. ಬದಲಿಗೆ, ಸುಮಾರು 12 ಲಕ್ಷ ಕೋಟಿ ಸಾರ್ವಜನಿಕ ಬ್ಯಾಂಕುಗಳಿಂದ ಸಾಲ ಪಡೆದು ಅವುಗಳನ್ನು ಮುಳುಗಿಸಿದ ದೊಡ್ಡ ದೊಡ್ಡ ಬಂಡವಾಳದಾರರ ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡಿದೆ. ಬಹುತೇಕ ಅವು ಬರಲಾರದ ಅಥವಾ ಕಟ್ಟಲಾಗದ ಸಾಲಗಳೆಂದು ಬ್ಯಾಂಕುಗಳು ಪರಿಗಣಿಸುವಂತೆ ಮಾಡಲಾಗಿದೆ.

ಫೆಬ್ರವರಿ 20, 2015 ರಂದು ಸುಪ್ರಿಂ ಕೋರ್ಟ್‌ಗೆ ಪ್ರಮಾಣ ವಚನ ಸಲ್ಲಿಸಿ, ಡಾ. ಎಂ.ಎಸ್ ಸ್ವಾಮಿನಾಥನ್ ಸಲಹೆಯಂತೆ ಕೃಷಿ ಉತ್ಪನ್ನಗಳಿಗೆ ಬೆಲೆಯನ್ನು ನಿಗದಿಸಿ ಖಾತರಿಯಾಗಿ ನೀಡಲಾಗದೆಂದು ಹೇಳಿ, ಆಗಲೇ ದೇಶದ ಅನ್ನದಾತರ ಬೆನ್ನಿಗೆ ನರೇಂದ್ರಮೋದಿ ಸರಕಾರ ಇರಿದಿದೆ. ಈಗ ಮತ್ತೊಮ್ಮೆ, ದೇಶದ ರೈತರನ್ನು ವಂಚಿಸಲು 2022 ರೊಳಗೆ ರೈತರ ಆದಾಯ ದ್ವಿಗುಣಗೊಳ್ಳುತ್ತದೆ ಮತ್ತು ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು 2018 ರ ಸಾಲಿಗೆ ನೀಡಲಾಗಿದೆಯೆಂದು ಬೆಂಬಲ ಬೆಲೆಗಳನ್ನು ತೋರಿಸಿ ಸುಳ್ಳು ಹೇಳುತ್ತಿದೆ. ಡಾ. ಎಂ.ಎಸ್. ಸ್ವಾಮಿನಾಥನ್ ಸಲಹೆಯಂತೆ, ಕೃಷಿ ಉತ್ಪನ್ನಗಳ ಒಟ್ಟು ವೆಚ್ಚವನ್ನು ಪರಿಗಣಿಸದೇ, ಕೇವಲ ಹೂಡಿಕೆಗಳಾದ ಬೀಜ, ಗೊಬ್ಬರ, ಕ್ರಿಮಿನಾಶಕಗಳು ಹಾಗೂ ಕುಟುಂಬದ ಶ್ರಮವೆಚ್ಚವನ್ನು ಮಾತ್ರ ಪರಿಗಣಿಸಿ, ದುರುದ್ದೇಶದಿಂದಲೇ ಒಟ್ಟು ಉತ್ಪಾದನಾ ವೆಚ್ಚವನ್ನು ಕಡಿಮೆ ಲೆಕ್ಕಿಸಿ ಮೋಸಮಾಡುತ್ತಿದೆ. ಈ ಅವಧಿಯಲ್ಲಿ ಹಲವು ರಾಜ್ಯ ಸರಕಾರಗಳು ಕೇಂದ್ರ ಸರಕಾರ ನಿಗದಿಸಿದ ಬೆಂಬಲ ಬೆಲೆ ಕಡಿಮೆಯೆಂದು ಸ್ವಲ್ಪ ಮಟ್ಟಿಗೆ ರಾಜ್ಯ ಸರಕಾರಗಳು ಸಹಾಯಧನವನ್ನು ಘೋಷಿಸಿ ಬೆಲೆಗಳನ್ನು ಹೆಚ್ಚಿಸಲು ಮುಂದಾದಾಗ ರಾಜ್ಯ ಸರಕಾರಗಳ ಕ್ರಮಗಳನ್ನು ವಿರೋಧಿಸಿದೆ, ಮಾತ್ರವಲ್ಲ ಅನುದಾನ ಕಡಿತ ಮಾಡುವುದಾಗಿ ಬೆದರಿಸಿದೆ.

ಪ್ರಾಕೃತಿಕ ವಿಕೋಪಗಳಿಂದುಂಟಾಗುವ ನಷ್ಟದಿಂದ ರೈತರನ್ನು ರಕ್ಷಿಸುವ ಉದ್ದೇಶದಿಂದ

ಪುಟ 10 ಕ್ಕೆ


ಮುಳಬಾಗಿಲು



ಆಗಸ್ಟ್ 9 ಜೈಲ್ ಭರೋ ಯಶಸ್ವಿಗೊಳಿಸಿರಿ........ ಪುಟ 9 ರಿಂದ

ಜಾರಿಗೆ ತರಲಾಗಿದೆಯೆಂದು ಹೇಳಲಾದ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯು, ಅದು ರೈತರ ಪರವಾಗಿರದೇ, ರೈತರು ರಾಜ್ಯ ಹಾಗೂ ಕೇಂದ್ರ ಸರಕಾರಗಳಿಂದ ಪಡೆಯುವ ಹತ್ತಾರು ಸಾವಿರ ಕೋಟಿ ರೂಗಳ ಪ್ರಿಮಿಯಂ ಹಣವನ್ನು ಲೂಟಿ ಮಾಡಿಕೊಳ್ಳಲು ಖಾಸಗೀ ವಿಮಾ ಕಂಪೆನಿಗಳಿಗೆ ನೆರವಾಗಿರುವುದು ನಮ್ಮ ಅನುಭವವಾಗಿದೆ.

ದಲಿತರು, ಹಿಂದುಳಿದ ಮತ್ತಿತರೇ ಜನ ಸಮುದಾಯಗಳ ವ್ಯವಸಾಯದಲ್ಲಿ ತೊಡಗಲು ಇಚ್ಚಿಸುವ ಬಡವರಿಗೆ ಭೂಮಿ ನೀಡುವ ಬದಲು, ದೇಶದಾದ್ಯಂತ ಇರುವ ಕೋಟ್ಯಾಂತರ ಎಕರೆಗಳ ಸರಕಾರಿ ಜಮೀನುಗಳನ್ನು ಭೂ ಬ್ಯಾಂಕುಗಳಿಗೆ ಸೇರ್ಪಡೆ ಮಾಡಲು ರಾಜ್ಯಗಳಿಗೆ ಸೂಚಿಸುತ್ತದೆ. ನರೇಂದ್ರಮೋದಿ ಸರಕಾರ ತನ್ನ ಮೊದಲೆರಡು ವರ್ಷಗಳ ಆಡಳಿತದಲ್ಲಿ ರೈತರಿಂದ ಬಲವಂತವಾಗಿ ಕೊಟ್ಯಾಂತರ ಎಕರೆ ಜಮೀನುಗಳನ್ನು ಬೇಕಾಬಿಟ್ಟಿ ದರಕ್ಕೆ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಬಂಡವಾಳದಾರರಿಗೆ ದೊರಕಿಸಿ ಕೊಡಲು ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ಮಾಡಲು ಸತತ ಪ್ರಯತ್ನ ನಡೆಸಿ, ದೇಶದಾದ್ಯಂತ ಬೆಳೆದುಬಂದ ಭೂಮಿ ಅಧಿಕಾರ ಆಂದೋಳನ ಮತ್ತು ಅಖಿಲ ಭಾರತ ಕಿಸಾನ್ ಸಭಾಗಳು ಸಂಘಟಿಸಿದ ಹೋರಾಟಗಳಿಗೆ ಬೆದರಿ ಹಿಂಪಡೆಯ ಬೇಕಾಯಿತು. ಆದಾಗಲೂ, ಹಲವು ರಾಜ್ಯಗಳಲ್ಲಿ ಲಕ್ಷಾಂತರ ಎಕರೆ ಬಲವಂತವಾಗಿ ಸ್ವಾಧೀನ ಪಡಿಸಿಕೊಂಡ ಜಮೀನುಗಳನ್ನು ಬಂಡವಾಳದಾರರು ಉಳಿಸಿಕೊಳ್ಳಲು ಹಲವು ಸುಗ್ರೀವಾಜ್ಞೆಗಳ ಮೂಲಕ ಯತ್ನಿಸಿತು. ದೇಶದಾದ್ಯಂತ ಬೀಳು ಬಿಡಲಾಗಿರುವ ಜಮೀನುಗಳನ್ನು ರೈತರು ಅಭಿವೃದ್ಧಿ ಪಡಿಸಿಕೊಳ್ಳಲು ಅಗತ್ಯ ನೆರವು ನೀಡದೇ, ಬಹುರಾಷ್ಟ್ರೀಯ ಸಂಸ್ಥೆಗಳು ಅವುಗಳನ್ನು ಗುತ್ತಿಗೆಗೆ ಪಡೆದು ಕಂಪೆನಿ ಬೇಸಾಯದಲ್ಲಿ ತೊಡಗಲು ಅನುಕೂಲ ಮಾಡಿ ಕೊಟ್ಟಿದೆ.

ಜಾಗತೀಕರಣದ ನೀತಿಗಳನ್ನು ಮತ್ತಷ್ಟು ವೇಗವಾಗಿ ಜಾರಿಗೊಳಿಸುತ್ತಿರುವ ಕೇಂದ್ರ ಸರಕಾರ ವ್ಯವಸಾಯದ ಮೇಲಿನ ದಾಳಿಯನ್ನು ಬಲವಾಗಿ ಮುಂದುವರೆಸುತ್ತಿರುವುದಲ್ಲದೇ, ಬಹುರಾಷ್ಟ್ರೀಯ ಸಂಸ್ಥೆಗಳ ಕಂಪೆನಿ ಕೃಷಿಗೆ ಕ್ರಮವಹಿಸುತ್ತಿದೆ. ಕೃಷಿಕರ ಉಪ ಕಸುಬಾದ ಹೈನುಗಾರಿಕೆಯ ಮೇಲೆ ದಾಳಿಯನ್ನೂ ಹರಿಬಿಟ್ಟಿದೆ. ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿಲು ಕ್ರಮವಹಿಸಿತು. ಅಖಿಲ ಭಾರತ ಕಿಸಾನ್ ಸಭಾ ಸುಪ್ರಿಂ ಕೋರ್ಟನಲ್ಲಿ ಪ್ರಶ್ನಿಸಿದ್ದರಿಂದ ಅದಕ್ಕೆ ತಡೆ ಸಿಕ್ಕಿದೆ. ಆದಾಗಲೂ ಗೋ–ಸಂರಕ್ಷರ ಹೆಸರಲ್ಲಿ ದೇಶದಾದ್ಯಂತ ಹೈನುಗಾರರು ಮತ್ತು ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದಾಳಿಗಳನ್ನು ಹರಿಬಿಟ್ಟಿದೆ. ಇದರಿಂದ ದೇಶದಾದ್ಯಂತ ಇದುವರೆಗೆ ಸುಮಾರು 34 ಹೈನುಗಾರರು ಮತ್ತು ವ್ಯಾಪಾರಿಗಳು, ದಲಿತರು ಹಾಗೂ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಿ ಕೊಲ್ಲಲಾಗಿದೆ. ಇದುವರೆಗೆ ಈ ಮಾನವ ಹತ್ಯೆಕೋರರ ಮೇಲೆ ಕಠಿಣ ಕ್ರಮ ತಗೆದುಕೊಳ್ಳದೆ ಅವರ ದುಷ್ಕೃತ್ಯಗಳನ್ನು ನಗ್ನವಾಗಿಯೇ ಬೆಂಬಲಿಸಲಾಗುತ್ತಿದೆ. ಈ ಸರಕಾರದ ಹೈನುಗಾರರ ಮತ್ತು ದಲಿತರು ಹಾಗೂ ಅಲ್ಪಸಂಖ್ಯಾತರ ವಿರೋಧಿ ನಿಲುಮೆಗಳಿಂದಾಗಿ ಈ ಗೋಸಂರಕ್ಷಕರೆಂಬ ಕ್ರಿಮಿನಲ್‌ಗಳ ದುಷ್ಕೃತ್ಯಗಳು ಮುಂದುವರೆದಿವೆ. ರಾಜಸ್ಥಾನದ ಅಳವಾರ್‌ನಲ್ಲಿ ಕಳೆದ 4ವರ್ಷಗಳಲ್ಲಿ 3 ಅಲ್ಪಸಂಖ್ಯಾತ ಹೈನುಗಾರರನ್ನು ಕೊಲ್ಲಲಾಗಿದೆ. ಹಿಂದೂ ಮತಾಂಧರು ಜನಪರವಾಗಿ ಕಾರ್ಯ ನಿರ್ವಹಿಸುವ ಪ್ರಗತಿಪರ ಸಾಹಿತಿಗಳನ್ನು, ನ್ಯಾಯವನ್ನು ಎತ್ತಿಹಿಡಿಯುವ ಪತ್ರಕರ್ತರನ್ನು ದೇಶದಾದ್ಯಂತ ಕೊಲ್ಲುತ್ತಿದ್ದಾರೆ. ಹಲವೆಡೆ ಕೊಲೆ ನಡೆದು ಹಲವಾರು ವರ್ಷಗಳಾದರೂ ಈ ಕೊಲೆಗಾರರನ್ನು ಹಿಡಿಯಲಾಗಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿಯನ್ನು, ಮತಾಂತರ ಹಾಗೂ ವೈವಾಹಿಕ ಮುಂತಾದ ಜನಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಗಳನ್ನು ತಡೆಯುವಲ್ಲಿ ಕೇಂದ್ರ ಸರಕಾರ ಜವಾಬ್ದಾರಿಯಿಂದ ವರ್ತಿಸುತ್ತಿಲ್ಲ.

ಈ ಮೂಲಕ ಕೇಂದ್ರ ಸರಕಾರ ರೈತರು–ಕೂಲಿಕಾರರ ವ್ಯವಸಾಯದ ಹಾಗೂ ಹೈನುಗಾರಿಕೆಯ ಹಕ್ಕುಗಳ ಮೇಲೆ ಮತ್ತು ದಲಿತರು, ಅಲ್ಪಸಂಖ್ಯಾತರ ಉದ್ಯೋಗದ ಹಕ್ಕು ಮತ್ತು ಆಹಾರದ ಮತ್ತಿತರೇ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿಗಳನ್ನು ಸಂಘಟಿಸುತ್ತಿದೆ. ಆ ಮೂಲಕ ಜನತೆಯನ್ನು ಒಡೆದಾಳಲು ಕ್ರಮವಹಿಸುತ್ತಿದೆ.

ದೇಶದಲ್ಲಿ ಜನತೆಯನ್ನು ಸಂಕಷ್ಟದಿಂದ ಮತ್ತು ಬಿಕ್ಕಟ್ಟಿನಿಂದ ಪಾರು ಮಾಡಲು ಹಲವು ಪರ್ಯಾಯ ಮಾರ್ಗಗಳನ್ನು ದೇಶದಾದ್ಯಂತ ಎಡ ಮತ್ತು ಪ್ರಗತಿಪರ ಶಕ್ತಿಗಳು ಸ್ಪಷ್ಟವಾಗಿ ತೋರಿಸುತ್ತಿದ್ದರೂ, ಕೇಂದ್ರ ಸರಕಾರ ನವ ಉದಾರೀಕರಣದ ನೀತಿಗಳು ಬಿಟ್ಟರೇ ಅನ್ಯ ಮಾರ್ಗಗಳಿಲ್ಲವೆಂದು ಸುಳ್ಳು ಪ್ರಚಾರ ಮಾಡುತ್ತಾ, ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ದೇಶದ ಪ್ರಾಕೃತಿಕ, ಹಣಕಾಸು, ಮಾನವ ಮುಂತಾದ ಎಲ್ಲಾ ಸಂಪನ್ಮೂಲಗಳನ್ನು ತೆರೆದಿಟ್ಟಿದೆ. ಕಾರ್ಮಿಕರ ಸಂಘಟನಾ ಮತ್ತು ಚೌಕಾಸಿಯ ಹಕ್ಕುಗಳನ್ನು ಮೊಟಕು ಮಾಡುತ್ತಿದೆ. ಕೇಂದ್ರ ಸರಕಾರದ ನೌಕರರಿಗೆ 7ನೇ ವೇತನ ಆಯೋಗ 18,000ಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಕನಿಷ್ಟವೇತನವೆಂದು ಒಪ್ಪಿದ್ದರೂ, ಅದನ್ನು ಎಲ್ಲ ಕಾರ್ಮಿಕರಿಗೆ, ಕೂಲಿಕಾರರಿಗೆ ವಿಸ್ತರಿಸುತ್ತಿಲ್ಲ. ಶಾಶ್ವತ ಉದ್ಯೋಗಗಳನ್ನು ಕಡಿತಗೊಳಿಸಿ ಗುತ್ತಿಗೆ ಆಧಾರದಲ್ಲಿ, ಗೌರವ ವೇತನಕ್ಕಾಗಿ, ತಾತ್ಕಲಿಕ ಹಾಗೂ ಅರೆ ಉದ್ಯೋಗಗಳನ್ನು ವಿಸ್ತರಿಸಲಾಗುತ್ತಿದೆ. ಸ್ಕೀಮು ಕಾರ್ಮಿಕರ ಉದ್ಯೋಗಗಳಿಗೆ ಭದ್ರತೆಯಿಲ್ಲವಾಗಿದೆ.

ಒಂದೆಡೆ ಕಾರ್ಮಿಕರ ಉದ್ಯೋಗ ಭದ್ರತೆಯ ಹಾಗೂ ಹಕ್ಕುಗಳ ಮೇಲೆ ಗಂಭೀರ ದಾಳಿಗಳನ್ನು ಹರಿ ಬಿಟ್ಟಿರುವಾಗಲೇ, ಇನ್ನೊಂದೆಡೆ, ಗ್ರಾಮೀಣ ಪ್ರದೇಶದಿಂದ ವ್ಯವಸಾಯ ವಿರೋಧಿ ನೀತಿಗಳಿಂದ ಬಲವಂತವಾಗಿ ಒಕ್ಕಲೆಬ್ಬಿಸಲ್ಪಟ್ಟು ನಗರಗಳೆಡೆ ದೊಡ್ಡ ಸಂಖ್ಯೆಯಲ್ಲಿ ವಲಸೆ ನಡೆದಿರುವ ಕೂಲಿಕಾರರು, ರೈತರು, ಕಸುಬುದಾರರ ಮೂಲಕ ನಗರದ ಶ್ರಮ ಮಾರುಕಟ್ಟೆಯನ್ನು ವಿಸ್ತಾರಗೊಳಿಸಿ, ಕಾರ್ಮಿಕರ ಭದ್ರತೆಗೆ ಬೆದರಿಕೆಯಾಗುವಂತೆ ಮಾಡಿದೆ.

ದೇಶದ ಜನತೆಯ ತಲಾ ಆದಾಯವನ್ನು ಹೆಚ್ಚಿಸುವ ಬದಲು ಕೆಲವೇ ಶ್ರೀಮಂತರ ಆದಾಯ ವ್ಯಾಪಕವಾಗಿ ಹೆಚ್ಚಾಗುವ ಮತ್ತು ಎಲ್ಲ ದುಡಿಯುವವರ ಆದಾಯಗಳು ಮತ್ತಷ್ಟು ಕುಸಿಯುವಂತೆ ಮಾಡುವ ಅಗತ್ಯ ವಸ್ತುಗಳ ಬೆಲೆಗಳನ್ನು ದಿನೇ ದಿನೇ ಹೆಚ್ಚಿಸಲಾಗುತ್ತಿದೆ.

ಇವುಗಳ ಜೊತೆ, ಅಮೆರಿಕಾದ ಅಡಿಯಾಳುತನವನ್ನು ಮತ್ತಷ್ಟು ಗಟ್ಟಿಗೊಳಿಸುವ ಮೂಲಕ ಜನತೆಯ ಮೇಲೆ ಮತ್ತಷ್ಟು ಸಂಕಷ್ಟಗಳನ್ನು ಮತ್ತು ಹೊರೆಯನ್ನು ಹೇರಲು ಮುಂದಾಗಿದೆ.

ಈ ಹಿನ್ನೆಲೆಯಲ್ಲಿ, ಕೇಂದ್ರದ ಸಂಘ ಪರಿವಾರದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿಜೆಪಿಯ ಕೇಂದ್ರ ಸರಕಾರದ, ಈ ಎಲ್ಲಾ ಜನವಿರೋಧಿಯಾದ, ಬಹುರಾಷ್ಟ್ರೀಯ ಸಂಸ್ಥೆಗಳ ಹಾಗೂ ಬಂಡವಾಳಶಾಹಿ ಭೂಮಾಲಕರ ಪರವಾದ, ಪ್ರಜಾಸತ್ತೆಯ ವಿರೋಧಿಯಾದ, ರಾಷ್ಟ್ರೀಯ ಸಮಗ್ರತೆ ಹಾಗೂ ಐಕ್ಯತೆಗೆ ಮಾರಕವಾದ, ಜನತೆಯನ್ನು ಒಡೆದಾಳುವ ಮತಾಂಧ ನೀತಿಗಳನ್ನು ಎದುರಿಸಲು ಮತ್ತು ಅವುಗಳನ್ನು ಹಿಮ್ಮೆಟ್ಟಿಸಿ ಜನಪರವಾದ ನೀತಿಗಳನ್ನು ಮುನ್ನೆಲೆಗೆ ತರುವ ಅಗತ್ಯತೆ ಇದೆ. ಇಂತಹ ವ್ಯಾಪಕವಾದ ಹೋರಾಟಗಳು ಇಂದಿನ ಅಗತ್ಯವಾಗಿವೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅತ್ಯಂತ ಪ್ರತಿಗಾಮಿಯಾದ ಬಿಜೆಪಿಗೆ ಸರಿಯಾದ ಪಾಠವನ್ನು ಕಲಿಸುವ ನಿಟ್ಟಿನಲ್ಲೂ ಇಂತಹ ಚಳುವಳಿಗಳು ಅವಶ್ಯಕವಾಗಿವೆ. ಇಂತಹ ಮಹತ್ವದ ಉದ್ದೇಶದಿಂದ ನಡೆಸಲಾಗುವ ಜೈಲ್ ಭರೋ ಚಳುವಳಿ ಯಶಸ್ವಿಗೆ ಜನತೆ ಕೈಜೋಡಿಸುವುದು ಅವಶ್ಯವಿದೆ. ■

ಜೈಲ್ ಭರೋ ಚಳುವಳಿಯ ಪ್ರಮುಖ ಹಕ್ಕೊತ್ತಾಯಗಳು:

1. ಸಾಲಬಾಧಿತ ರೈತರು, ಕೂಲಿಕಾರರ, ದಲಿತರ ಆದಿವಾಸಿಗಳ ಮತ್ತು ಸ್ತ್ರೀ ಶಕ್ತಿ ಸಂಘಗಳ ಎಲ್ಲಾ ಸಾಲ ಮನ್ನಾ ಮಾಡಬೇಕು. ಎಲ್ಲಾ ಕೂಲಿಕಾರರು, ಕಸುಬುದಾರರು ಮತ್ತು ರೈತರಿಗೆ ಅಗತ್ಯದಷ್ಟು ಸಾಂಸ್ಥಿಕ ಸಾಲ ದೊರೆಯುವಂತೆ ಮತ್ತು ನಷ್ಟ ಅನುಭವಿಸಿ ಸಾಲಗಾರರಾದಾಗ ಸಾಲಬಾಧೆ ನಿವಾರಣೆಗಾಗಿ ಖಾಸಗೀ ಹಾಗೂ ಸಾಂಸ್ಥಿಕ ಸಾಲವೂ ಸೇರಿದಂತೆ ಸಾಲ ಮನ್ನಾ ಅಥವಾ ಅದಕ್ಕಾಗಿ ಅಗತ್ಯ ನೆರವು ನೀಡುವ ಋಣಮುಕ್ತ ಕಾಯ್ದೆಯನ್ನು ದೇಶ ವ್ಯಾಪ್ತಿಯಾಗಿ ಜಾರಿಗೆ ಬರುವಂತೆ ಅಂಗೀಕರಿಸಬೇಕು.
2. ರೈತರ ಬೆಳೆಯ ವೈಜ್ಞಾನಿಕವಾಗಿ ಲೆಕ್ಕಿಸಲಾದ ಒಟ್ಟು ಉತ್ಪಾದನಾ ವೆಚ್ಚಕ್ಕೆ ಶೇ.50 ಲಾಭಾಂಶ ಸೇರಿಸಿ ನಿಗದಿಸಲಾಗುವ ಕನಿಷ್ಠ ಬೆಂಬಲ ಬೆಲೆಯು ಖಾತರಿಯಾಗಿ ದೊರೆಯುವಂತೆ ಅದನ್ನು ಕಾಯ್ದೆಯಾಗಿಸಬೇಕು.
3. ಎಲ್ಲಾ ನಿವೇಶನ ಹಾಗೂ ವಸತಿ ರಹಿತರಿಗೆ ಹಿತ್ತಲು ಸಹಿತ ಉಚಿತ ಮನೆಯನ್ನು ಕಟ್ಟಿ ಕೊಡಬೇಕು. ಹಿತ್ತಲಿನಲ್ಲಿ ತರಕಾರಿ, ಹಣ್ಣು, ಹೈನುಗಾರಿಕೆ ಮುಂತಾದ ಪಶುಪಾಲನೆ ನಡೆಸಲು ಅಗತ್ಯ ನೆರವಿನ ಯೋಜನೆಗಳನ್ನು ರೂಪಿಸಬೇಕು.
4. ವ್ಯವಸಾಯದಲ್ಲಿ ತೊಡಗಲು ಇಚ್ಚಿಸುವ ಅರ್ಹರಿಗೆ ತಲಾ ಐದು ಎಕರೆ ಜಮೀನನ್ನು ನೀಡಬೇಕು. ಇದಕ್ಕಾಗಿ ಪರಿಶಿಷ್ಟರ ಮತ್ತು ಇತರರ ಜನಸಂಖ್ಯೆಗನುಗುಣವಾದ ಅನುದಾನದಲ್ಲಿ ಶೇ.30 ರಷ್ಟು ಅನುದಾನವನ್ನು ಮೀಸಲಿಡಬೇಕು. ಅಲ್ಲದೇ ಈ ಹಿಂದೆ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾದ ಜಮೀನುಗಳನ್ನು ವಾಪಾಸು ಪಡೆದು ಬಡವರಿಗೆ ಹಂಚಿಕೆ ಮಾಡಬೇಕು. ಬಡ ಬಗರ್‌ಹುಕುಂ ಸಾಗುವಳಿ ದಾರರಿಗೆ ಕೂಡಲೇ ಹಕ್ಕು ಪತ್ರ ನೀಡಬೇಕು.
5. ಉದ್ಯೋಗ ಖಾತ್ರಿ ಕೆಲಸವನ್ನು ಕಡ್ಡಾಯವಾಗಿ 100 ದಿನಗಳ ಕಾಲ ನೀಡಬೇಕು. 100 ದಿನ ಉದ್ಯೋಗ ಪಡೆಯಲಾಗದ ಕುಟುಂಬಗಳಿಗೆ ಕಡ್ಡಾಯವಾಗಿ ನಿರುದ್ಯೋಗ ಭತ್ಯೆ ನೀಡಬೇಕು. ಕೆಲಸದ ದಿನಗಳನ್ನು ಕನಿಷ್ಟ 200 ದಿನಗಳಿಗೆ ಮತ್ತು ನಗರ ಪ್ರದೇಶಕ್ಕೆ ವಿಸ್ತರಿಸಬೇಕು. ಕೂಲಿ ಮೊತ್ತವನ್ನು ಕನಿಷ್ಟ 600 ರೂ. ಗಳಿಗೆ ಹೆಚ್ಚಿಸಬೇಕು. ಕನಿಷ್ಠ 50 ದಿನ ಉದ್ಯೋಗ ಖಾತ್ರಿ ಕೆಲಸ ನಿರ್ವಹಿಸಿದ ಎಲ್ಲರನ್ನು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ವ್ಯಾಪ್ತಿಗೆ ಸೇರಿಸಬೇಕು.
6. ಬೆಳೆ ವಿಮೆಯನ್ನು ರೈತ ಸ್ನೇಹಿಯಾಗಿಸಬೇಕು.
7. ರೈತರು, ಕೂಲಿಕಾರರು, ಕಾರ್ಮಿಕರು ಮತ್ತು ಕಸುಬುದಾರರಿಗೆ ತಲಾ 5,000 ರೂಗಳ ಮಾಸಿಕ ಪಿಂಚಣಿ ಯೋಜನೆ ಜಾರಿಗೊಳಿಸಬೇಕು.




ಸಮಾಜವಾದಕ್ಕಾಗಿ ಗ್ರೀಸ್ ಜನತೆಯೊಂದಿಗೆ..... ಪುಟ 8 ರಿಂದ

ಪ್ರಥಮ ಬಾರಿಗೆ ನಾಂದಿಯಾಡಿದ. ಅಥೆನ್ಸ್‌ನ 'ನಗರ ಪ್ರಭುತ್ವ'ವು ಜಗತ್ತಿನಲ್ಲಿ ಪ್ರಥಮ ಬಾರಿಗೆ ಪ್ರಾಚೀನ ಪ್ರಜಾಪ್ರಭುತ್ವ ವಿದೇಶಾಂಗ ನೀತಿ, ವಿದೇಶಿ ಪ್ರಜೆಗಳಿಗೆ ಪೌರತ್ವ ನೀಡುವ ನೀತಿಗಳನ್ನು ರೂಪಿಸಿತ್ತು. ವಿದೇಶಾಂಗ ನೀತಿ ವಿದೇಶಿ ಪ್ರಜೆಗಳಿಗೆ ನಾಗರೀಕತೆಯ ಹಕ್ಕನ್ನು ಸಹಾ ಅಂದಿನ ಆಡಳಿತ ರೂಪಿಸಿತು.

ಅಗೋರಾದಲ್ಲೆ ಬೆಳೆದ – ಅಗೋರಾದಲ್ಲೆ ಬಿಕ್ಕಟ್ಟಿಗೆ ಸಿಲುಕಿದ ಗ್ರೀಸ್ :

'ಅಗೋರಾ' ಎಂಬ ಆಡಳಿತ ಮತ್ತು ಮಾರುಕಟ್ಟೆ ಪ್ರದೇಶದಲ್ಲಿ ಜನತೆ ತತ್ವಜ್ಞಾನ, ರಾಜಕೀಯದ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಅಂತಹ ಶ್ರೀಮಂತ ಕೊಡುಗೆಗಳನ್ನು ಜಗತ್ತಿಗೆ ನೀಡಿದ ದೇಶದ ಸರ್ಕಾರವು ನವ ಉದಾರವಾದಿ ಆರ್ಥಿಕ ವ್ಯವಸ್ಥೆಯ ಖಾಸಗೀಕರಣ, ಉದಾರೀಕರಣ, ಜಾಗತೀಕರಣಕ್ಕೆ ತುತ್ತಾಗಿ ಮಾರುಕಟ್ಟೆ ಶಕ್ತಿಗಳ ಹಿಡಿತದಲ್ಲಿ ನಲುಗಿ ದಿವಾಳಿಯಾಗಿರುವುದು ದುರಂತವೇ ಆಗಿದೆ. ಬಂಡವಾಳಶಾಹಿ ವ್ಯವಸ್ಥೆ ಹೇಗೆ ಶ್ರೀಮಂತ ನಾಗರೀಕತೆಗಳನ್ನು ದಿವಾಳಿಕೋರತನಕ್ಕೆ ಎಡೆ ಮಾಡುತ್ತದೆ ಎಂಬುದಕ್ಕೆ ಗ್ರೀಸ್ ಒಂದು ತಾಜಾ ಉದಾಹರಣೆಯಾಗಿದೆ. ●



ಬಿ.ಬಿ.ಎಂ.ಪಿ. ಪುನರ್‌ರಚನೆ ಹೇಗಾಗಬೇಕು?

ಅಗಾಧವಾಗಿ ಬೆಳೆದು ನಿಂತ ಬೆಂಗಳೂರು, ನಗರದ ಜೊತೆಗೆ ಸಮಸ್ಯೆಗಳೂ ಬೃಹದಾಕಾರವಾಗಿ ಬೆಳೆಯುತ್ತಿವೆ. ಸಮಸ್ಯೆಗಳ ಪರಿಹಾರಕ್ಕಾಗಿ ತರುತ್ತಿರುವ ಯೋಜನೆಗಳು ಹದವರಿಯದ, ಕೊನೆ ಮುಟ್ಟದ ಯೋಜನೆಗಳಾಗಿ ಜನರು ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಹೇಗಾದರೂ ದಡ ಮುಟ್ಟಿಸುವ ಪ್ರಯತ್ನದ ಭಾಗವಾಗಿ ಬಂದಿದ್ದೇ ಮಾಜಿ ಐ.ಎ.ಎಸ್ ಅಧಿಕಾರಿ ಬಿ.ಎಸ್. ಪಾಟೀಲ್ ನೇತ್ರತ್ವದಲ್ಲಿ ರಚನೆಯಾದ ಬಿ.ಬಿ.ಎಂ.ಪಿ ಪುನರ್ರಚನೆ ಸಮಿತಿ. ಈ ಸಮಿತಿ ಹಲವು ಹಂತಗಳ ಅಧ್ಯಯನ ಮಾಡಿ, ನಗರ ಯೋಜನೆಗಳ ಅಧ್ಯಯನ ಮಾಡಿದ ಹಲವು ಸಂಘ ಸಂಸ್ಥೆಗಳ ಸಲಹೆಗಳನ್ನೂ ಪಡೆದು ತನ್ನ ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಈ ಕುರಿತು ಚರ್ಚೆ ಮಾಡುವ ಉದ್ದೇಶದಿಂದ ಜುಲೈ 31ರಂದು ಜ್ಯೋತಿ ಬಸು ಭವನದಲ್ಲಿ ಸಂವಾದ ಏರ್ಪಡಿಸಲಾಗಿತ್ತು. ಪುನರ್ರಚನೆಯ ಸಮಿತಿಯ ಸದಸ್ಯರು, ನಗರ ಯೋಜನೆಗಳ ಕುರಿತು ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವ ರವಿ ಚಂದರ್ ರವರು ಪಾಲ್ಗೊಂಡಿದ್ದರು. ಅವರು ತಮ್ಮ ಸಮಿತಿಯ ಶಿಫಾರಸುಗಳನ್ನು ಮಂಡಿಸುತ್ತಾ ನಗರ ಬೆಳೆದಂತೆಲ್ಲ ಬೆಳೆಯುವ ಸಮಸ್ಯೆಗಳನ್ನು ವಿವರಿಸಿದರು. ಲಂಡನ್ ನಗರದ ನಮ್ಮ ಕಾರ್ಪೊರೇಶನ್ ಮಾದರಿಯ ಬರೋಸ್ ಗಳು ನಡೆಸುವ ಕಾರ್ಯ ವಿಧಾನವನ್ನೂ ವಿವರಿಸಿದರು. ಅವೈಜ್ಞಾನಿಕ ರಸ್ತೆ ನಿರ್ಮಾಣ, ಪಾದಚಾರಿಗಳ ದಾಟುದಾರಿಗಳನ್ನು ವಿಶ್ಲೇಷಿಸಿದ ಅವರು ಅಡೆತಡೆಯಿಲ್ಲದೇ ನಡೆಯುವ ಪಾದಚಾರಿ ಮಾರ್ಗಗಳು ಬಳಕೆಗೆ ಲಭ್ಯವಿಲ್ಲದಿರುವುದೂ ಸ್ವಲ್ಪ ಮಟ್ಟಿಗೆ ಸಂಚಾರ ದಟ್ಟಣೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈಗಿರುವ ಕಿರುದಾರಿಗಳಿಂದಾಗಿ



ಕಡಿಮೆ ದೂರದ, ಕಾಲ್ನಡಿಗೆಯಲ್ಲಿ ಚಲಿಸಬಹುದಾದ ದೂರಕ್ಕೂ ವಾಹನ ಬಳಸುವ ಅನಿವಾರ್ಯತೆಯನ್ನು ವಿವರಿಸಿದರು. ಸದ್ಯ ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಟೆಂಡರ್ ಶ್ಯೂರ್ ಮಾದರಿಯ ಫುಟ್ಪಾತ್ ಗಳನ್ನು ಆ ನೆಲೆಯಲ್ಲಿಯೇ ಜಾರಿಗೆ ತಂದಿದ್ದು ಎಂದು ತಿಳಿಸಿದರು.

ರವಿಚಂದರ್ ಅವರು ಸಮಿತಿಯ ಮುಖ್ಯ ಶಿಫಾರಸುಗಳ ಸಾರವನ್ನು ಈ ರೀತಿಯಾಗಿ ಮಂಡಿಸಿದರು

* ವಿಕೇಂದ್ರೀಕರಣ, ಸಂಯೋಜನೆ ಮತ್ತು ಅಗತ್ಯ ಕೇಂದ್ರೀಕರಣದ ಮಿಶ್ರ ರಚನೆ
* ಮೂರು ಹಂತದ ಆಡಳಿತ ರಚನೆ; ಮೂರು ಹಂತಗಳ ಅಧಿಕಾರ ಮತ್ತು ಜವಾಬ್ದಾರಿಗಳ ಸ್ಪಷ್ಟ ಸೂಚನೆ
* ಮೊದಲ ಹಂತದಲ್ಲಿ 20 ಸದಸ್ಯರ ವಾರ್ಡ್ ಸಮಿತಿ, ಸದಸ್ಯರ ಆಯ್ಕೆ ಪ್ರಮಾಣಾತ್ಮಕ ಪ್ರಾತಿನಿಧ್ಯದ ಆಧಾರದ ಮೇಲೆ;
* ಎರಡನೇ ಹಂತದಲ್ಲಿ ಐದು (ಈಗಿನ ವಲಯಗಳನ್ನು ತುಸು ಪುನರ್ರಚಿಸಿ) ಸುಮಾರು 40 ವಾರ್ಡುಗಳ ಕಾರ್ಪೊರೇಶನ್; ಪ್ರತಿ ಕಾರ್ಪೊರೇಶನ್ ಗೆ ನೇರವಾಗಿ ಆಯ್ಕೆಯಾದ ಪೂರ್ಣ ಅವಧಿಯ ಪೂರ್ಣ ಅಧಿಕಾರ ಮತ್ತು ಜವಾಬ್ದಾರಿಯಿರುವ ಮೇಯರ್ ಮತ್ತು ಉಪ ಮೇಯರ್ ಮತ್ತು ಅವರ ಮಂಡಳಿ; ಶಾಸಕರು, ಪಾರ್ಲಿಮೆಂಟ್ ಸದಸ್ಯರಿಗೆ ಯಾವುದೇ ಪಾತ್ರವಿಲ್ಲ.
* ಕ ೊ ನ ೆ ೦ ು ು ಹಂತದಲ್ಲಿ ಬೃಹತ್ ಬೆಂಗಳೂರು ಪ್ರಾಧಿಕಾರ; ಆಯ್ಕೆಯಾದ ಪೂರ್ಣ ಅವಧಿಯ ಪೂರ್ಣ ಅಧಿಕಾರ ಮತ್ತು ಜವಾಬ್ದಾರಿಯಿರುವ ಮೇಯರ್ ಮತ್ತು ಉಪ ಮೇಯರ್; ಎಲ್ಲಾ 5 ಕಾರ್ಪೊರೇಶನ್ ಗಳ ಮೇಯರ್ ಮತ್ತು ಉಪ ಮೇಯರ್ ಇರುವ ಮಂಡಳಿ; ಎಲ್ಲಾ ಅಂತಿಮ ಅಧಿಕಾರ ಮತ್ತು ಜವಾಬ್ದಾರಿ ಪ್ರಾಧಿಕಾರಕ್ಕೆ; ಈಗಿನ ಬಿಬಿಎಂಪಿ ವ್ಯಾಪ್ತಿಯೇ ಅದರ ವ್ಯಾಪ್ತಿ. ನಗರದ ವಿವಿಧ ಸೇವೆಗಳನ್ನು ನಿರ್ವಹಿಸುವ ಎಲ್ಲಾ ಸಂಸ್ಥೆಗಳ (ಮೆಟ್ರೊ, ಬಿಎಂಟಿಸಿ, ಬೆಸ್ಕಾಂ, ನೀರು+ಕೊಳಚೆ ಮಂಡಳಿ) ಸಂಯೋಜನೆ ಮತ್ತು ಒಟ್ಟು ಜವಾಬ್ದಾರಿ; ಪೂರ್ಣ ಪ್ರಮಾಣದ ನಗರ ಸರಕಾರ.
* ನಗರ ಮಟ್ಟದ ಹಣಕಾಸು, ಆರ್ಥಿಕ ಬೆಳವಣಿಗೆ ಕಮಿಶನ್ ರಚನೆ

ಸಿವಿಕ್ ಸಂಸ್ಥೆಯ ಕಾರ್ಯನಿರ್ವಾಹಕ ಟ್ರಸ್ಟಿಯಾಗಿರುವ ಕಾತ್ಯಾಯಿನಿ ಚಾಮರಾಜ್ ರವರು ತಮ್ಮ ಸಂಸ್ಥೆಯಿಂದ ಪುನರ್ರಚನಾ ಸಮಿತಿಗೆ ಸಲ್ಲಿಸಿದ ಅಭಿಪ್ರಾಯ ಗಳನ್ನು ವಿವರಿಸಿದರು. ಯಾವುದೇ ಯೋಜನೆ, ಬದಲಾವಣೆಗಳು ಮಾನವೀಯ ದೃಷ್ಟಿಯಿಂದ ರೂಪಿಸಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿ ಅದರ ಫಲಾನುಭವಿಗಳಾಗುವುದು ಆದ್ಯತೆಯಾಗಬೇಕು ಎಂದರು.

ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎನ್ ಉಮೇಶ್ ಮಾತನಾಡಿ ಬಿ.ಬಿ.ಎಂ.ಪಿ.ವ್ಯಾಪ್ತಿಯ ಬೆಂಗಳೂರು ಮತ್ತು ಅದರ ಅಕ್ಕಪಕ್ಕದ ಬೆಂಗಳೂರಿನ ಮಧ್ಯೆ ಇರುವ ವ್ಯತ್ಯಾಸವನ್ನು ತಿಳಿಸಿದರು. ಇತ್ತೀಚಿಗೆ ಗ್ರೀಸ್ ದೇಶದ ಅಥೆನ್ಸ್ ನಗರಕ್ಕೆ ಭೇಟಿ ನೀಡಿದ ಅವರು ಆ ನಗರದ ಅಚ್ಚುಕಟ್ಟು, ಶಿಸ್ತಿನ ಬಗ್ಗೆ ಮಾಹಿತಿ ನೀಡಿದರು. ಬೆಂಗಳೂರು ನಗರದ ಪುನರ್ರಚನೆಯನ್ನು ತಮ್ಮ ತಮ್ಮ ರಾಜಕೀಯ ಕಾರಣಗಳಿಗಾಗಿ ವಿರೋಧಿಸುತ್ತಿರುವುದನ್ನು ವಿವರಿಸಿದರು. ಉತ್ತರ ಕರ್ನಾಟಕ ಭಾಗಕ್ಕೆ ಅನ್ಯಾಯವಾಗಿದೆ ಎಂದು ಕರ್ನಾಟಕ ವನ್ನು ವಿಭಜಿಸುವ ಹೋರಾಟದ ಹಿಂದೆ ನಿಂತು ರಾಜಕಾರಣ ಮಾಡುತ್ತಿರುವ ಬಿ.ಜೆ.ಪಿ.ಯ ಇಬ್ಬಗೆತನವನ್ನು ವಿವರಿಸಿದರು. ಜನರನ್ನು ಭಾವನಾತ್ಮಕವಾಗಿ ಒಡೆಯಲು ಕೆಂಪೇಗೌಡ ಕಟ್ಟಿರುವ ಬೆಂಗಳೂರನ್ನು ಒಡೆಯುತ್ತಾರೆಂಬ ಭಾವನೆ ಬೆಳೆಸುವುದು, ಒಂದೊಂದು ವಿಭಾಗವೆಂದರೆ ಒಂದೊಂದು ಜಾತಿಯ ಜನರ ಪ್ರಾಬಲ್ಯವಾಗುತ್ತದೆ ಎಂದು ಹೇಳುವ ಪಕ್ಷಗಳೂ ಇದ್ದಾವೆ. ಸಿ.ಪಿ.ಐ.(ಎಂ) ದಕ್ಷಿಣ ಜಿಲ್ಲಾ ಸಮಿತಿ ಕಳೆದ ಜಿಲ್ಲಾ ಸಮ್ಮೇಳನದಲ್ಲಿ ಈ ಕುರಿತು ನಿರ್ಣಯವನ್ನು ಅಂಗೀಕರಿಸಿದೆ ಎಂದರು. ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಎಸ್.ವಿಮಲಾ ಈ ವರದಿಯ ಕುರಿತು ಚರ್ಚೆ ನಡೆಸಬೇಕಾಗಿ ಬಂದ ಅಗತ್ಯ, ಮತ್ತು ಅದನ್ನು ಜನಪರವಾಗಿ ಜಾರಿಗೆ ತರಲು ಬೇಕಾದಂತೆ ಸ್ಥಳೀಯ ಮಟ್ಟದಲ್ಲಿ ನಡೆಸಬೇಕಾದ ಕ್ಯಾಂಪೈನ್ ಗಳ ಬಗ್ಗೆ ಪ್ರಾಸ್ತಾವಿಕವಾಗಿ ವಿವರಿಸಿದರು. ಜಯನಗರ ವಲಯ ಸಮಿತಿಯ ಕಾರ್ಯದರ್ಶಿ, ಜಿಲ್ಲಾ ಸಮಿತಿ ಸದಸ್ಯರು ಶ್ರೀಪತಿ ವಂದನಾರ್ಪಣೆ ಮಾಡಿದರು. ●

ಕೇಳಿಸಿದ್ದು

ಟ್ರಾಯ್ ಅಧ್ಯಕ್ಷರ ಆಧಾರ್ ಪ್ರಹಸನ

ಕರ್ನಾಟಕದ ಎಲ್ಲೆಡೆ ಸರಗಳ್ಳರ ಹಾವಳಿ ಹೆಚ್ಚಾಗಿದೆ ಎಂದು ವ್ಯಾಪಕವಾಗಿ ದೂರು ಬಂದರೆ ಪೋಲೀಸ್ ಮಹಾನಿರ್ದೇಶಕರು ಏನು ಮಾಡಬಹುದು?

.. ..

ಇವೆಲ್ಲದರ ಬದಲಿಗೆ ಪೋಲೀಸ್ ಮಹಾನಿರ್ದೇಶಕರು ತಮ್ಮ ಕುತ್ತಿಗೆಯಲ್ಲೊಂದು ದೊಡ್ಡ ಚಿನ್ನದ ಸರವನ್ನು ಧರಿಸಿ ಬೆಂಗಳೂರಿನ ವಿವಿಧ ರಸ್ತೆಗಳಲ್ಲಿ ಏಕಾಂಗಿಯಾಗಿ ಓಡಾಡುತ್ತೇನೆ ಎಂಬ ಪ್ರಕಟಣೆ ನೀಡಿ 'ಧೈರ್ಯವಿದ್ದರೆ ಕಳ್ಳರು ಬಂದು ನನ್ನ ಸರ ಕದಿಯಲಿ' ಎಂದರೆ ಏನಾಗಬಹುದು?

.. ..

ಇಂಥದ್ದೇ ಒಂದು ಘಟನೆ ಎರಡು ದಿನಗಳ ಹಿಂದೆ (ಜುಲೈ 28) ನಡೆಯಿತು. ದೂರಸಂಪರ್ಕ ಕ್ಷೇತ್ರದ ನಿಯಂತ್ರಣದ ಮಟ್ಟಿಗೆ ಪೋಲೀಸ್ ಮಹಾನಿರ್ದೇಶಕರಿಗಿಂತ ಮುಖ್ಯವಾದ ಹುದ್ದೆಯಲ್ಲಿರುವ ಭಾರತೀಯ ದೂರಸಂಪರ್ಕ ಪ್ರಾಧಿಕಾರದ ಅಧ್ಯಕ್ಷ ಆರ್.ಎಸ್. ಶರ್ಮ ತಮ್ಮ ಆಧಾರ್ ಸಂಖ್ಯೆಯನ್ನು ಟ್ವಿಟ್ಟರ್ ನಲ್ಲಿ ಪ್ರಕಟಿಸಿ 'ಇದನ್ನು ಬಳಸಿ ನನಗೆ ಯಾರು ಹಾನಿಯನ್ನುಂಟು ಮಾಡುತ್ತಾರೋ ಮಾಡಿ ತೋರಿಸಲಿ' ಎಂದರು. ಇದನ್ನು ಸವಾಲಾಗಿ ಸ್ವೀಕರಿಸಿದ ಹಲವರು ಆರ್.ಎಸ್. ಶರ್ಮ ಅವರ ಆಧಾರ್ ಸಂಖ್ಯೆಯನ್ನೇ ಆಧಾರವಾಗಿಟ್ಟುಕೊಂಡು ಅವರ ವೈಯಕ್ತಿಕ ವಿವರಗಳನ್ನು ಟ್ವಿಟ್ಟರ್ನಲ್ಲಿ ಪ್ರಕಟಿಸಿದರು. ಅವರ ಬ್ಯಾಂಕ್ ಖಾತೆಯ ಸಂಖ್ಯೆ, ಅವರ ವಾಟ್ಸ್ ಆಪ್ ಖಾತೆಯಲ್ಲಿ ಬಳಸಲಾಗಿರುವ ಛಾಯಾಚಿತ್ರ, ಅವರ ಮೊಬೈಲ್ ಯಾವುದು ಇತ್ಯಾದಿ ವಿವರಗಳೆಲ್ಲವೂ ಬಯಲಾದವು. ಒಬ್ಬರಂತೂ ಅಮೇಜಾನ್ನಲ್ಲಿ ಆರ್.ಎಸ್. ಶರ್ಮ ಹೆಸರಿನಲ್ಲಿ ಕ್ಯಾಶ್ ಆನ್ ಡೆಲಿವರಿ ಷರತ್ತಿನ ಅನ್ವಯ ಮೊಬೈಲ್ ಫೋನ್ ಖರೀದಿಸಿ ಅವರ ಮನೆಗೆ ಕಳುಹಿಸಿಕೊಟ್ಟರು.

.. ..

ಆರ್.ಎಸ್. ಶರ್ಮ ಅವರ ಆಧಾರ್ ಸಂಖ್ಯೆಯನ್ನು ಬಳಸಿ ಈಗಾಗಲೇ ಬಹಿರಂಗ ಪಡಿಸಲಾಗಿರುವ ಮಾಹಿತಿಯನ್ನು ಬಳಸಿ ಅವರ ಬ್ಯಾಂಕ್ ಖಾತೆಗೆ ಕನ್ನಹಾಕುವುದಾಗಲೀ ಅವರ ಇ–ಮೇಲ್ನ ಪಾಸ್ವರ್ಡ್ ಬದಲಾಯಿಸುವುದಾಗಲೀ ಸುಲಭದ ಕೆಲಸವೇ ಆಗಿರಬಹುದು. ಆದರೆ ಅದಕ್ಕೆ ಯಾರೂ ಮುಂದಾಗುವುದಿಲ್ಲ. ಏಕೆಂದರೆ ಶರ್ಮ ಅವರು ಇರುವ ಹುದ್ದೆ ಅವರಿಗೆ ಒದಗಿಸುವ ಸವಲತ್ತುಗಳು ಹೇಗಿವೆ ಎಂದರೆ ಕ್ಷಣಾರ್ಧದಲ್ಲಿ ಹಾಗೆ ಮಾಡಿದವರನ್ನು ಕಂಡುಹಿಡಿಯಲು ಸಾಧ್ಯವಿದೆ. ಒಬ್ಬ ಸಾಮಾನ್ಯ ವ್ಯಕ್ತಿಯ ವಿವರಗಳು ಬಯಲಾದರೆ ಸ್ಥಿತಿ ಹೀಗಿರುವುದಿಲ್ಲ. ಇದು ಹೇಗೆ ಸಂಭವಿಸಬಹುದು ಎಂಬುದಕ್ಕೆ ಆಧಾರ್ ಸಂಖ್ಯೆಯನ್ನು ಬಳಸಿಕೊಂಡು ಈವರೆಗೆ ನಡೆದ ವಂಚನೆಗಳನ್ನು ಗಮನಿಸಿದರೆ ಸಾಕಾಗುತ್ತದೆ. ಬ್ಯಾಂಕ್ ಖಾತೆಯಿಂದ ಹಣ ತೆಗೆಯುವುದರಿಂದ ಆರಂಭಿಸಿ ವಾಹನ ಖರೀದಿಯ ತನಕದ ವಂಚನೆಗಳು ಸಾಧ್ಯ ಎಂಬುದನ್ನು ಈ ಪಟ್ಟಿ ಹೇಳುತ್ತದೆ.

.. ..

ಇಷ್ಟೆಲ್ಲಾ ಅಪಾಯಗಳಿರುವಾಗ ಆರ್.ಎಸ್. ಶರ್ಮ ಅವರಂಥ ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರು ತಮ್ಮ ಆಧಾರ್ ಸಂಖ್ಯೆಯನ್ನು ಹೀಗೆ ಬಹಿರಂಗ ಪಡಿಸುವುದು ತಪ್ಪು ಸಂದೇಶ ನೀಡುತ್ತದೆ. ಆಧಾರ್ ಸಂಖ್ಯೆಯನ್ನು ಬಹಿರಂಗ ಪಡಿಸುವುದರಿಂದ ಯಾವುದೇ ಅಪಾಯವಿಲ್ಲ ಎಂದು ಸಾಮಾನ್ಯ ಜನರು ನಂಬುವಂತಾಗುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ಇದು ಯಐಡಿಎಐ ಕಾಯ್ದೆಯನ್ನು ಉಲ್ಲಂಘಿಸುತ್ತದೆ. ಕಾಯ್ದೆ ಹೇಳುವಂತೆ ಆಧಾರ್ ಸಂಖ್ಯೆಯನ್ನು ಹೀಗೆ ಬಹಿರಂಗಗೊಳಿಸುವುದು ಕಾನೂನಿನ ಉಲ್ಲಂಘನೆ ಇದೇ ಕಾರಣಕ್ಕಾಗಿ ಯುಐಡಿಎಐ ಈಗಾಗಲೇ ಕೇಸುಗಳನ್ನೂ ದಾಖಲಿಸಿದೆ. ಈ ಸಂಸ್ಥೆಯ ಸ್ಥಾಪಕ ಕಾರ್ಯನಿರ್ವಾಹಕರಾಗಿದ್ದವರೇ ಈ ಬಗೆಯ ಕೃತ್ಯದಲ್ಲಿ ತೊಡಗುವುದು ಸರಿಯೇ ಎಂಬ ಪ್ರಶ್ನೆ ಇಲ್ಲಿದೆ.


ಆರ್.ಎಸ್ ಶರ್ಮ ಅವರ ವರ್ತನೆಗಿಂತ ಬಾಲಿಶವಾಗಿ ಕಂಡದ್ದು ಯುಐಡಿಎಐ ಈ ಪ್ರಕರಣಕ್ಕೆ ಪ್ರತಿಕ್ರಿಯಿಸಿದ ರೀತಿ. ಅದು ತಮ್ಮ ಸ್ಥಾಪಕ ಕಾರ್ಯನಿರ್ವಾಹಕರ ವರ್ತನೆಯನ್ನು ಖಂಡಿಸುವ ಬದಲಿಗೆ 'ಟ್ವಿಟ್ಟರ್ ಮತ್ತು ಇತರ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಆರ್.ಎಸ್. ಶರ್ಮ ಅವರಿಗೆ ಸಂಬಂಧಿಸಿದ ವಿವರಗಳನ್ನು ಆಧಾರ್ ದತ್ತ ಸಂಚಯದಿಂದ ಪಡೆಯಲಾಗಿಲ್ಲ. ಇವೆಲ್ಲರೂ ಈಗಾಗಲೇ ಸಾರ್ವಜನಿಕವಾಗಿ ಲಭ್ಯವಿವೆ' ಎಂಬ ಸ್ಪಷ್ಟೀಕರಣವನ್ನು ನೀಡಿತು.

ಟ್ವಿಟ್ಟರ್ನಲ್ಲಿ ಆರ್.ಎಸ್. ಶರ್ಮ ಅವರು ಒಡ್ಡಿದ ಸವಾಲನ್ನು ಸ್ವೀಕರಿಸಿದವರು ಮಾಹಿತಿಯನ್ನು ಕಲೆ ಹಾಕಲು ಬಳಸಿಕೊಂಡದ್ದು ಆಧಾರ್ ಸಂಖ್ಯೆಯನ್ನು ಎಂಬುದರ ಬಗ್ಗೆ ಯುಐಎಡಿಐ ಜಾಣ ಕುರುಡನ್ನು ತೋರುತ್ತಿದೆ. ಆರ್.ಎಸ್. ಶರ್ಮ ಅವರ ಫೋಟೋ ಅಷ್ಟೇಕೆ ಬ್ಯಾಂಕ್ ಖಾತೆ ಸಂಖ್ಯೆಯೂ ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿ ಎಂದು ಒಪ್ಪೋಣ. ಆದರೆ ಅವರ ಜಿಮೇಲ್ ಪಾಸ್ವರ್ಡ್ ಬದಲಾಯಿಸುವ ಗುಪ್ತಪ್ರಶ್ನೆಯ ಉತ್ತರವಂತೂ ಸಾರ್ವಜನಿಕ ಮಾಹಿತಿಯಲ್ಲ. ಅದನ್ನು ಹೇಗೆ ಪಡೆಯಲು ಸಾಧ್ಯವಾಯಿತು ಎಂಬ ಪ್ರಶ್ನೆ ಇಲ್ಲಿ ಉಳಿದೇ ಇದೆ. ಇಷ್ಟಕ್ಕೂ ಸೋರಿಕೆಯಾಗಿರುವ ಮಾಹಿತಿಗಳೆಲ್ಲವೂ ಶಾಶ್ವತ ಸ್ವರೂಪದವು. ಸ್ವಯಂಪ್ರೇರಿತವಾಗಿ ಬಹಿರಂಗ ಪಡಿಸಿದ ಆಧಾರ್ ಸಂಖ್ಯೆಯೇ ಶಾಶ್ವತ ಸ್ವರೂಪದ್ದು. ಇನ್ನು ಬ್ಯಾಂಕ್ ಖಾತೆಗಳು, ದೂರವಾಣಿ ಸಂಖ್ಯೆಗಳನ್ನೆಲ್ಲಾ ಅವರು ಬದಲಾಯಿಸಿಕೊಳ್ಳಬಹುದು. ಆದರೆ ಶಾಶ್ವತ ಸ್ವರೂಪದ ಆಧಾರ್ ಸಂಖ್ಯೆ ಉಳಿದ ಮಾಹಿತಿಗಳನ್ನು ಮತ್ತೆ ಸಂಗ್ರಹಿಸುವ ಹಾದಿಗಳನ್ನು ತೆರೆಯುತ್ತದೆಯಲ್ಲವೇ?

ಟ್ರಾಯ್ ಮುಖ್ಯಸ್ಥರು ಹಾಗೂ ಯುಐಡಿಎಐಗಳೆರಡೂ ಒಟ್ಟಾಗಿ ವೈಯಕ್ತಿಕ ಮಾಹಿತಿಯ ಸೋರಿಕೆಯ ಸಮರ್ಥನೆಗೆ ಒಂದು ತಂತ್ರ ರೂಪಿಸಿದ್ದಾರೆಂದೇ ಭಾವಿಸಬೇಕಾಗುತ್ತದೆ. ಇಲ್ಲಿಯೂ 'ತಂತ್ರಜ್ಞಾನ ವಿಧಿವಾದ' (Technological determinism) ಅದರ ಕೆಟ್ಟ ಮಾದರಿಯಲ್ಲಿ ಬಳಕೆಯಾಗಿದೆ. ಸಾಮಾಜಿಕ ಸಮಸ್ಯೆಯೊಂದನ್ನು ತಾಂತ್ರಿಕವಾಗಿ ಗ್ರಹಿಸಲು ಸಾಧ್ಯವಾದರೆ ಸಮಸ್ಯೆಯ ಸ್ವರೂಪವನ್ನೇ ಬದಲಾಯಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಬಹುದು ಎಂದು ತಂತ್ರ ಜ್ಞಾನ ವಿಧಿವಾದ ಭಾವಿಸುತ್ತದೆ. ಬಾಲಿಶವಾದ ಟ್ವಿಟ್ಟರ್ ಸವಾಲಿನ ಮೂಲಕ ಆಧಾರ್ ದತ್ತಸಂಚಯದ ಸುರಕ್ಷತೆ, ವೈಯಕ್ತಿಕ ಮಾಹಿತಿಯ ರಕ್ಷಣೆ ಕುರಿತ ಗಂಭೀರ ಚರ್ಚೆಗಳೆಲ್ಲವನ್ನೂ ಪ್ರಹಸನದ ಮಟ್ಟಕ್ಕೆ ಇಳಿಸುವಲ್ಲಿ ಆರ್. ಎಸ್. ಶರ್ಮ ಈಗ ಯಶಸ್ವಿಯಾಗಿದ್ದಾರೆ. ಸಾಮಾನ್ಯರು ಆಧಾರ್ ಸಂಖ್ಯೆ ಬಹಿರಂಗ ಪಡಿಸುವುದರಿಂದ ಆಪಾಯವಿಲ್ಲ ಎಂದು ನಂಬಿಸುವ ಅವರ ಯೋಜನೆ ಸ್ವಲ್ಪ ಮಟ್ಟಿಗೆ ಯಶಸ್ಸು ಪಡೆದಿದೆ ಎಂದೇ ಹೇಳಬೇಕಾಗುತ್ತದೆ.

–ಎನ್.ಎ.ಎಂ. ಇಸ್ಮಾಯಿಲ್, ಪ್ರಜಾವಾಣಿ ಜುಲೈ 31

4 ವರ್ಷಗಳ ನಂತರ–ಅರ್ಧದಷ್ಟು ಮಹಾನಗರವಾಸಿಗಳಿಗೂ ಅಚ್ಛೇ ದಿನ್ ನಿರೀಕ್ಷೆಗಳಿಲ್ಲ ಎನ್ನುತ್ತದೆ ಆರ್‌ಬಿಐ ಸರ್ವೆ



ವೇದರಾಜ ಎನ್.ಕೆ.

ಅಚ್ಛೇ ದಿನ್ ರೂವಾರಿಗಳು ಹೊಳೆ–ಹೊಳೆಯುವ ಚಿತ್ರಗಳನ್ನು ಜನಗಳ ಮುಂದಿಡಲು ಪ್ರಯತ್ನಿಸಿದರೂ ನಾಲ್ಕು ವರ್ಷಗಳ ಹಿಂದೆ ಅಮಿತ ವಿಶ್ವಾಸ, ನಿರೀಕ್ಷೆ ವ್ಯಕ್ತಪಡಿಸಿದ್ದ ಮಹಾನಗರವಾಸಿಗಳಲ್ಲಿಯೂ ಅರ್ಧದಷ್ಟು ಮಂದಿಗೆ ಈಗ ಆ ವಿಶ್ವಾಸ, ನಿರೀಕ್ಷೆ ಉಳಿದಿಲ್ಲ ಎಂದು ಹೇಳುತ್ತದೆ ಸ್ವತಃ ಭಾರತೀಯ ರಿಝರ್ವ್ ಬ್ಯಾಂಕಿನ ಬಳಕೆದಾರರ ವಿಶ್ವಾಸ ಕುರಿತಾದ ಇತ್ತೀಚಿನ ಸರ್ವೆಯ ವಿಶ್ಲೇಷಣೆ(ಲೈವ್‌ಮಿಂಟ್.ಕಾಂ, ಆಗಸ್ಟ್2)

ಮಾರ್ಚ್ 2017ರಲ್ಲಿ ಸರ್ವೆಯಲ್ಲಿ ಪಾಲ್ಗೊಂಡವರಲ್ಲಿ 52.8% ಮಂದಿ ತಮ್ಮ ಆದಾಯ ಒಂದು ವರ್ಷದಲ್ಲಿ ಉತ್ತಮಗೊಳ್ಳುತ್ತದೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದರು. ಅದೀಗ ಜೂನ್ 2018ರಲ್ಲಿ 49.8%ಕ್ಕೆ ಇಳಿದಿದೆ.

ಉದ್ಯೋಗದ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂದು ನಿರೀಕ್ಷಿಸುವವರ ಪ್ರಮಾಣ 52.1% ದಿಂದ 49.1% ಕ್ಕೆ ಇಳಿದಿದೆ.

ಒಟ್ಟಾರೆಯಾಗಿ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂದು ನಿರೀಕ್ಷಿಸುವವರ ಪ್ರಮಾಣ 51.8%ದಿಂದ 48.2% ಕ್ಕೆ ಇಳಿದಿದೆ.

ಜೂನ್ 2018ರಲ್ಲಿ 27.7% ಮಂದಿ ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ ಎಂದೇ ಹೇಳಿದ್ದಾರೆ.

ಕಳೆದ ಒಂದು ವರ್ಷದಲ್ಲಿ ತಮ್ಮ ಆದಾಯ ಉತ್ತಮಗೊಂಡಿತು ಎಂದು ಹೇಳಿದವರ ಪ್ರಮಾಣ ಕೇವಲ 25.3%

ಉದ್ಯೋಗ ಪರಿಸ್ಥಿತಿ ಉತ್ತಮಗೊಂಡಿತು ಎಂದವರು 33.5%, ಹದಗೆಟ್ಟಿದೆ ಎಂದವರ ಪ್ರಮಾಣ 40%

ಒಟ್ಟಾರೆ ಆರ್ಥಿಕ ಪರಿಸ್ಥಿತಿ ಕಳೆದ ಒಂದು ವರ್ಷದಲ್ಲಿ ಉತ್ತಮಗೊಂಡಿತು ಎಂದವರ ಪ್ರಮಾಣ 34.6%, ಹದಗೆಟ್ಟಿದೆ ಎಂದವರ ಪ್ರಮಾಣ 42%.

ಈ ಸರ್ವೆಯನ್ನು ರಿಝರ್ವ್ ಬ್ಯಾಂಕ್ ಬೆಂಗಳೂರು, ಚೆನ್ನೈ, ಕೊಲ್ಕತ, ಹೈದರಾಬಾದ್, ಮುಂಬೈ ಮತ್ತು ನವದೆಹಲಿಯಲ್ಲಿ ನಡೆಸುತ್ತದೆ.

ನೋಟುರದ್ಧತಿ ಮತ್ತು ಜಿಎಸ್‌ಟಿಯಿಂದ ಅತಿಯಾಗಿ ಹೊಡೆತ ತಿಂದಿರುವ ಸಣ್ಣ ನಗರಗಳಲ್ಲಿ, ಪಟ್ಟಣಗಳಲ್ಲಿ ಮತ್ತು ಕೃಷಿ ಬಿಕ್ಕಟ್ಟಿನಿಂದ ನರಳುತ್ತಿರುವ, 2014ರಿಂದ 2016ರ ನಡುವೆ 20,008 ರೈತರು ಮತ್ತು 16,324 ಕೃಷಿ ಕೂಲಿಕಾರರು ಆತ್ಮಹತ್ಯೆ ಮಾಡಿಕೊಂಡ (ನಂತರದ ಅಂಕಿ–ಅಂಶ ಸರಕಾರದ ಬಳಿಯೂ ಇಲ್ಲವಂತೆ!) ಹಳ್ಳಿಗಳಲ್ಲಿ ಇಂತಹ ಸರ್ವೆ ನಡೆಸಿದರೆ ಖಂಡಿತಾ 'ಒಳ್ಳೆಯ ದಿನ'ಗಳ ಇನ್ನಷ್ಟು ಕೆಟ್ಟ ಚಿತ್ರ ಪ್ರಕಟವಾಗುತ್ತಿತ್ತು ಎಂದೂ ಈ ವರದಿಗಾರ ಅಭಿಪ್ರಾಯ ಪಟ್ಟಿದ್ದಾರೆ.

ಅದೇ ಪತ್ರಿಕೆಯಲ್ಲಿ ಬಂದಿರುವ ಕೃಷಿಕರ ತೊಂದರೆಗಳ ಅಂಕಿ–ಅಂಶಗಳನ್ನು ನೋಡಿದರೆ ಮಹಾರಾಷ್ಟ್ರದಲ್ಲಿ ಪ್ರಮುಖ ಬೆಳೆಗಳಿಂದ ಪಡೆದ ನಿವ್ವಳ ಪ್ರತಿಫಲ ಕಡಿಮೆಯಾಗುತ್ತ ಬರುತ್ತಿದೆ, ಆಥವ ವಿಪರೀತ ಏರಿಳಿತಗಳನ್ನು ಕಾಣುತ್ತಿದೆ.

ಉದಾ: ಹತ್ತಿಯ ಬೆಲೆಯಲ್ಲಿ 10% ಏರಿಕೆಯಾಗಿದ್ದರೆ ಖರ್ಚಿನಲ್ಲಿ 11.4% ಏರಿಕೆಯಾಗಿದೆ.

ಬೇಳೆಕಾಳುಗಳ ಬೆಲೆಗಳು 8.07% ಏರಿದ್ದರೆ ಖರ್ಚುಗಳಲ್ಲಿ 9.39% ಏರಿಕೆಯಾಗಿದೆ. ಜೋಳದ ವಿಷಯದಲ್ಲಂತೂ ಬೆಲೆಗಳು 15.8% ಹೆಚ್ಚಿದ್ದರೆ ಖರ್ಚುಗಳು 37.2% ದಷ್ಟು ಏರಿವೆ. ಭತ್ತದ ಬೆಲೆ ಮತ್ತು ಖರ್ಚುಗಳಲ್ಲಿ ಮಾತ್ರವೇ ಒಂದೇ ರೀತಿಯ ಅಂದರೆ 13.4% ಏರಿಕೆ ಆಗಿದೆ.

ಇದು ಕೇವಲ ಮಹಾರಾಷ್ಟ್ರದ ಕತೆಯಲ್ಲ. ಹಾಗೆ ನೋಡಿದರೆ ಮಹಾರಾಷ್ಟ್ರ 'ಒಳ್ಳೆಯ ದಿನ'ಗಳ ಒಂದು ಪ್ರಮುಖ ರಾಜ್ಯ ತಾನೇ ಸಾಧ್ಯ?

ಆದ್ದರಿಂದಲೇ ಈಗೀಗ ಹೆಚ್ಚಿನ ಅಚ್ಛೇ ದಿನ್ ಮುಖಂಡರು ಹಿಂದು–ಮುಸ್ಲಿಂ, ವಲಸೆ ಮುಂತಾದ ಕಥನಗಳಲ್ಲೇ ತೊಡಗಿದ್ದಾರೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಎಲ್‌ಡಿಎಫ್ ಸರಕಾರಕ್ಕೆ ಅತ್ಯುತ್ತಮ ಆಳ್ವಿಕೆಯ ಕಿರೀಟ, ಕೇಂದ್ರದ ಕನಿಷ್ಟ ಸರಕಾರಕ್ಕೆ ಕೋರ್ಟ್ ತರಾಟೆಗಳು

ಬೆಂಗಳೂರಿನ 'ಪಬ್ಲಿಕ್ ಅಫೇರ್ಸ್ ಸೆಂಟರ್'(ಪಿಎಸಿ) ಇತ್ತೀಚೆಗೆ ಪ್ರಕಟಿಸಿರುವ 'ಸಾರ್ವಜನಿಕ ವ್ಯವಹಾರಗಳ ಸೂಚ್ಯಂಕ'(ಪಬಿಲ್ ಅಫೇರ್ಸ್ ಇಂಡೆಕ್ಸ್–ಪಿಎಐ)ದಲ್ಲಿ ಕೇರಳ ಮೊದಲ ಸ್ಥಾನ ಪಡೆದಿದೆ. ನಂತರದ ಸ್ಥಾನಗಳು ತಮಿಳುನಾಡು ಮತ್ತು ತೆಲಂಗಾಣಕ್ಕೆ ಸಿಕ್ಕಿವೆ. ಅತ್ಯುತ್ತಮ ಆಳ್ವಿಕೆಯ ಮೊದಲ ಐದು ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದಂತೆ ನಾಲ್ಕು ದಕ್ಷಿಣದ ಬಿಜೆಪಿಯೇತರ ಆಳ್ವಿಕೆಯ ರಾಜ್ಯಗಳು, ಹಿಮಾಚಲ ಪ್ರದೇಶ ಏಕೈಕ ಬಿಜೆಪಿ ಆಳ್ವಿಕೆಯ ರಾಜ್ಯವಾಗಿದೆ. ಉತ್ತಮ ಆಳ್ವಿಕೆಯ ಶ್ರೇಯಾಂಕಗಳ ಪ್ರಕಾರ ಮೊದಲ 10 ರಾಜ್ಯಗಳಲ್ಲಿ ಎಲ್ಲ ದಕ್ಷಿಣದ ರಾಜ್ಯಗಳಿದ್ದು ಇವುಗಳಲ್ಲಿ ಯಾವುದರಲ್ಲೂ ಬಿಜೆಪಿ ಅಥವ ಅದರ ಮಿತ್ರಪಕ್ಷಗಳ ಸರಕಾರಗಳಿಲ್ಲ.

ದೇಶದ 29 ರಾಜ್ಯಗಳಲ್ಲಿ 18 ರಾಜ್ಯಗಳಲ್ಲಿ ಸರಕಾರದಲ್ಲಿರುವ ಒಂದು 'ರಾಷ್ಟ್ರೀಯ' ಪಕ್ಷಕ್ಕೆ ಇದು ದೊಡ್ಡ 'ಸಾಧನೆ'ಯೇ ಸರಿ!

'ಕನಿಷ್ಟ ಸರಕಾರ ಗರಿಷ್ಟ ಆಳ್ವಿಕೆ' ಅಚ್ಚೇದಿನ್‌ಗಳ ಒಂದು ಅಭಿನ್ನ ಅಂಗ. ಆದರೆ ಈ ನಾಲ್ಕು ವರ್ಷಗಳ 'ಕನಿಷ್ಟ ಸರಕಾರ'ದ ಸಾಧನೆಗಳೇನು?

ಜುಲೈ 29– ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿಳಂಬದ ಬಗ್ಗೆ ಸುಪ್ರಿಂ ಕೋರ್ಟ್ ಅತೃಪ್ತಿ, ಭರ್ತಿ ಮಾಡಬೇಕಾಗಿರುವ ಹುದ್ದೆಗಳ ಸಂಖ್ಯೆ, ಅವನ್ನು ಭರ್ತಿ ಮಾಡುವ ಸಮಯ ಚೌಕಟ್ಟು ಮತ್ತು 2016ರಲ್ಲಿ ಹೊರಡಿಸಿದ ಜಾಹೀರಾತನ್ನು ಅನುಸರಿಸಿ ಖಾಲಿ ಹುದ್ದೆಗಳನ್ನು ಏಕೆ ಭರ್ತಿ ಮಾಡಿಲ್ಲ ಎಂಬುದಕ್ಕೆ ವಿವರಣೆ ಇರುವ ವಿವರವಾದ ಅಫಿಡವಿಟ್ ಸಲ್ಲಿಸಲು ನಿರ್ದೇಶನ.

ಜುಲೈ 24–ಲೋಕಪಾಲ ಹುದ್ದೆಗೆ ನೇಮಕಕ್ಕೆ ಸರ್ಚ್ ಕಮಿಟಿ ಕುರಿತಂತೆ ಕೇಂದ್ರ ಸರಕಾರದ ಕ್ರಿಯಾಹೀನತೆಗೆ ಸುಪ್ರಿಂ ಕೋರ್ಟ್ ಅತೃಪ್ತಿ–ಹೊಸ ಅಫಿಡವಿಟ್ ಸಲ್ಲಿಸಲು ನಿರ್ದೇಶನ(ಕಳೆದ ವರ್ಷ ಸುಪ್ರಿಂ ಕೋರ್ಟ್ ಒಂದು ತೀರ್ಪಿನಲ್ಲಿ ಲೋಕಪಾಲ ಕಾಯ್ದೆಯ ಜಾರಿಯನ್ನು ಅಮಾನತಿನಲ್ಲಿಡಲು ಯಾವುದೇ ಸಮರ್ಥನೆಗಳು ಇಲ್ಲ ಎಂದಿತ್ತು)

ಜುಲೈ 11–ತಾಜ್ ಮಹಲ್ ರಕ್ಷಣೆಯ ಕೊರತೆಯ ವಿಷಯದಲ್ಲಿ ಕೇಂದ್ರ ಸರಕಾರ ಮತ್ತು ಉತ್ತರಪ್ರದೇಶ ಸರಕಾರಕ್ಕೆ ಸುಪ್ರಿಂ ಕೋರ್ಟ್ ತರಾಟೆ–"ಒಂದೋ ನಾವು ತಾಜ್‌ಮಹಲನ್ನು ಮುಚ್ಚಿ ಬಿಡುತ್ತೇವೆ, ಇಲ್ಲವೇ ನೀವು ಅದನ್ನು ಕೆಡವಿ ಅಥವ ಮೊದಲಿನ ಸ್ಥಿತಿಗೆ ತನ್ನಿ" ಈ ತರಾಟೆಯ ನಂತರ 'ಪುರಾತತ್ವ ಸರ್ವೆ' ಇಲಾಖೆಯೊಡನೆ ಸಮಾಲೋಚಿಸದೆ 'ಕಣ್ಣೋಟ ದಸ್ತಾವೇಜು' ಎಂಬುದನ್ನು ಸಲ್ಲಿಸಿದ್ದಕ್ಕೆ ಮತ್ತೆ ತರಾಟೆ.

ಇವು 'ಗರಿಷ್ಟ ಆಳ್ವಿಕೆ, ಕನಿಷ್ಟ ಸರಕಾರ'ದ ಕಳೆದ ಒಂದು ತಿಂಗಳ ಉದಾಹರಣೆಗಳಷ್ಟೇ..

ಬಾಲಿವುಡ್ ಚಿತ್ರ 'ಫನ್ನೇ ಖಾನ್'ನ ಹಾಡು 'ಅಚ್ಛೇ ದಿನ್ ಕಬ್ ಆಯೇಂಗೆ" (...ಯಾವಾಗ ಬರುತ್ತದೆ) ರಾಜಕೀಯ ಬಣ್ಣ ಪಡೆದದ್ದರಿಂದ ಮತ್ತು ಪ್ರೊಡ್ಯೂಸರ್‌ಗಳಿಗೆ 'ಮೇಲಿನಿಂದ' ಕೆಲವು ಕರೆಗಳೂ ಬಂದಿರುವುದರಿಂದ ಅದನ್ನು ಹಿಂತೆಗೆದುಕೊಂಡು ಅಚ್ಛೇ ದಿನ್ ಅಬ್ ಆಯೇರೇ (...ಈಗ ಬಂದೇಬಿಟ್ಟಿದೆ)ಎಂದು ಮಾಡಿದ್ದಾರೆ – ಸುದ್ದಿ 1

ಎರಡೂ ಹಾಡುಗಳು ಇದ್ದವು, ಮೊದಲಿಗೆ '...ಯಾವಾಗ'ವನ್ನು ರಿಲೀಸ್ ಮಾಡಲಾಗಿದೆ, ಮುಂದೆ '....ಬಂದೇ ಬಿಟ್ಟಿದೆ'ಯನ್ನು ರಿಲೀಸ್ ಮಾಡುವ ಯೋಚನೆಯಿತ್ತು ಎಂದು ನಿರ್ದೇಶಕರು – ಸುದ್ದಿ 2



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

"ಉದ್ಯಮಿಗಳ ಜತೆಗೆ ಕಾಣಿಸಿಕೊಳ್ಳಲು ನನಗೇನೂ ಭಯವಿಲ್ಲ"

–ಅಚ್ಛೇದಿನ್‌ಗಳ ಹೊಚ್ಚ ಹೊಸ ಕಥನ

ಲಕ್ನೌನಲ್ಲಿ ದೇಶದ 80 ಅತಿ ಶ್ರೀಮಂತ ಉದ್ಯಮಿಗಳ ಸಮ್ಮುಖ 60 ಸಾವಿರ ಕೋಟಿ ರೂ. ಗಳ 81 ಖಾಸಗಿ ಪ್ರಾಜೆಕ್ಟ್‌ಗಳ 'ಬುನಾದಿ ಕೆಲಸ'ವನ್ನು ಉದ್ಘಾಟಿಸುತ್ತ ಪ್ರಧಾನ ಮಂತ್ರಿಗಳು ಉಚ್ಚರಿಸಿರುವ ಈ ವಾಕ್ಯ ಬಹಳ ಚರ್ಚೆಯಲ್ಲಿದೆ. ವ್ಯಂಗ್ಯಚಿತ್ರಕಾರರಿಗೆ ಹೊಸ ಔತಣ ದೊರೆತಂತಾಗಿದೆ. ಮುಂದುವರೆದು ಅವರು 'ನಿಯತ್ತು' ಸಾಫ್ ಆಗಿದ್ದರೆ ನನಗೇಕೆ ಭಯ ಎಂದರಂತೆ.

ಬೇರೆ ಪಕ್ಷಗಳವರೂ ಉದ್ಯಮಿಗಳನ್ನು ಭೇಟಿಯಾಗಿದ್ದಾರೆ. ಆದರೆ ಅವರು ಮುಚ್ಚಿದ ಬಾಗಿಲ ಹಿಂದೆ ಭೇಟಿಯಾಗಿದ್ದಾರೆ ಎನ್ನುತ್ತ ಅಲ್ಲಿ ಘಟಾನುಘಟಿ ಉದ್ಯಮಿಗಳ ಜತೆ ಕೂತಿದ್ದ ಅಮರ್‌ಸಿಂಗ್‌ರವರನ್ನು ತೋರಿಸಿ ಬೇಕಿದ್ದರೆ ಅವರನ್ನು ಕೇಳಿ ಎಂದರಂತೆ.

ಮುಂದುವರೆದು ಗಾಂಧೀಜಿಯ ಆಸರೆಯನ್ನೂ ಪಡೆದರು. ಅವರು ಬಿರ್ಲಾ ಆತಿಥ್ಯ ಪಡೆಯಲಿಲ್ಲವೇ ಎಂದು ಕೇಳಿದರು.

ಪ್ರತಿಪಕ್ಷಗಳವರು ಈರ್ಷ್ಯೆಯಿಂದ ಹಚ್ಚಿರುವ ಮಸಿಯನ್ನು ಈ ಮಾತುಗಳು ತೊಳೆದು ಹಾಕಿವೆ ಎಂದು ಭಕ್ತ ಮಾಧ್ಯಮಗಳು ಇದನ್ನು ವ್ಯಾಖಿಸುತ್ತಿದ್ದರೆ, ಬೇರೆ ವಿಶ್ಲೇಷಕರು ಇದು ಆಕಾಶ ತೋರಿಸಿ, ನೆಲದಲ್ಲಿ ರಫೇಲ್ ಕಸಿವಿಸಿಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಎಂದು ಹೇಳಿದ್ದಾರೆ. ಕೆಲವರಂತೂ ಈ ಹಿಂದೆ ರಾಜಕೀಯ ಮುಖಂಡರು ಮತ್ತು ಉದ್ಯಮಿಗಳ ನಡುವೆ ಓಡಾಡುತ್ತ ಚಮಚಾ ಬಂಡವಾಳಶಾಹಿ ಪ್ರವೃತ್ತಿಯ ಒಂದು ಮಾದರಿಯೆನಿಸಿರುವ ಅಮರ್ ಸಿಂಗ್‌ರವರನ್ನು ಉದ್ಧರಿಸಿರುವುದು ಅರ್ಥಗರ್ಭಿತವಾಗಿದೆ ಎಂದು ವ್ಯಾಖ್ಯಾನ ಮಾಡಿದ್ದಾರೆ.

ನಿಜ, ಹಿಂದಿನ ಸರಕಾರಗಳಲ್ಲಿ ಇದ್ದವರಿಗೂ ಉದ್ಯಮಿಗಳೊಂದಿಗೆ ನಂಟು/ಗೆಳೆತನ ಇತ್ತು. ಹಿಂದಿನ ಸರಕಾರಗಳ ತಪ್ಪುಗಳನ್ನು, ಜನ–ವಿರೋಧಿ ಧೋರಣೆಗಳನ್ನು ಇನ್ನಷ್ಟು ರಭಸದಿಂದ (ಭಂಡತನದಿಂದ?) ಮುಂದುವರೆಸುತ್ತಿರುವವರು ಇದನ್ನೂ ಅಷ್ಟೇ ಭಂಡತನದಿಂದ ಮಾಡುತ್ತಿದ್ದಾರೆ ಎಂಬುದೂ ಅಷ್ಟೇ ನಿಜ ಎನ್ನುತ್ತಿದ್ದಾರೆ ರಾಜಕೀಯ ವೀಕ್ಷಕರು.

ಸಾಫ್ ನಿಯತ್ ಇದ್ದರೆ ರಫೇಲ್ ಬಗ್ಗೆ ಸರಳ, ನೇರ ಪ್ರಶ್ನೆಗಳಿಗೆ ಏಕೆ ಉತ್ತರಿಸುವುದಿಲ್ಲ, ಬಹುಕಾಲದಿಂದ ರಕ್ಷಣಾ ಉತ್ಪಾದನೆ ರಂಗದಲ್ಲಿ ಅನುಭವವಿರುವ ಸಾರ್ವಜನಿಕ ರಂಗದ ಪ್ರಖ್ಯಾತ ಹೆಚ್‌ಎಎಲ್ ಕೈಬಿಟ್ಟು ಹತ್ತುದಿನಗಳ ಹಿಂದೆಯಷ್ಟೇ ಆರಂಭವಾದ ಕೇವಲ 5 ಲಕ್ಷ ರೂ. ಹೂಡಿಕೆಯ ಅಂಬಾನಿ ಕಂಪನಿಗೆ ಮಣೆ ಹಾಕಿದ್ದೇಕೆ, ವಿದೇಶಿ ಪ್ರವಾಸಗಳಲ್ಲಿ ತಮ್ಮ ಜತೆಗೆ ಕರೆದುಕೊಂಡು ಹೋಗುವವರ ಹೆಸರುಗಳನ್ನು ತಿಳಿಸಲು ನಿರಾಕರಿಸುತ್ತಿರುವುದೇಕೆ, ದೇಶ ಬಿಟ್ಟೋಡಿದ ನೀರವ್ ಮೋದಿ ದಾವೋಸ್‌ನಲ್ಲಿ ಇವರ ಜೊತೆಗೆ ಧೈರ್ಯವಾಗಿ ಫೋಟೋದಲ್ಲಿ ಕಾಣಿಸಿಕೊಂಡದ್ದು ಹೇಗೆ, ಇವರ 'ಮೆಹುಲ್ ಭಾಯಿ' ಆಂತಿಗುವಾದಲ್ಲಿ ಪೌರತ್ವ ಮತ್ತು ಪಾಸ್‌ಪೋರ್ಟ್ ಪಡೆದದ್ದು ಹೇಗೆ, ಈ ಏಪ್ರಿಲ್‌ನಲ್ಲಿ ಅವರು ಆಂತಿಗುವಕ್ಕೆ ಭೇಟಿ ನೀಡಿದಾಗ ಇದು ಅವರಿಗೆ ಗೊತ್ತಿರಲಿಲ್ಲವೇ ಮತ್ತು ಎಲ್ಲಕ್ಕೂ ಮುಖ್ಯವಾಗಿ ಬ್ಯಾಂಕ್‌ಗಳ ಸುಸ್ತಿಸಾಲಗಳಲ್ಲಿ 84% ಪಾಲು ಹೊಂದಿರುವ ಮಹಾ–ಮಹಾ ಉದ್ಯಮಿಗಳ ಹೆಸರುಗಳನ್ನು ಬಹಿರಂಗ ಪಡಿಸುವುದಿಲ್ಲವೇಕೆ, ಅವರಿಗೆ ಅವಮಾನವಾಗಬಾರದು ಎಂದೇ ಎಂಬಿತ್ಯಾದಿ ಹಲವು ಪ್ರಶ್ನೆಗಳು ಸಹಜವಾಗಿಯೇ ಎದ್ದಿವೆ.

ಇವಕ್ಕೆಲ್ಲ ಉತ್ತರ ಕೊಟ್ಟಿದ್ದರೆ ಗಾಂಧೀಜಿಯವರೊಂದಿಗೆ ಹೋಲಿಕೆ ಸಾರ್ಥಕವಾಗುತ್ತಿತ್ತೇನೋ.

ವಾಸ್ತವವಾಗಿ ಈ ಪ್ರಶ್ನೆಗಳಿಗೆ ಉತ್ತರ ನೀಡುವುದರಿಂದ ತಪ್ಪಿಸಿಕೊಂಡು ಚಮಚಾ ಬಂಡವಾಳಶಾಹಿಯನ್ನು ಸಮರ್ಥಿಸಿಕೊಳ್ಳುವ ಭಂಡ ಪ್ರಯತ್ನ ಇದು ಎಂದೇ ಈಗ ಅರ್ಥೈಸಲಾಗುತ್ತಿದೆ.

ಆದರೆ ಈ ಭಂಡತನವೇ ತಾನು ಏನೂ ತಪ್ಪು ಮಾಡಿಲ್ಲ ಎಂಬುದಕ್ಕೆ ಬಲವಾದ ಸಾಕ್ಷಿ ಎಂದು ಪರಿಗಣಿಸಬೇಕು ಎಂದೇ ಅವರು ನಿರೀಕ್ಷಿಸುತ್ತಿರಬೇಕು ಎನ್ನುತ್ತಾರೆ ಒಬ್ಬ ಟಿಪ್ಪಣಿಗಾರರು.



ವ್ಯಂಗ್ಯಚಿತ್ರ: ಮಂಸೂರ್ ನಖ್ವಿ

'ಅಭಿವೃದ್ಧಿ' ಕುರಿತ ಬಂಡವಾಳಶಾಹಿ ಪ್ರವಚನ



"ಅಭಿವೃದ್ಧಿ" ಕುರಿತು ಬಂಡವಾಳಶಾಹಿಯು ಪ್ರಚುರಪಡಿಸುತ್ತಿರುವ ಪ್ರವಚನವು ತಾತ್ವಿಕವಾಗಿಯಾಗಲಿ ಅಥವಾ ಚಾರಿತ್ರಿಕವಾಗಿಯಾಗಲಿ ಸಮಂಜಸವಾಗಿಲ್ಲ. ನಮ್ಮಂತಹ ದೇಶಗಳಲ್ಲಿ ಬಂಡವಾಳಶಾಹಿಯು ಸಾಧಿಸುವ "ಅಭಿವೃದ್ಧಿ"ಯು, ಅದು ಎಷ್ಟೇ ವೇಗವಾಗಿರಲಿ, ಬಡತನ ನಿವಾರಿಸಲು ಮತ್ತು ನಿರುದ್ಯೋಗ ಪರಿಹರಿಸಲು ಅಸಮರ್ಥವಾಗಿದೆ. ಆದ್ದರಿಂದ, ಒಂದು ಪರ್ಯಾಯ ದಿಕ್ಪಥವುಳ್ಳ ಅಭಿವೃದ್ಧಿ ಮಾದರಿಯನ್ನು ಸೃಷ್ಠಿಸಬೇಕಾಗುತ್ತದೆ. ಅದು, ಕಿರು ಉತ್ಪಾದಕರನ್ನು ರಕ್ಷಿಸುವ, ಪ್ರೋತ್ಸಾಹಿಸುವ ಮತ್ತು ಬಂಡವಾಳಶಾಹಿಗೆ ಪರ್ಯಾಯವಾಗುವ ಮಾದರಿಯಾಗುತ್ತದೆ. ಆದರೆ ಇಂತಹ ಒಂದು ಪರ್ಯಾಯಕ್ಕೆ ಪ್ರಭುತ್ವದ ವರ್ಗ ಚಾರಿತ್ರ್ಯ ಬದಲಾಗಬೇಕಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್

ಅನುವಾದ: ಕೆ.ಎಂ. ನಾಗರಾಜ್

ನವ-ಉದಾರ ಕಾಲಮಾನದಲ್ಲಿ, "ಅಭಿವೃದ್ಧಿ" ಕುರಿತು ಬಂಡವಾಳಶಾಹಿಯ ಪ್ರವಚನ ಮೂರನೆ ಜಗತ್ತಿನ ದೇಶಗಳಲ್ಲೆಲ್ಲ ಬಹಳ ಪ್ರಭಾವಶಾಲಿ ಪರಿಣಾಮ ಬೀರಿದೆ. ಅದು ಹೀಗಿದೆ: (1) ಕೃಷಿಯೂ ಸೇರಿದಂತೆ ಪಾರಂಪರಿಕ (ಕಿರು ಉತ್ಪಾದನೆ)ವಲಯದಲ್ಲಿ ಶ್ರಮಿಕರ ಸಂಖ್ಯೆ ಕಿಕ್ಕಿರಿದು ತುಂಬಿದೆ. ಅವರ ಉತ್ಪಾದಕತೆ ತುಂಬಾ ಕೆಳ ಮಟ್ಟದಲ್ಲಿದೆ. ಈ ಕಾರಣದಿಂದಾಗಿ, ಈ ವಲಯ ಬಡತನದ ಭಂಡಾರವಾಗಿದೆ. ಈ ಅಪಾರ ಸಂಖ್ಯೆಯ ಶ್ರಮಿಕರನ್ನು ಉನ್ನತ ಉತ್ಪಾದಕತೆಯುಳ್ಳ ಆಧುನಿಕ (ಅಂದರೆ ಬಂಡವಾಳಶಾಹಿ)ವಲಯಕ್ಕೆ ಸ್ಥಳಾಂತರಿಸಿದಾಗ ಅದು "ಅಭಿವೃದ್ಧಿ". (2) ಶ್ರಮಿಕರನ್ನು ಸ್ಥಳಾಂತರಿಸುವ ಕೆಲಸ ಜರುಗಬೇಕೆಂದಾದರೆ, ಆಧುನಿಕ (ಬಂಡವಾಳಶಾಹಿ) ವಲಯ ವೇಗವಾಗಿ ಬೆಳೆಯಬೇಕು. ಹಾಗಾಗಬೇಕಾದರೆ, ಬಂಡವಾಳದ ಶೇಖರಣೆಗೆ ಇರುವ ಅಡೆ ತಡೆಗಳನ್ನು ಕಿತ್ತುಹಾಕಬೇಕು. (3) ಆಧುನಿಕ ವಲಯದ ಬೆಳವಣಿಗೆಯ ಸಂದರ್ಭದಲ್ಲಿ, ಕಾರ್ಖಾನೆಗಳನ್ನು ಕಟ್ಟಲು ರೈತರ ಜಮೀನನ್ನು ವಶಪಡಿಸಿಕೊಳ್ಳಬೇಕಾಗುತ್ತದೆ. ಜಮೀನು ಕಳೆದುಕೊಂಡ ರೈತರು ನೆಲೆ ಇಲ್ಲದಂತಾಗುತ್ತಾರೆ. ಇದೊಂದು ಬದಲಾವಣೆಯ ಸಂಕ್ರಮಣ ಕಾಲದ ಸಮಸ್ಯೆ. ಅದಕ್ಕಾಗಿ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ, ಈ ಪಾರಂಪರಿಕ ವಲಯದ ಎಲ್ಲ ಶ್ರಮಿಕರರಿಗೂ ಆಧುನಿಕ ವಲಯವು ಮುಂದೊಂದು ದಿನ ಆಶ್ರಯ ಕೊಡುತ್ತದೆ. ಆದ್ದರಿಂದ, ನೆಲೆ ಕಳೆದುಕೊಂಡ ರೈತರು ಮತ್ತಿತರ ಕಿರು ಉತ್ಪಾದಕರನ್ನು ರಕ್ಷಿಸಿಸುವ ಹೆಸರಿನಲ್ಲಿ, ಆಧುನಿಕ ವಲಯದ ಬೆಳವಣಿಗೆಗೆ ತಡೆಯೊಡ್ಡುವುದು ಒಂದು ಹಿಮ್ಮುಖ ಹೆಜ್ಜೆಯಾಗುತ್ತದೆ. "ರಾಜಕೀಯ" ಅಥವಾ "ಜನ ಮೆಚ್ಚುಗೆ" ಗಳಿಸುವ ಕಾರಣಗಳಿಂದ ಬೆಳವಣಿಗೆಗೆ ತಡೆಯೊಡ್ಡುವುದು ಅಗತ್ಯವಾಗಬಹುದು. ಆದರೆ, ಅದರಲ್ಲಿ ಯಾವ ಆರ್ಥಿಕ ವಿವೇಚನಾಶೀಲತೆಯೂ ಇರುವುದಿಲ್ಲ.

ಪಶ್ಚಿಮ ಯೂರೋಪಿನಲ್ಲಿ ಬದಲಾವಣೆಗಳು ಮತ್ತು ಅನುಭವಗಳು ಇದೇ ರೀತಿಯಲ್ಲಿದ್ದವು ಎಂಬುದಾಗಿ ಹೇಳಿ ಈ ಪ್ರವಚನವನ್ನು ಸಮರ್ಥಿಸಲಾಗುತ್ತಿದೆ. ಅಲ್ಲಿ, ಬಂಡವಾಳದ ಆದಿಮ ಸಂಚಯದ (ಬಂಡವಾಳದ ಮೊತ್ತಮೊದಲಿನ ಶೇಖರಣೆ) ಮೂಲಕವೇ ಬಂಡವಾಳಶಾಹಿ ವಲಯ ಬೆಳೆಯಿತು. ಈ ವಿದ್ಯಮಾನಕ್ಕೆ, ಇಂಗ್ಲೆಂಡ್‌ನ 'ಎನ್‌ಕ್ಲೋಶರ್ ಮೂವ್‌ಮೆಂಟ್'(ಆವರಣ ಚಳುವಳಿ) ಒಂದು ನಿದರ್ಶನ. ಕೈಗಾರಿಕಾ ಕ್ರಾಂತಿಯ ಪೂರ್ವದಲ್ಲಿ, ಇಂಗ್ಲೆಂಡ್‌ನಲ್ಲಿ, ಸಣ್ಣ ಸಣ್ಣ ರೈತರು ಅನುಭೋಗಿಸುತ್ತಿದ್ದ ತುಂಡು ತುಂಡು ಭೂಮಿಯನ್ನು ಸುತ್ತುಗಟ್ಟಿ ಬೇಲಿ ಹಾಕಿ ದೊಡ್ಡ ಜಮೀನ್ದಾರರು ವಶಪಡಿಸಿಕೊಂಡರು. ಜಮೀನು ಕಳೆದುಕೊಂಡ ರೈತರು ಬದಲಾವಣೆಯ ಸಂಕ್ರಮಣ ಕಾಲದಲ್ಲಿ ಅಪಾರ ಸಂಕಷ್ಟಕ್ಕೊಳಗಾದರು. ಆದರೆ, ಬೆಳವಣಿಗೆಯ ಹಾದಿಯಲ್ಲಿದ್ದ ಬಂಡವಾಳಶಾಹಿ ವಲಯ ಅವರಿಗೆ ಉದ್ಯೋಗ ಒದಗಿಸಿತು. ಭಾರತದಂತಹ ಮೂರನೆಯ ಜಗತ್ತಿನ ದೇಶಗಳಲ್ಲಿ ಈ ಅನುಭವ ಪುನರಾವರ್ತನೆಯಾಗುತ್ತದೆ ಎಂಬುದಾಗಿ ವಾದಿಸಲಾಗುತ್ತಿದೆ. ಇಂದಿನ ಕಾಲದಲ್ಲಿ, ಇದೇ ರೀತಿಯ ಬಂಡವಾಳಶಾಹಿಅಭಿವೃದ್ಧಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಪ್ರಾಥಮಿಕ ಆರ್ಥಿಕ ತತ್ವ ಎನ್ನುತ್ತಲೂ ಈ ಅಭಿವೃದ್ಧಿ ಮಾದರಿಯನ್ನು ಸಮರ್ಥಿಸಲಾಗುತ್ತಿದೆ. ಈ ತತ್ವದ ಪ್ರಕಾರ, ಪಾರಂಪರಿಕ ವಲಯದಲ್ಲಿ ಶ್ರಮಿಕರ ಸಂಖ್ಯೆ ಕಿಕ್ಕಿರಿದಿರುವುದರಿಂದ ಅವರ ಕೂಲಿಯನ್ನು ಬದುಕುಳಿಯುವಷ್ಟು ಕೆಳಮಟ್ಟದಲ್ಲಿ ಇಡಲಾಗುತ್ತದೆ. ಎಷ್ಟೆಂದರೆ, ಅದು ಈ ವಲಯದ ತಲಾ ವರಮಾನಕ್ಕಿಂತ ತುಸು ಹೆಚ್ಚಿಗೆ ಇರುತ್ತದೆ. ತಲಾ ಉತ್ಪತ್ತಿಯು ಉನ್ನತ ಮಟ್ಟದಲ್ಲಿರುವ ಬಂಡವಾಳಶಾಹಿ ವಲಯದಲ್ಲೂ, ಪ್ರತಿ ಯೂನಿಟ್ ಉತ್ಪತ್ತಿಯ ಮಿಗುತಾಯವು ತಲಾ ಉತ್ಪತ್ತಿಯ ಮಟ್ಟಕ್ಕಿಂತಲೂ ಅಧಿಕವಾಗಿರುತ್ತದೆ. ಈ ಮಿಗುತಾಯವು ಹೂಡಿಕೆಯಾದಾಗ, ಬಂಡವಾಳಶಾಹಿ ವಲಯದ ಬೆಳವಣಿಗೆ ಸೊಂಪಾಗಿರುತ್ತದೆ. ಅದು ಹೂಡಿಕೆಯಾಗಬೇಕು ಎಂದಾದರೆ, ಬಂಡವಾಳ ಶೇಖರಣೆಗೆ ಸೂಕ್ತ ವಾತಾವರಣ ನಿರ್ಮಿಸಬೇಕಾಗುತ್ತದೆ. ಬೆಳವಣಿಗೆ ಸೊಂಪಾಗಿರುವ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿ ವಲಯವು ಪಾರಂಪರಿಕ ವಲಯದ ದುಡಿಮೆಗಾರರನ್ನು ಸೆಳೆದುಕೊಳ್ಳುತ್ತದೆ. ಆಗ ಅವರ ಕೂಲಿ ಹೆಚ್ಚುತ್ತದೆ. ಅವರ ಬಡತನ ಕೊನೆಗೊಳ್ಳುತ್ತದೆ. ಆದ್ದರಿಂದ, ಭಾರತದಂತಹ ದೇಶಗಳು ತಮ್ಮ ಅಭಿವೃದ್ಧಿಗಾಗಿ ಮಾಡಬೇಕಿರುವುದು ಏನೆಂದರೆ, ಹೂಡಿಕೆ ಮಾಡುವ ಬಂಡವಾಳಗಾರರ "ಮೃಗೀಯ ಹುಮ್ಮಸ್ಸು" ಏರುವಂತಾಗಲು ಬಂಡವಾಳದ ಶೇಖರಣೆಗೆ ಅನುಕೂಲಕರ ವಾತಾವರಣ ಕಲ್ಪಿಸಬೇಕಾಗುತ್ತದೆ. ಈ ಕ್ರಮವು ಬಡತನ ಕೊನೆಗೊಳ್ಳುವುದನ್ನು ಖಾತ್ರಿಪಡಿಸುತ್ತದೆ.

ಈ ಪ್ರವಚನ ಮೂಲತಃ ತಪ್ಪಾಗಿದೆ. ಮೊದಲು ಅದರ ತಾತ್ವಿಕ ವಾದವನ್ನು ಗಮನಿಸೋಣ. ಬಂಡವಾಳಶಾಹಿ ವಲಯದಲ್ಲಿ, ಒಂದು ನಿರ್ದಿಷ್ಟ ಮಟ್ಟದವರೆಗೆ ಈಗ ಬೆಳೆದು ನಿಂತಿರುವ ತಂತ್ರಜ್ಞಾನವು ಎಂದೆಂದಿಗೂ ಅದೇ ಮಟ್ಟದಲ್ಲಿ ಉಳಿದಿರುತ್ತದೆ ಎಂದಾದರೆ ಮಾತ್ರ ಈ ವಾದ ಸರಿ. ಆಗ, ಕಾರ್ಮಿಕರ ಉತ್ಪಾದನಾ ದರವೂ (ಏರಿಳಿತಗಳಿಲ್ಲದೆ) ಅಚಲವಾಗಿರುತ್ತದೆ. ಅರ್ಥಶಾಸ್ತ್ರದ ತತ್ವ ಮಾದರಿಗಳಲ್ಲಿ ಒಂದಾದ "ಲೆವಿಸ್ ಮಾದರಿ" ಸಹ ಬಂಡವಾಳಶಾಹಿ ವಲಯದಲ್ಲಿ ಸಾಮಾನ್ಯವಾಗಿ ಕಾರ್ಮಿಕರ ಉತ್ಪಾದನಾ ದರದ ಏರಿಳಿತಗಳಿರುವುದಿಲ್ಲ ಎಂಬುದಾಗಿ ಹೇಳುತ್ತದೆ. ಆದರೆ, ನಿರ್ಬಂಧಗಳಿಲ್ಲದ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿಯು, ತಾಂತ್ರಿಕ ಆವಿಷ್ಕಾರಗಳು ಆದಂತೆಲ್ಲಾ ಅವುಗಳನ್ನು ಅಳವಡಿಸಿಕೊಳ್ಳುತ್ತಾ ಹೋಗುತ್ತದೆ. ಹಾಗಾಗಿ, ಕಾರ್ಮಿಕರ ಉತ್ಪಾದಕತೆ ಏರುತ್ತಾ ಹೋಗುತ್ತದೆ. ಪರಿಣಾಮವಾಗಿ, ಯಾವುದೋ ಒಂದು ನಿರ್ದಿಷ್ಟ ಬೆಳವಣಿಗೆಯ ದರ ತಲುಪಿರುವ ಮಟ್ಟದಲ್ಲಿ, ಬಂಡವಾಳಶಾಹಿ ವಲಯದ ಉದ್ಯೋಗ ಸೃಷ್ಠಿಯ ಸಾಮರ್ಥ್ಯವು ಇಳಿದಿರುತ್ತದೆ. ಉದಾಹರಣೆಗೆ, ಬಂಡವಾಳಶಾಹಿ ವಲಯದ ಬೆಳವಣಿಗೆ ದರ 8% ಇದೆ ಮತ್ತು ಅದರ ಕಾರ್ಮಿಕರ ಉತ್ಪಾದನಾ ದರ 7% ಇದೆ ಅಂದುಕೊಂಡರೆ, ಆಗ, ಅಲ್ಲಿ ಉದ್ಯೋಗಗಳು 1% ಹೆಚ್ಚುವ ಸಾಧ್ಯತೆ ಇರುತ್ತದೆ. ಉದ್ಯೋಗ ಸೃಷ್ಠಿಯ ದರವು, ಒಂದು ವೇಳೆ, ಶ್ರಮಿಕ ಜನಸಂಖ್ಯೆ ಸ್ವಾಭಾವಿಕವಾಗಿಯೇ ಹೆಚ್ಚುವ ದರಕ್ಕಿಂತ ಕಡಿಮೆ ಇದ್ದರೆ, ಆಗ, ಪಾರಂಪರಿಕ ವಲಯದ ಕಿಕ್ಕಿರಿದ ಸಂಖ್ಯೆಯ ದುಡಿಮೆಗಾರರನ್ನು ಸೆಳೆದುಕೊಳ್ಳುವ ಮಾತಿರಲಿ, ಬಂಡವಾಳಶಾಹಿ ವಲಯದ ಕಕ್ಷೆಯಲ್ಲೇ ದುಡಿಯುತ್ತಿರುವ ಶ್ರಮಿಕ ಸಮೂಹದಲ್ಲಿ ಸ್ವಾಭಾವಿಕವಾಗಿ ಹೆಚ್ಚುವ ಮಂದಿಗೇ ಉದ್ಯೋಗ ಒದಗಿಸಲು ಅಸಮರ್ಥವಾಗಿರುತ್ತದೆ. ಆದ್ದರಿಂದ, ಬಂಡವಾಳಶಾಹಿ ವಲಯವು ತಂತ್ರಜ್ಞಾನದ ಆವಿಷ್ಕಾರಗಳನ್ನು ಅಳವಡಿಸಿಕೊಂಡಿರುವುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ತಾತ್ವಿಕ ಸರಳ ಮಾದರಿಗಳ ಮೂಲಕ ಈ ಪ್ರವಚನವನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ಈ ಸಂಬಂಧವಾಗಿ, **ಪಶ್ಚಿಮ ಯೂರೋಪಿನ ಬದಲಾವಣೆಗಳು ಮತ್ತು ಅನುಭವಗಳ ಕುರಿತ ಚಾರಿತ್ರಿಕ ವಾದವನ್ನು ಈಗ ಪರಿಶೀಲಿಸೋಣ.** ಅಲ್ಲಿ, ರೈತರ ಜಮೀನು ವಶಪಡಿಸಿಕೊಂಡ ಬಂಡವಾಳಶಾಹಿಯು ಅವರಿಗೆ ಉದ್ಯೋಗ ಒದಗಿಸಿತು ಎಂಬುದು ಇಡಿಯಾಗಿ ತಪ್ಪು. ವಾಸ್ತವವಾಗಿ, ಭಾರತದಂತಹ ವಸಾಹತು ದೇಶಗಳಲ್ಲಿ, ವಿದೇಶಿ ಬಂಡವಾಳಶಾಹಿ ಕೇಂದ್ರಗಳಲ್ಲಿ ತಯಾರಾದ ವಸ್ತುಗಳ ಆಮದಿನಿಂದಾಗಿ, ಕೆಲಸ ಕಳೆದುಕೊಂಡ ಶ್ರಮಿಕರು ದರಿದ್ರರಾದರು. ಇಲ್ಲಿದ್ದ ದುಡಿಯುವ ಇಡೀ ಜನಸಮೂಹವನ್ನು ಬಡತನಕ್ಕೆ ತಳ್ಳಲಾಯಿತು. "ಆಧುನಿಕ ಸಾಮೂಹಿಕ ಬಡತನ" ಎಂದು ಕರೆಯಲಾಗುವ ವಿದ್ಯಮಾನದ ಹಿಂದೆ, ಉದ್ಯೋಗದಿಂದ ಕಿತ್ತು ಹಾಕಿದ, ಕರ ಕುಶಲ ಉದ್ಯೋಗಗಳಿಗೆ ಕಲ್ಲು ಹಾಕಿದ, ಒಕ್ಕಲೆಬ್ಬಿಸಿದ ಮತ್ತು ಇಂತಹ ಹಲವಾರು ಆರ್ಥಿಕ ಅಭದ್ರತೆಯ ಕಾರಣಗಳಿವೆ. ಯಾವುದೇ ಕಾರಣದಿಂದ ದುಡಿಮೆಯಿಂದ ಹೊರಹಾಕಲ್ಪಟ್ಟವರಿಗೆ ಬಂಡವಾಳಶಾಹಿಯು ಉದ್ಯೋಗ ಒದಗಿಸಲೇ ಇಲ್ಲ. ಮೇಲಾಗಿ, ಈ ದೇಶಗಳಲ್ಲಿ ಬಂಡವಾಳಶಾಹಿ ವಲಯ ಗುರುತಿಸಬಹುದಾದಷ್ಟು ದೊಡ್ಡದಾಗಿ ಬೆಳೆದಿರಲಿಲ್ಲ.

ಪಶ್ಚಿಮ ಯೂರೋಪಿನ ದೇಶಗಳ ನಗರ-ಕೇಂದ್ರಿತ ಅರ್ಥವ್ಯವಸ್ಥೆಗಳಲ್ಲಿ ತಮ್ಮ ಕಸುಬು/ಉದ್ಯೋಗಗಳಿಂದ ಹೊರದಬ್ಬಲ್ಪಟ್ಟವರಿಗೆ ನಗರ-ಕೇಂದ್ರಿತ ಬಂಡವಾಳಶಾಹಿ ವ್ಯವಸ್ಥೆಯು ಉದ್ಯೋಗ ಒದಗಿಸಲಿಲ್ಲ. ಅಲ್ಲಿನ ಸುಮಾರು ಐದು ಕೋಟಿ ಮಂದಿ ಕೆನಡಾ, ಅಮೇರಿಕಾ, ನ್ಯೂಜಿಲ್ಯಾಂಡ್, ದಕ್ಷಿಣ ಆಫ್ರಿಕಾ ಮುಂತಾದ ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋದರು. ಅವರು ಅಲ್ಲಿನ ಮೂಲ ನಿವಾಸಿಗಳನ್ನು ಅವರ ಹೊಲ ಗದ್ದೆಗಳಿಂದ ಹೊರದಬ್ಬಿ ತಾವೇ ಒಕ್ಕಲುತನ ಆರಂಭಿಸಿದರು. ಹತ್ತೊಂಭತ್ತನೇ ಶತಮಾನದ ಈ ದೀರ್ಘಾವಧಿಯ ವಲಸೆಯು ಮೊದಲನೆ ಮಹಾಯುದ್ಧದ ಅಂತ್ಯಕಾಲದವರೆಗೂ ನಡೆಯಿತು. ಈ ವಲಸೆಯಿಂದಾಗಿ, ಶ್ರಮಿಕ ಮೀಸಲು ಪಡೆ ಅಂಕೆಯಲ್ಲಿತ್ತು. ಅದರಿಂದಾಗಿ ಟ್ರೇಡ್ ಯೂನಿಯನ್‌ಗಳು ಬಲ ಪಡೆದವು, ಯಶಸ್ವಿಯಾದವು. ಅವರ ಉತ್ಪಾದಕತೆಯೂ ಹೆಚ್ಚಿತು. ನೈಜ ವೇತನ ಏರಿಕೆಯಿಂದಾಗಿ ಅವರ ಜೀವನ ಮಟ್ಟ ಮೇಲೇರಿತು. ಬಡತನ ಇಳಿಯಿತು.

ಅಂದರೆ, ತಾನು ಹೊರದಬ್ಬಿದ ಕೆಲಸಗಾರರಿಗೆ ಉದ್ಯೋಗ ಕಲ್ಪಿಸುವಂತಹ ಗುಣ ಬಂಡವಾಳಶಾಹಿಗೆ ಇಲ್ಲವೇ ಇಲ್ಲ. ಬೃಹತ್ ವಲಸೆ ಇಲ್ಲದಿದ್ದರೆ, ಯೂರೋಪಿನ ಅನುಭವವೂ ಬೇರೆಯದಾಗಿರುತ್ತಿರಲಿಲ್ಲ. ಮೂರನೆ ಜಗತ್ತಿನ ದೇಶಗಳಿಗೆ ಇಂದು ವಲಸೆಗೆ ಅವಕಾಶಗಳಿಲ್ಲ, ಯೂರೋಪಿಗೆ ಈಗ ಬರುತ್ತಿರುವ ನಿರಾಶ್ರಿತರ ಪರದಾಟ ಇದನ್ನು ತಿಳಿಸುತ್ತದೆ.

ಈ ಪ್ರಕಾರವಾಗಿ, "ಅಭಿವೃದ್ಧಿ" ಕುರಿತು ಬಂಡವಾಳಶಾಹಿಯು ಪ್ರಚುರಪಡಿಸುತ್ತಿರುವ ಪ್ರವಚನವು ತಾತ್ವಿಕವಾಗಿಯಾಗಲಿ ಅಥವಾ ಚಾರಿತ್ರಿಕವಾಗಿಯಾಗಲಿ ಸಮಂಜಸವಾಗಿಲ್ಲ. ಅದಕ್ಕಿಂತಲೂ ಮಿಗಿಲಾದ ಇನ್ನೊಂದು ವಿಷಯವಿದೆ. ಈಗಾಗಲೆ ಹೇಳಿರುವಂತೆ, ಒಂದು ವೇಳೆ, ಬಂಡವಾಳಶಾಹಿ ವಲಯದ ಉದ್ಯೋಗ ಸೃಷ್ಠಿಯ ದರವು ಶ್ರಮಿಕ ಜನಸಂಖ್ಯೆ ಸ್ವಾಭಾವಿಕವಾಗಿ ಹೆಚ್ಚುವ ದರಕ್ಕಿಂತ ಕಡಿಮೆ ಇದ್ದರೆ, ಆಗ, ಶ್ರಮಿಕ ಮೀಸಲು ಪಡೆ ದೊಡ್ಡದಾಗುವುದರಿಂದ, ನೈಜ ವೇತನಗಳು ಹೊಟ್ಟೆ ಬಟ್ಟೆಗೆ ಮಾತ್ರ ಆಗುವಷ್ಟು ಮಟ್ಟದಲ್ಲಿ ಉಳಿಯುತ್ತವೆ. ಆದರೆ, ಶ್ರಮಿಕರ ಉತ್ಪಾದಕತೆ ಹೆಚ್ಚುತ್ತಾ ಹೋಗುತ್ತದೆ (ಇದೇ ಕಾರಣದಿಂದಾಗಿ ಶ್ರಮಿಕ ಮೀಸಲು ಪಡೆಯ ಗಾತ್ರ ಕುಗ್ಗಲು ಬಿಡುವುದಿಲ್ಲ) ಮತ್ತು ಬಂಡವಾಳಶಾಹಿ ವಲಯದ ಉತ್ಪತ್ತಿಯಲ್ಲಿ ಮಿಗುತಾಯ ವರ್ಧಿಸುತ್ತದೆ.

ಮೂರನೆ ಜಗತ್ತಿನ ಅರ್ಥವ್ಯವಸ್ಥೆಗಳಲ್ಲಿ, ಮಿಗುತಾಯದ ಮೇಲೆ ಜೀವನ ನಡೆಸುವವರು ಸಾಮಾನ್ಯವಾಗಿ ವಿದೇಶಿ ಶ್ರೀಮಂತರ ಐಶಾರಾಮಿ ಜೀವನ ಶೈಲಿಯನ್ನು ಅನುಕರಿಸುತ್ತಾರೆ. ಅವರು ಬಳಸುವ ದುಬಾರಿ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳು ಉನ್ನತ ತಂತ್ರಜ್ಞಾನ ಮತ್ತು ಅತಿ ಕಡಿಮೆ ಕಾರ್ಮಿಕರಿಂದ ಕೂಡಿವೆ (ಶ್ರಮಜೀವಿಗಳು ಬಳಸುವ ಹೆಚ್ಚಿನ ವಸ್ತುಗಳ ತಯಾರಿಕೆಯು ಬಹಳ ದೊಡ್ಡ ಸಂಖ್ಯೆಯ ಕಾರ್ಮಿಕರನ್ನು ಒಳಗೊಂಡಿರುತ್ತದೆ). ಈ ಪ್ರಕಾರವಾಗಿ, ಮೂರನೆ ಜಗತ್ತಿನ ಅರ್ಥವ್ಯವಸ್ಥೆಗಳಲ್ಲಿ, ಹೆಚ್ಚುತ್ತಿರುವ ವರಮಾನಗಳ ಅಸಮಾನತೆಯು ಕಾರ್ಮಿಕರ ಉತ್ಪಾದಕತೆ ಇನ್ನಷ್ಟು ಹೆಚ್ಚುವಲ್ಲಿ ಕಾರಣವಾಗುತ್ತದೆ ಮತ್ತು ಅದರಿಂದಾಗಿ ನಿರುದ್ಯೋಗ ಹೆಚ್ಚುತ್ತದೆ. ಅದರಿಂದಾಗಿ ವರಮಾನಗಳ ಅಸಮತೆ ಇನ್ನೂ ಹೆಚ್ಚುತ್ತದೆ. ಈ ರೀತಿಯಲ್ಲಿ ಒಂದು ವಿಷ ವರ್ತುಲ ಸೃಷ್ಠಿಯಾಗುತ್ತದೆ. ಕಾಲ ಕ್ರಮೇಣ, ಬಂಡವಾಳಶಾಹಿ ವಲಯದಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತವೆ. ಒಂದು ವೇಳೆ ಉತ್ಪತ್ತಿಯ ಬೆಳವಣಿಗೆ ದರ ಉನ್ನತ ಮಟ್ಟದಲ್ಲಿದೆ ಮತ್ತು ಅದಕ್ಕೆ ಯಾವ ಅಡೆ ತಡೆಗಳೂ ಇಲ್ಲ ಎನ್ನುವ ಪರಿಸ್ಥಿತಿ ಇದ್ದರೂ ಸಹ, ಪ್ರಾರಂಭದಲ್ಲೇ ಅದು ಶ್ರಮಿಕ ಮೀಸಲು ಪಡೆಯ ಗಾತ್ರವನ್ನು ಇಳಿಸದಿದ್ದರೆ, ಇನ್ನೆಂದೂ ಅದನ್ನು ಮಾಡಲಾರದು (ಈ ವಲಯದ ಒಟ್ಟಾರೆ ಬೇಡಿಕೆ ಕೊರತೆ ಸಮಸ್ಯೆಯನ್ನು ಈ ವಿವರಣೆಯ ಉದ್ದಕ್ಕೂ ಉದ್ದೇಶಪೂರ್ವಕವಾಗಿಯೇ ನಾವು ದೂರ ಇಟ್ಟಿದ್ದೇವೆ. ಅಂದರೆ, ಬಂಡವಾಳಶಾಹಿ ಅರ್ಥಶಾಸ್ತ್ರವು ಸ್ವೀಕರಿಸಿರುವ ವಿವೇಚನಾಶೂನ್ಯ "Say's Law" ವನ್ನು ನಾವು ಉದ್ದೇಶಪೂರ್ವಕವಾಗಿಯೇ ಇಟ್ಟುಕೊಂಡಿದ್ದೇವೆ). ಅಷ್ಟೇ ಅಲ್ಲ. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಬಂಡವಾಳಶಾಹಿ ವಲಯವು ಉದ್ಯೋಗ ಸೃಷ್ಠಿಯಲ್ಲಿ ವಿಫಲವಾದಾಗ, ಬಡತನವು ಬೇರೆ ಯಾವ ರೀತಿಯಲ್ಲಿ ಇರಬಹುದಾದಕ್ಕಿಂತಲೂ ಹೆಚ್ಚು ಉಲ್ಬಣಗೊಳ್ಳುತ್ತದೆ.

ಈ ಅಂಶವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬಂಡವಾಳಶಾಹಿಯು ನಮ್ಮಂತಹ ದೇಶಗಳಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸುವ ಮೂಲಕ ಬಡತನವನ್ನು ಹೋಗಲಾಡಿಸುವುದರ ಬದಲಾಗಿ, ಒಂದು ಧ್ರುವದಲ್ಲಿ ಉನ್ನತ ದರದ ಬೆಳವಣಿಗೆಯನ್ನೂ,ಇನ್ನೊಂದು ಧ್ರುವದಲ್ಲಿ ಹೆಚ್ಚು ಹೆಚ್ಚು ಬಡತನವನ್ನೂ ಸೃಷ್ಠಿಸುತ್ತದೆ. ಅದೇ ಸಮಯದಲ್ಲಿ, ಈ ಬೆಳವಣಿಗೆಯ ಸಲುವಾಗಿ, ಮೂಲಸೌಕರ್ಯದ ಹೆಸರಿನಲ್ಲಿ ಹೆದ್ದಾರಿ, ಕಾರ್ಖಾನೆ ಮುಂತಾದವುಗಳೇ ಅಲ್ಲದೆ, ಷಾಪಿಂಗ್ ಮಾಲ್, ವಸತಿ ಕಾಂಪ್ಲೆಕ್ಸ್ ಮುಂತಾದ ಸ್ಥಿರಾಸ್ತಿ ಉದ್ದೇಶಗಳಿಗೆ, ಕಾರ್ ರೇಸಿಂಗ್, ಗಾಲ್ಫ್ ಇಂತಹ ವಿಲಾಸಿ ಕ್ರೀಡೆಗಳಿಗಾಗಿ ಭೂಮಿ ಸ್ವಾಧೀನಪಡಿಸಿಕೊಂಡು ರೈತರನ್ನು ಒಕ್ಕಲೆಬ್ಬಿಸಿದಾಗ, ಇದು ಇನ್ನಷ್ಟು ಹೊಲಸಾಗುತ್ತದೆ.

ಹೆದ್ದಾರಿಗಳು, ಕಾರ್ಖಾನೆಗಳು ಮುಂತಾದ ಮೂಲಸೌಕರ್ಯಗಳನ್ನು ನಿರ್ಮಿಸಬಾರದು ಎಂದು ಹೇಳಲಾಗದು. ಭೂಸ್ವಾಧೀನ ಒಂದು ಗಂಭೀರ ಸಮಸ್ಯೆ. ಅದನ್ನು ಅರ್ಥಪೂರ್ಣವಾಗಿ ಬಗೆಹರಿಸಬೇಕು. ಆದರೆ, ಬಂಡವಾಳಶಾಹಿಯು ಅಭಿವೃದ್ಧಿ ಸಾಧಿಸಲು ಅಳವಡಿಸಿಕೊಂಡಿರುವ ದಿಕ್ಪಥದ ವಿಧಾನದಿಂದಾಗಿ ಈ ಸಮಸ್ಯೆಗಳು ಸೃಷ್ಠಿಯಾಗಿವೆ. ಈ ಅಂಶವನ್ನು ಒಳಗಣ್ಣಿನ ಮೂಲಕ ಸಾಕ್ಷಾತ್ಕರಿಸಿಕೊಂಡು ನೋಡಿದಾಗ, "ಅಭಿವೃದ್ಧಿ" ಯೋಜನೆಗಳಿಗಾಗಿ ಜಮೀನು ಕಳೆದುಕೊಂಡು ಸಂಕಷ್ಟಕ್ಕೊಳಗಾದ ರೈತರ ಪ್ರತಿರೋಧದ ಹಿಂದಿರುವ ತಳಮಳ ಅರ್ಥವಾಗುತ್ತದೆ.

ಈ ಎಲ್ಲ ಅಂಶಗಳು ಸೂಚಿಸುವುದು ಏನೆಂದರೆ, ನಮ್ಮಂತಹ ದೇಶಗಳಲ್ಲಿ ಬಂಡವಾಳಶಾಹಿಯು ಸಾಧಿಸುವ "ಅಭಿವೃದ್ಧಿ"ಯು, ಅದು ಎಷ್ಟೇ ವೇಗವಾಗಿರಲಿ, ಬಡತನ ನಿವಾರಿಸಲು ಮತ್ತು ನಿರುದ್ಯೋಗ ಪರಿಹರಿಸಲು ಅಸಮರ್ಥವಾಗಿದೆ. ಆದ್ದರಿಂದ, ಒಂದು ಪರ್ಯಾಯ ದಿಕ್ಪಥವುಳ್ಳ ಅಭಿವೃದ್ಧಿ ಮಾದರಿಯನ್ನು ಸೃಷ್ಠಿಸಬೇಕಾಗುತ್ತದೆ. ಅದು, ಕಿರು ಉತ್ಪಾದಕರನ್ನು ರಕ್ಷಿಸುವ, ಪ್ರೋತ್ಸಾಹಿಸುವ ಮತ್ತು ಬಂಡವಾಳಶಾಹಿಗೆ ಪರ್ಯಾಯವಾಗುವ ಮಾದರಿಯಾಗುತ್ತದೆ. ಅಂತಹ ಒಂದು ಮಾದರಿಯು, ಸ್ವಯಮಿಚ್ಛೆಯಿಂದ ರಚಿಸಿಕೊಂಡ ಸಹಕಾರ ಸಂಘಗಳು ಮತ್ತು ಸಮೂಹಗಳ(ಕಲೆಕ್ಟಿವ್) ಮೂಲಕ ಸಂಘಟನೆಯ ಮಟ್ಟವನ್ನು ಮೇಲಕ್ಕೆತ್ತುತ್ತದೆ(ಇದಕ್ಕೆ ಭೂಮಿಯ ಮರುಹಂಚಿಕೆ ಒಂದು ಅಗತ್ಯ ಪೂರ್ವಶರತ್ತಾಗುತ್ತದೆ). ಇದು ಹೂಡಿಕೆ ನಡೆಸಲು ಮತ್ತು ತಂತ್ರಜ್ಞಾನದ ಪ್ರಗತಿಯನ್ನು ಪರಿಚಯಿಸಲು' ಸಾರ್ವಜನಿಕ ವಲಯ ಮತ್ತು ಸಹಕಾರಿ ವಲಯಗಳನ್ನು ಅವಲಂಬಿಸುತ್ತದೆ. ತಂತ್ರಜ್ಞಾನದ ಪ್ರಗತಿಯಿಂದಾಗಿ ನಿರುದ್ಯೋಗ ಸೃಷ್ಠಿಯಾಗುವುದಿಲ್ಲ.

ಆದರೆ ಇಂತಹ ಒಂದು ಪರ್ಯಾಯಕ್ಕೆ ಪ್ರಭುತ್ವದ ವರ್ಗ ಚಾರಿತ್ರ್ಯ ಬದಲಾಗಬೇಕಾಗುತ್ತದೆ. ಶ್ರಮಜೀವಿಗಳು, ರೈತರು, ಕಿರು ಉತ್ಪಾದಕರು ಮತ್ತು ಇತರ ಕಿರು ಉತ್ಪಾದಕ ವಿಭಾಗಗಳ ನಡುವಿನ ಸಖ್ಯತೆ ಆಧರಿಸಿದ ಪ್ರಭುತ್ವವನ್ನು ರೂಪಿಸಬೇಕಾಗುತ್ತದೆ. ಅಂತಹ ಪ್ರಭುತ್ವವು ಅಸ್ತಿತ್ವಕ್ಕೆ ಬರುವ ಮೊದಲಿನ ಸಂಕ್ರಮಣ ಅವಧಿಯಲ್ಲೂ ಬಡತನವನ್ನು ಉಲ್ಬಣಗೊಳಿಸುವ ನವ-ಉದಾರ ಬಂಡವಾಳಶಾಹಿ ಅಭಿವೃದ್ಧಿಯ ದಿಕ್ಪಥದ ವಿರುದ್ಧವಾಗಿ ಪ್ರಗತಿಪರರು ಹೋರಾಡಬೇಕು ಮತ್ತು ಈ ಅವಧಿಯಲ್ಲಿ ಕಾರ್ಮಿಕರು, ರೈತರು, ಮತ್ತು ಇತರರ ವರ್ಗ ಸಖ್ಯತೆಯನ್ನು ರೂಪಿಸುವ ಮತ್ತು ಬಲಪಡಿಸುವ ಸಂಕ್ರಮಣ ಘಟ್ಟದ ಬೇಡಿಕೆಗಳನ್ನು ಮುಂದಿಡಬೇಕು.



ಆಗಸ್ಟ್ 2ರಂದು ಯಶಸ್ವಿ ಬಿಹಾರ್ ಬಂದ್: ಮಹಿಳೆಯರ, ದಲಿತರ ಹೆಚ್ಚುತ್ತಿರುವ ಶೋಷಣೆಯ ವಿರುದ್ಧ ಎಡಪಕ್ಷಗಳ ಕರೆ

ಬಿಹಾರದಿಂದ ಕಳೆದ ಹಲವು ದಿನಗಳಿಂದ ಸಾಮೂಹಿಕ ಅತ್ಯಾಚಾರಗಳ, ದಲಿತರ ಶೋಷಣೆಯ ಸುದ್ದಿಗಳು ಬರುತ್ತಲೇ ಇವೆ. ಇದರ ವಿರುದ್ಧ ಬಲವಾದ ಪ್ರತಿಭಟನೆಯನ್ನು ದಾಖಲಿಸಲು ಐದು ಎಡಪಕ್ಷಗಳು ಆಗಸ್ಟ್ 2ರಂದು ರಾಜ್ಯ ಬಂದ್‌ಗೆ ಕರೆ ನೀಡಿದವು. ಇದಕ್ಕೆ ಜನಗಳಿಂದ ಭಾರೀ ಬೆಂಬಲ ದೊರೆತಿದೆ ಎಂದು ವರದಿಯಾಗಿದೆ. ಅಂಗಡಿಗಳು, ಹೋಟೇಲುಗಳು, ಶಾಲೆಗಳು ಅಂದು ಮುಚ್ಚಿದ್ದವು. ರೈಲು ಮತ್ತು ರಸ್ತೆ ಸಾರಿಗೆ ಅಸ್ತವ್ಯಸ್ತಗೊಂಡವು.

ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್), ಎಸ್‌ಯುಸಿಐ(ಐ) ಮತ್ತು ಆರ್‌ಎಸ್‌ಪಿ ಕಾರ್ಯಕರ್ತರು ಮತ್ತು ಮುಖಂಡರು ಪಾಟ್ನಾದ ಗಾಂಧಿ ಮೈದಾನದಿಮದ ಮೆರವಣಿಗೆ ಆರಂಭಸಿ ಪೋಲಿಸರು ಹಾಕಿದ್ದ ಬೇಲಿಯನ್ನು ಮುರಿದು ನುಗ್ಗಿದರು. ಈ ಸಂದರ್ಭದಲ್ಲಿ ಪೋಲೀಸರು , ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯೆ ಮತ್ತು ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಉಪಾಧ್ಯಕ್ಷರೂ ಆಗಿರುವ ರಾಮ್‌ಪರಿಯವರ ಮೇಲೆ ಹಲ್ಲೆಯನ್ನು ನಡೆಸಿದರು. ಅದನ್ನು ಎದುರಿಸಿಕೊಂಡು ಮೆರವಣಿಗೆ ಮುಂದೆ ಸಾಗಿತು.

"ನಿತಿಶ್ ಕುಮಾರ್ ಬಿಜೆಪಿ ಸೆರಗು ಹಿಡಿದಂದಿನಿಂದ ಮಹಿಳೆಯರು, ದಲಿತರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿವೆ", "ಮಾನ-ಮರ್ಯಾದೆಯ ಲೂಟಿ, ಅರ್ಥವ್ಯವಸ್ಥೆಯ ಕುಸಿತದ ವಿರುದ್ಧ ಸಂಘರ್ಷ" ಇತ್ಯಾದಿ ಘೋಷಣಾ ಫಲಕಗಳನ್ನು ಪ್ರತಿಭಟನಾಕಾರರು ಹಿಡಿದಿದ್ದರು. ಕೊನೆಯಲ್ಲಿ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಅವಧೇಶ್ ಕುಮಾರ್ ವಹಿಸಿದರು. ಎಡಪಕ್ಷಗಳು ಮಾತ್ರವಲ್ಲ, ಇತರ ಜಾತ್ಯತೀತ ಪಕ್ಷಗಳ ಮುಖಂಡರೂ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬಿಹಾರದ ಹಲವೆಡೆಗಳಲ್ಲಿ 'ಬಾಲಿಕಾಗೃಹ'ಗಳಲ್ಲಿ ಸತತವಾಗಿ ಲೈಂಗಿಕ ದುಷ್ಕೃತ್ಯಗಳು ನಡೆಯುತ್ತಿವೆ ಎಂಬುದು ಮುಂಬೈಯ ಟಾಟಾ ಸಮಾಜವಿಜ್ಞಾನಗಳ ಸಂಸ್ಥೆ(ಟಿಐಎಸ್‌ಎಸ್)ಯ ವರದಿಯಿಂದ ಬೆಳಕಿಗೆ ಬಂದಿದೆ. ಮುಝಫ್ಫರ್‌ಪುರದ 'ಬಾಲಿಕಾಗೃಹ'ದಲ್ಲಿರುವ 44 ಹೆಣ್ಣುಮಕ್ಕಳಲ್ಲಿ ಕನಿಷ್ಟ 34 ಇಂತಹ ಲೈಂಗಿಕ ದುರಾಚಾರಣೆಗಳಿಗೆ ತುತ್ತಾಗಿದ್ದಾರೆ ಎಂದು ತಿಳಿದು ಬಂದಿದೆ.

ಸಾರ್ವಜನಿಕ ಒತ್ತಡಗಳಿಂದಾಗಿ ಜೆಡಿ(ಯು)-ಬಿಜೆಪಿ ಸರಕಾರ ಇದರ ತನಿಖೆಯನ್ನು ಕೊನೆಗೂ ಸಿಬಿಐಗೆ ಒಪ್ಪಿಸಿದೆ. ಈ ತನಿಖೆ ಪಾಟ್ನಾ ಹೈಕೋರ್ಟಿನ ಮೇಲುಸ್ತುವಾರಿಯಲ್ಲಿ ನಡೆಯಬೇಕು ಎಂಬುದು ಎಡಪಕ್ಷಗಳ ಒಂದು ಪ್ರಮುಖ ಬೇಡಿಕೆ. ಇದುವರೆಗೆ ಆಪಾದಿತರೆಂದು ಗುರುತಿಸಿರುವ 11 ಮಂದಿಯಲ್ಲಿ 10 ಮಂದಿಯ ಬಂಧನವಾಗಿದೆ. ಈ ಕೇಸಿಗೆ ಸಂಬಂಧಪಟ್ಟಂತೆ ರಾಜ್ಯದ ಸಾಮಾಜಿಕ ಕಲ್ಯಾಣ ಮಂತ್ರಿ ಮಂಜು ವರ್ಮರವರ ಪತಿಯ ಹೆಸರೂ ಬಂದಿರುವುದರಿಂದಾಗಿ ಈ ಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಎಡಪಕ್ಷಗಳು ಒತ್ತಾಯಿಸುತ್ತಿವೆ.

ಇದಕ್ಕೆ ಮೊದಲು ಸಾರಣ್ ಜಿಲ್ಲೆಯಲ್ಲಿ 9ನೇ ತರಗತಿಯ ಬಾಲಕಿಯ ಮೇಲೆ ಆಕೆಯ ಶಾಲೆಯ ಪ್ರಿನ್ಸಿಪಾಲ್, ಇಬ್ಬರು ಶಿಕ್ಷಕರು ಮತ್ತು ಕೆಲವು ವಿದ್ಯಾರ್ಥಿಗಳು ಬ್ಲಾಕ್ ಮೇಲ್ ಮಾಡಿ ಅತ್ಯಾಚಾರ ನಡೆಸುತ್ತಿದ್ದ ಪ್ರಕರಣವೊಂದು ಬೆಳಕಿಗೆ ಬಂದಿತ್ತು.

ರಾಜ್ಯದ ಇತರ ಹಲವೆಡೆಗಳಿಂದಲೂ ಇಂತಹ ಪ್ರಕರಣಗಳು ವರದಿಯಾಗಿವೆ.

ಈ ಪುಟದಲ್ಲಿ ಈ ಹಿಂದೆ ವರದಿಯಾಗಿರುವಂತೆ ಮಧುಬನಿ ಜಿಲ್ಲೆಯ ಮೊಗಾಲ ಎಂಬ ಹಳ್ಳಿಯಲ್ಲಿ ಮಹಾದಲಿತರೆಂದು ಗುರುತಿಸಲ್ಪಟ್ಟಿರುವ ಮುಸಹರ್ ಸಮುದಾಯದ 100 ಕಟುಂಬಗಳ ಮನೆಗಳನ್ನು ನೆಲಸಮ ಮಾಡಿರುವುದರ ವಿರುದ್ಧ ಹೋರಾಟ ನಡೆಯುತ್ತಿದೆ.

ಅದೇ ರೀತಿ, ಮುಝಫ್ಫರ್‌ಪುರ ಜಿಲ್ಲೆಯ ಸರ್ಯೆಯ ಎಂಬಲ್ಲಿ ಭೂಮಾಲಕನೊಬ್ಬ 60 ದಲಿತರ ಮನೆಗಳನ್ನು ಕೆಡವಿದ್ದ. ಜುಲೈ 26-27ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಮತ್ತು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಅವಧೇಶ್ ಕುಮಾರ್ ಮನೆಕಳಕೊಂಡವರ ಕುಟುಂಬಗಳನ್ನು ಭೇಟಿ ಮಾಡಿದ್ದರು.

ಮಹಿಳೆಯರು, ದಲಿತರು ಮತ್ತು ಇತರ ದಮನಕ್ಕೊಳಗಾದ ವಿಭಾಗಗಳ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿದ್ದು ಇದನ್ನು ತಡೆಯುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ ಎಂದಿರುವ ಅವಧೇಶ್ ಕುಮಾರ್ ಪಾಳೆಯಗಾರಿ ಭೂಮಾಲಕರು, ರಾಜಕಾರಣಿಗಳು ಮತ್ತು ಪೋಲೀಸರ ಶಾಮೀಲಿನಿಂದ ದಲಿತರ ಬೆಲೆಬಾಳುವ ಭೂಮಿಗಳನ್ನು ಕಸಿದುಕೊಳ್ಳುವ ಸಂಚಿನ ಭಾಗವಾಗಿ ಈ ಅತ್ಯಾಚಾರಗಳು ನಡೆಯುತ್ತಿವೆ ಎಂದಿದ್ದಾರೆ.

ರಾಜ್ಯಗಳ ಸುತ್ತ

ಉತ್ತರ ಪ್ರದೇಶ: ಕೇವಲ 13% ಹೂಡಿಕೆ ಆಶ್ವಾಸನೆಗಳ ಭರ್ಜರಿ ಉದ್ಘಾಟನೆ


ಜುಲೈ 29 ರಂದು ಲಕ್ನೌನಲ್ಲಿ ಪ್ರಧಾನ ಮಂತ್ರಿಗಳು ಉತ್ತರ ಪ್ರದೇಶದ ಸರಕಾರ ಪಡೆದಿದೆ ಎನ್ನಲಾದ 81 ಹೂಡಿಕೆ ಪ್ರಾಜೆಕ್ಟ್‌ಗಳ ಭರ್ಜರಿ ಉದ್ಘಾಟನೆ ನಡೆಸಿದರು. ರಾಜ್ಯದ ಮುಖ್ಯಮಂತ್ರಿಗಳಂತೂ ಇದ್ದರು. ಜತೆಗೆ ದೇಶದ ದೊಡ್ಡ ಉದ್ಯಮಿಗಳ ದೊಡ್ಡ ತಂಡವೇ ಇತ್ತು.

ಈ 81 ಹೂಡಿಕೆಗಳ ಮೊತ್ತ 60 ಸಾವಿರ ಕೋಟಿ ರೂ. ಎನ್ನಲಾಗಿದೆ.

ಕಳೆದ ಫೆಬ್ರುವರಿಯಲ್ಲಿ ರಾಜ್ಯ ಸರಕಾರ ಒಂದು ಭವ್ಯ 'ಹೂಡಿಕೆದಾರರ ಶೃಂಗಸಭೆ' ಏರ್ಪಡಿಸಿತ್ತು. ಅಲ್ಲಿ 4.28 ಲಕ್ಷ ಕೋಟಿ ರೂ.ಗಳ ಆಶ್ವಾಸನೆಗಳು ಬಂದಿದ್ದವು ಎಂದು ಸರಕಾರ ಹೇಳಿತ್ತು. ಅದರಲ್ಲಿ ಜುಲೈ 29 ರಂದು ಉದ್ಘಾಟನೆ ಮಾಡಲು ಸಾಧ್ಯವಾದದ್ದು 60 ಸಾವಿರ ಕೋಟಿ ಮಾತ್ರ, ಅಂದರೆ 13%.

ಇದನ್ನೇ ಪ್ರಧಾನಿಗಳು ಮಹಾಸಾಧನೆ ಎಂದು ಸಾರಿದರು.

ಇದನ್ನು ಪಡೆಯಲೂ ಉತ್ತರ ಪ್ರದೇಶ ಸರಕಾರ ಹರಸಾಹಸ ಮಾಡಬೇಕಾಯಿತು, ಆಶ್ವಾಸನೆ ನೀಡಿ ಹೋದ ಪ್ರತಿಯೊಬ್ಬ ಉದ್ಯಮಿಯ ಬಳಿಸಾರಿದ್ದೇವೆ ಎಂದು ಸರಕಾರವೇ ಹೇಳಿಕೊಂಡಿದೆ. ಅಲ್ಲದೆ ಉದ್ಯಮಿಗಳ ಪ್ರೀತ್ಯರ್ಥ ಕಾರ್ಮಿಕ ಕಾನೂನುಗಳಲ್ಲಿ, ತೆರಿಗೆಗಳಲ್ಲಿ ಭಾರೀ ರಿಯಾಯ್ತಿಗಳನ್ನೂ ಘೋಷಿಸಲಾಗಿದೆ. ಆದರೂ ಬಂದದ್ದು 13%. ಇವುಗಳಲ್ಲೂ ಎಷ್ಟು ಪೂರ್ಣಗೊಳ್ಳುತ್ತವೆ ಎಂದು ಕಾದು ನೀಡಬೇಕಾಗಿದೆ ಎನ್ನುತ್ತಾರೆ ವಿಶ್ಲೇಷಕರು.



ಅವರು ನಿಜವಾಗಿಯೂ ಉದ್ಧಾರಕ್ಕೆ ಬದ್ಧರಾಗಿದ್ದಾರೆ-ಉ.ಪ್ರ..ಕ್ಕೆ 60 ಸಾವಿರ ಕೋಟಿ ರೂ. 81 ಪ್ರಾಜೆಕ್ಟ್‌ಗಳು, ತಿಂಗಳಿಗೆ 5 ಭೇಟಿ,

ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಕೇರಳಕ್ಕೆ ಸಮಗ್ರ ಶಿಕ್ಷಣ ಅಭಿಯಾನದಲ್ಲೂ 50% ಕಡಿತ:

ಕೇರಳದ ಮಕ್ಕಳಿಂದಲೂ ರಾಜಕೀಯ ಬೆದರಿಕೆಯ ಭೀತಿ ಆವರಿಸಿರುವ ಆಧುನಿಕ ಕಂಸನಂತೆ ವರ್ತನೆ-ಡಾ.ಐಸಾಕ್ ಥಾಮಸ್

ಜುಲೈ 19ರಂದು ಪ್ರಧಾನಮಂತ್ರಿಗಳು ಕೊನೆಗೂ ಕೇರಳದ ಸರ್ವಪಕ್ಷ ನಿಯೋಗಕ್ಕೆ ಭೇಟಿ ದಯಪಾಲಿಸಿದರು. ತೀವ್ರವಾಗಿ ಕಡಿತ ಮಾಡಿರುವ ಆಹಾರಧಾನ್ಯಗಳ ಪ್ರಮಾಣವನ್ನು ಹೆಚ್ಚಿಸಬೇಕು, ಆಮೂಲಕ ಸಾರ್ವಜನಿಕ ವಿತರಣ ವ್ಯವಸ್ಥೆಗೆ ಆಗಿರುವ ತೊಂದರೆಯನ್ನು ನಿವಾರಿಸಬೇಕು, 2008-09ರ ಕೇಂದ್ರ ಬಜೆಟಿನಲ್ಲಿ ರಾಜ್ಯಕ್ಕೆಂದು ಪ್ರಕಟಿಸಿದ ರೈಲು ಬೋಗಿ ಕಾರ್ಖಾನೆಯನ್ನು ಆರಂಭಿಸಬೇಕು, ಇತ್ತೀಚಿನ ಮಳೆ-ಪ್ರವಾಹದಿಂದ ಆಗಿರುವ ಅಪಾರ ನಷ್ಟಗಳ ಮೌಲ್ಯಮಾಪನ ಮಾಡಿ ಪರಿಹಾರ ಒದಗಿಸಬೇಕು ಮತ್ತಿತರ ಬೇಡಿಕೆಗಳನ್ನು ಮುಖ್ಯಂತ್ರಿಗಳ ನೇತರತ್ವದ ಸರ್ವಪಕ್ಷ ನಿಯೋಗ ಪ್ರಧಾನಿಗಳ ಮುಂದಿಟ್ಟಿತು. ಆದರೆ ಎಲ್ಲದಕ್ಕೂ ಪ್ರಧಾನಿಗಳಿಂದ ಸಿಕ್ಕಿದ್ದು ನಿರಾಶಾದಾಯಕ ಪ್ರತಿಕ್ರಿಯೆ ಎಂದು ಪ್ರತಿಪಕ್ಷದ ನಾಯಕ ರಮೇಶ್ ಚೆನ್ನಿತಾಲ ಕೂಡ ಬೇಸರ ವ್ಯಕ್ತಪಡಿಸಿದ್ದರು.

ಈಗ ಕೇಂದ್ರ ಸರಕಾರ ಸಮಗ್ರ ಶಿಕ್ಷಣ ಅಭಿಯಾನ(ಎಸ್‌ಎಸ್‌ಎ)ದ ಅಡಿಯಲ್ಲಿ ಕೇರಳಕ್ಕೆ ಕೊಡಬೇಕಾದ ನಿಧಿಯನ್ನೂ ಅರ್ಧಕ್ಕಿಳಿಸಿದೆ ಎಂಬ ಸುದ್ದಿ ಬಂದಿದೆ.

ಸಮಗ್ರ ಶಿಕ್ಷಣ ಅಭಿಯಾನ ಅಥವ ಎಸ್‌ಎಸ್‌ಎ ಈ ಬಜೆಟ್‌ನಿಂದ ಆರಂಭಿಸಿರುವ ಯೋಜನೆ. ಇದು ನರ್ಸರಿ-ಪೂರ್ವದಿಂದ 12ನೇ ತರಗತಿ ವರೆಗೆ ಶಿಕ್ಷಣವನ್ನು ಸಮಗ್ರವಾಗಿ ನೋಡಿ ಸಮಾನ ಶಾಲಾ ಅವಕಾಶ ಮತ್ತು ಸಮತ್ವಪೂರ್ಣ ಕಲಿಕೆಯ ಫಲಿತಾಂಶಗಳಿಗಾಗಿ ಈ ಮೊದಲು ಇದ್ದ ಸರ್ವಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಮತ್ತು ಟೀಚರ್ಸ್ ಎಜ್ಯುಕೇಶನ್ ಇವು ಮೂರನ್ನು ಒಟ್ಟುಗೂಡಿಸಿದ ಯೋಜನೆ. ಇದು ಕೇಂದ್ರ ಸರಕಾರದ ಯೋಜನೆಯಾಗಿದ್ದು ರಾಜ್ಯಗಳು ತಯಾರಿಸುವ ಯೋಜನೆಯ 60% ದಷ್ಟು ಕೊಡಬೇಕು. ಕೇರಳಕ್ಕೆ ಬಜೆಟಿನಲ್ಲಿ 41.43 ಕೋಟಿ ರೂ. ಸೂಚಿಸಲಾಗಿತ್ತು. ಕೇರಳ ಸರಕಾರ ಪುಕ್ಕಟೆ ಪಠ್ಯಪುಸ್ತಕಗಳು, ಯೂನಿಫಾರ್ಮ್‌ಗಳು, ಹುಡುಗಿಯರಿಗೆ ಮಾರ್ಷಿಯಲ್ ಆರ್ಟ್ ತರಬೇತಿ, ವಿದ್ಯಾರ್ಥಿಗಳಿಗೆ ವೃತ್ತಿ ತರಬೇತಿ, ಶಿಕ್ಷಕರಿಗೆ ತರಬೇತಿ ಇತ್ಯಾದಿ 38 ವಿಭಾಗಗಳ ಮೇಲೆ ಗಮನ ಕೇಂದ್ರೀಕರಿಸಿದ 1941.10 ಕೋಟಿ ರೂ.ಗಳ ಯೋಜನೆಯನ್ನು ಸಲ್ಲಿಸಿತ್ತು. ಆದರೆ ಅದಕ್ಕೆ ಈಗ ಕೇಂದ್ರ ಸರಕಾರ ನೀಡಿರುವುದು ಕೇವಲ 206.06 ಕೋಟಿ. ಅಂದರೆ ಬಜೆಟಿನಲ್ಲಿ ಸೂಚಿಸಿದುದರ ಅರ್ಧದಷ್ಟು ಮಾತ್ರ. ಕರ್ನಾಟಕಕ್ಕೂ ಇದೇ ರೀತಿ ಕಡಿತ ಮಾಡಲಾಗಿದೆ. ಬಜೆಟಿನಲ್ಲಿ ಸೂಚಿಸಿದ 92.37 ಕೋಟಿ ರೂ. ಬದಲು ಕೇವಲ 577.84 ಕೋಟಿ ರೂ. ನೀಡಲಾಗಿದೆ. ಅಂದರೆ 38% ಕಡಿತ.

ಈ ಬಗ್ಗೆ ಪ್ರತಿಕ್ರಿಯಿಸುತ್ತ ಕೇರಳ ಹಣಕಾಸು ಮಂತ್ರಿ ಡಾ. ಥಾಮಸ್ ಐಸಾಕ್ ಕೇರಳದ ಮಕ್ಕಳು ಕೂಡ ಈಗ ಕೇಂದ್ರದ ರಾಜಕಿಯ ಸೇಡಿಗೆ ಬಲಿಯಾಗುತ್ತಿದ್ದಾರೆ ಎಂದಿದ್ದಾರೆ. ಮೋದಿಯವರಿಗೆ ಮಕ್ಕಳಿಂದಲೂ ರಾಜಕೀಯ ಬೆದರಿಕೆಯ ಭಯ ಉಂಟಾಗಿದೆ, ಈ ರೀತಿ ನಿಧಿ ಕಡಿತ ಮಾಡಿ ಆಧುನಿಕ ಕಂಸನಂತೆ ವರ್ತಿಸುತ್ತಿದ್ದಾರೆ ಎಂದು ಅವರು ಕಟುವಾಗಿ ಟೀಕಿಸಿದ್ದಾರೆ.

ಇದು ದೇಶಾದ್ಯಂತ ಶಿಕ್ಷಣ ವ್ಯವಸ್ಥೆಯ ಉನ್ನತೀಕರಣದ ಉದ್ದೇಶ ಹೊಂದಿರುವ ಕೇಂದ್ರೀಯ ಯೋಜನೆಯಾಗಿದ್ದು ಕೆಲವು ರಾಜ್ಯಗಳ ಬೇಡಿಕೆಗಳನ್ನು ಮಾತ್ರ ಕೈಬಿಡುತ್ತಿರುವದೇಕೆ ಎಂದು ಅವರು ಪ್ರಶ್ನಿಸಿದ್ದಾರೆ.

ಪ್ಯಾಲೇಸ್ಟಿನಿಯನ್ ಪತ್ರಕರ್ತೆ ಲಾಮಾ ಖಾಟರ್ ಬಂಧನ





ಜುಲೈ 24ರಂದು ಪ್ಯಾಲೇಸ್ಟಿನಿಯನ್ ನ 42 ವಯಸ್ಸಿನ ಪತ್ರಕರ್ತೆ ಬರಹಗಾತಿ ಲಾಮಾ ಖಾಟರ್ ರನ್ನು ಇಸ್ರೇಲ್ ಪಡೆಗಳು ಬಂಧಿಸಿರುವುದನ್ನು ಕ್ರೂರ ಹಾಗೂ ಅಮಾನವೀಯ ಎಂದು, ಪ್ಯಾಲೇಸ್ಟಿನಿಯನ್ ಪ್ರಿಸನರ್ಸ್ ಕ್ಲಬ್ (ಪಿಪಿಸಿ) ತಿಳಿಸಿದೆ. ಇಸ್ರೇಲಿನ ಸೈನಿಕರ ವಿರುದ್ದ "ಪ್ರತಿಕೂಲ" ಚಟುವಟಿಕೆಗಳ ಆರೋಪದ ಮೇಲೆ ಅವರನ್ನು ಬಂದಿಸಲಾಗಿದೆ ಎನ್ನಲಾಗಿದೆ. ಪಿಪಿಸಿ ಯ ವಕೀಲ ಫಿರಾಸ್ ಅಲ್ –ಸಬ್ಬ ಖೇತರ್ ಜೈಲಿನಲ್ಲಿ ಬೇಟಿ ಮಾಡಿ, ಖಾದರ್ ಳ ಯೋಗಕ್ಷೇಮ ಮತ್ತು ಸುರಕ್ಷತೆಯನ್ನು ವಿಚಾರಿಸಿಕೊಂಡು, ಅವರನ್ನು ಜವಾಬ್ದಾರಿಯಿಂದ ನೋಡಿಕೊಳ್ಳಲು ಜೈಲಿನ ಅಧಿಕಾರಿಗಳಿಗೆ ಹೇಳಿದ್ದಾರೆ ಹಾಗೂ ತಕ್ಷಣವೇ ಬಿಡುಗಡೆ ಮಾಡಬೇಕೆಂದು ತನ್ನ ಪೇಸ್ ಬುಕ್ ನ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಗಾಜದಲ್ಲಿ ಮಹಿಳಾ ಪ್ರತಿಭಟನೆ ಚಳವಳಿ ಯನ್ನು ಸಂಘಟಿಸಿ, ಇದು ಪಶ್ಚಿಮ ಬ್ಯಾಂಕಿನಲ್ಲಿ ಏನಾಗುತ್ತಿದೆ ಎಂಬ ಸತ್ಯವನ್ನು ತನ್ನ ಬರವಣಿಗೆಯ ಮೂಲಕ ತಿಳಿಸಿಕೊಟ್ಟ ಪರಿಣಾಮವೇ ಖಾಟರ್ ಳನ್ನು ಬಂಧಿಸಲು ಮೂಲ ಕಾರಣ. ಹೀಗೆಂದು ಆ ಪ್ರತಿಭಟನಾ ಆಂದೋಲನದ ಮುಖ್ಯಸ್ಥ ರಾದ ರಾಜಾ–ಅಲ್– ಹಲಾಬಿ ಯವರು ಹೇಳಿಕೆ ನೀಡಿ ಖಾಟರ್ ರವರ ಬಂಧನವನ್ನು ಉಗ್ರವಾಗಿ ಖಂಡಿಸಿದ್ದಾರೆ. ಪಶ್ಚಿಮ ಬ್ಯಾಂಕ್ ನಲ್ಲಿ ಇನ್ನಿತರೆ ದಾಳಿಗಳಲ್ಲಿ ಕನಿಷ್ಟ 13 ಮಂದಿ ಪ್ಯಾಲೇಸ್ಟಿನಿಯನ್ ಜನರನ್ನು ಬಂಧಿಸಲಾಗಿದೆ.

ಅಂದು ರಾತ್ರಿ ಸುಮಾರು 2 ಗಂಟೆಯ ಸಮಯದಲ್ಲಿ, ಮಲಗಿದ್ದ ಸಂದರ್ಭದಲ್ಲಿ ಕನಿಷ್ಟ 25 ಇಸ್ರೇಲಿನ ಸೈನಿಕರು ಅವಳನ್ನು ಕುಟುಂಬದವರಿಂದ ದೂರ ಕರೆದೊಯ್ದು ಅಮಾನವೀಯವಾಗಿ ವರ್ತಿಸಿದ್ದಾರೆ ಎಂಬ ಸುದ್ದಿ ಹಾಗೆಯೇ, ಲಾಮಾಳನ್ನು ಬಂಧಿಸುವ ಮುನ್ನಾ, ತನ್ನ ಎರಡು ವರ್ಷದ ಮಗ ಯಾಹ್ಯಾಗೆ ಚುಂಬನ ಕೊಟ್ಟು ವಿದಾಯ ಹೇಳುವ ಹೃದಯ ಭಾವುಕ ದೃಶ್ಯಗಳನ್ನು, ಲಾಮಾಳ ಮಗಳು ಬೆಸನ್ನ್ ತೆಗೆದು 'ಪೇಸ್ ಬುಕ್' ನಲ್ಲಿ ಪೋಸ್ಟ್ ಮಾಡಿರುವುದು, ಸಾಮಾಜಿಕ ಜಾಲತಾಣ ಗಳಲ್ಲಿ ವೈರಲ್ ಆಗಿ ಹೋಗಿತ್ತು. ಜೊತೆಗೆ, ಟ್ವಿಟರ್ ನಲ್ಲಿ 87,000 ಅನುಯಾಯಿಗಳನ್ನು ಹೊಂದಿರುವ ಲಾಮಾರವರ ಬರಹಗಳು ಅತ್ಯಂತ ಜನ ಮನ್ನಣೆಗೆ ಪಾತ್ರವಾಗಿದ್ದವು. ಇವೆಲ್ಲವೂ ಪ್ಯಾಲಿಸ್ಟೈನ್ ನ ಆಕ್ರಮಣ ಮತ್ತು ಇಸ್ರೇಲ್ ನ ಅಧೀನದಲ್ಲಿರುವ ಕೈಗೊಂಬೆ ಆಡಳಿತದ ವಿರುದ್ಧದ ಬರವಣಿಗೆಯಾಗಿವೆ. ಇತ್ತೀಚೆಗೆ ಇಸ್ರೇಲ್ ಮತ್ತು ಈಜಿಪ್ಟ್ ಸೈನಿಕ ರು ಗಾಜಾ ಪಟ್ಟಿಯ ಮೇಲೆ ನಡೆಸಿದ ದಾಳಿಯನ್ನು ಲಾಮಾ ಉಗ್ರವಾಗಿ ಟೀಕಿಸಿ ಲೇಖನ ಬರೆದಿದ್ದರು, ಹಾಗೆಯೇ, ಆಕ್ರಮಿತ ಪೂರ್ವ ಜೆರುಸೆಲಂ ನಲ್ಲಿನ 'ಅಲ್–ಅಕ್ಸಾ ' ಮಸೀದಿಯನ್ನು ಇಸ್ರೇಲ್ ಸೈನಿಕರು ದಾಳಿಯ ಮೂಲಕ ನಿಯಂತ್ರಣ ಕ್ಕೆ ತೆಗೆದು ಕೊಂಡಿದ್ದನ್ನು ಲಾಮಾ ಅವರು ಉಗ್ರವಾಗಿಯೇ ಖಂಡಿಸಿದ್ದರು. ಇವೆಲ್ಲವೂ ಲಾಮಾಳ ಬಂಧನಕ್ಕೆ ಕಾರಣಗಳಾಗಿವೆ.

ಅಹೆದ್ ತಮಿಮಿ ಇಸ್ರೇಲ್ ಜೈಲಿನಿಂದ ಬಿಡುಗಡೆ

ಪ್ಯಾಲೇಸ್ಟಿನಿಯನ್ ನ ಹದಿನೇಳು ವರ್ಷ ವಯಸ್ಸಿನ ಹುಡುಗಿ ಅಹೆದ್ ತಮಿಮಿ ಇಸ್ರೇಲ್ ನಿಂದ ಎಂಟು ತಿಂಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಿದ್ದರು, ತನ್ನ ಜೈಲು ಶಿಕ್ಷೆ ಪೂರ್ಣಗೊಂಡ ನಂತರ ಜುಲೈ 29 ರಂದು ಬಿಡುಗಡೆ ಗೊಂಡಿದ್ದಾರೆ. ಜೊತೆಯಲ್ಲಿ ಅವರ ತಾಯಿ ನಾರಿಮನ್ ಕೂಡ ತಮಿಮಿ ನೊಂದಿಗೆ ಅದೇ ಸಮಯದಲ್ಲಿ ಅಷ್ಟೇ ದಿನಗಳು ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದ್ದಾರೆ. ಇವರನ್ನು ಗ್ರಾಮದ ನಬಿ ಸಲೆಹ್ ನಿವಾಸಿಗಳು ಮತ್ತು ಪ್ಯಾಲಿಸ್ಟೈನ್, ಇಸ್ರೇಲ್ ಮತ್ತು ಇನ್ನಿತರೆ ದೇಶಗಳ ಕಾರ್ಯಕರ್ತರು ತಾಯಿ ನಾಡಿನ ರಕ್ಷಣೆಗಾಗಿ ಸೆರೆಮನೆ ಸೇರಿದ್ದ ಈ ಅಮ್ಮ–ಮಗಳನ್ನು ಅತ್ಯಂತ ಸಂತಸದಿಂದ ಮತ್ತು ಭಾವನಾತ್ಮಕವಾಗಿ ಪ್ಯಾಲಿಸ್ಟೈನ್ ಬ್ಯಾನರ್–ಧ್ವಜ ಗಳನ್ನು ಹಿಡಿದು–ಹಾರಿಸುತ್ತಾ ಗ್ರಾಮಸ್ಥರು ಸ್ವಾಗತಿಸಿದ್ದಾರೆ. ಅಹೆದ್ ತಮಿಮಿ ರ ತಂದೆ ಬಾಸೆಮ್ ಟ್ಯಾಮಿಮಿ, ಕೂಡಾ ತುಂಬ ಭಾವುಕ ರಾಗಿ ಇಬ್ಬರನ್ನು ತಬ್ಬಿಕೊಂಡಾಗ ಹೃದಯ ಉಕ್ಕಿ ಬರುವ ಸಂತಸದ ಸನ್ನಿವೇಶ ಅಲ್ಲಿ ಮನೆ ಮಾಡಿತ್ತು ಎಂದು ನೆರೆದಿದ್ದ ಸನೆಟ್ ನ ಸದಸ್ಯ ಐಸಾ ಟೌಮಾ–ಸ್ಲೀಮಾನ್ ತಮ್ಮಭಾವನೆ ವ್ಯಕ್ತಪಡಿಸಿದ್ದಾರ.

ಹೊಸ ಹೋರಾಟಗಳ ಪೀಳಿಗೆಗೆ ಮಹಿಳೆಯರು ಉತ್ಪಾದಕ ಶಕ್ತಿ

ಜೈಲಿನಿಂದ ಬಿಡುಗಡೆಗೊಂಡ ಸ್ವಲ್ಪ ಸಮಯದಲ್ಲೇ ಅಹೆದ್ ತಮಿಮಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಅಗ್ನಿ ಪರೀಕ್ಷೆಯ ಸಮಯದಲ್ಲಿ ನನ್ನೊಂದಿಗೆ ಇದ್ದ ತಾಯಿ ಹಾಗೂ ಬೆಂಬಲ ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತಾ, ನನ್ನ ಸಹೋದರಿಯರು ಅಂದರೆ ಪ್ಯಾಲೇಸ್ಟಿನಿಯನ್ ಸ್ತ್ರೀ ಖೈದಿಗಳು ಇನ್ನೂ ಜೈಲಿನಲ್ಲಿ ಯೇ ಇರುವುದರಿಂದ ಅವರೆಲ್ಲರ ಬಿಡುಗಡೆ ಯಾಗುವವರೆವಿಗೂ ನನಗೆ ಪೂರ್ಣ ಸಂತೋಷವಾಗುವುದಿಲ್ಲ. ಅವರೆಲ್ಲರೂ ಕೂಡ ಜೈಲಿನಿಂದ ಮುಕ್ತರಾಗಬೇಕು ಎಂದರು .

ಅಂತಿಮವಾಗಿ ನಮ್ಮ ಶಕ್ತಿ ಜನರೊಂದಿಗೆ ಇರುತ್ತದೆ ಮತ್ತು ಜನರೆ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತಾರೆ, ಮಹಿಳೆಯರ ಸ್ವಾತಂತ್ರ್ಯ ಪ್ಯಾಲೇಸ್ಟಿನಿಯನ್ ಹೋರಾಟದ ಪ್ರಮುಖ ಭಾಗವಾಗಿದೆ, ಮುಂದಿನ ಹೋರಾಟಕ್ಕೆ ಹೊಸ ಪೀಳಿಗೆಯನ್ನು ಉತ್ಪಾದಿಸುವ ಶಕ್ತಿಯನ್ನು ನಾವು ಮುಂದುವರಿಸಬೇಕಾಗಿದೆ. ನಾನು ನನ್ನ ವಿದ್ಯಾಭ್ಯಾಸವನ್ನು ಮುಂದಿವರಿಸುತ್ತೇನೆ, ನಾನು ವಕೀಲಳಾಗಿ ಕಾರಾಗೃಹದಲ್ಲಿರುವ ಮುಗ್ದ ಪ್ಯಾಲೇಸ್ಟಿನಿಯನ್ ರನ್ನು ಪ್ರತಿನಿಧಿಸುತ್ತೇನೆ ಎಂದು ಭಾವನಾತ್ಮಕವಾಗಿ ಮಾತನಾಡಿದರು.



ಅನುಚಿತ ಕಾನೂನು ಬಾಹಿರ ಪ್ರಕರಣಗಳು:

ಇಸ್ರೇಲ್ ಸೇನೆಯು ಮನೆಯ ಮೇಲೆ ದಾಳಿ ಮಾಡಿ ಡಿಸೆಂಬರ್ ನಲ್ಲಿ ಅಹೆದ್ ತಮಿಮಿ ಳನ್ನು ಬಂಧಿಸಿದ್ದರು. ಇದು ಕಾನೂನು ಬಾಹಿರ ಅನುಚಿತ ಪ್ರಕರಣವಾಗಿತ್ತು. ಏಕೆಂದರೆ, ಇವರ ಗ್ರಾಮಕ್ಕೆ ಪ್ರವೇಶ ವನ್ನು ಸಂಪೂರ್ಣವಾಗಿ ಮುಚ್ಚಲಾಗಿತ್ತು. ಕಾನೂನು ಬಾಹಿರ ಹಮೀಲಿಷ್ ಇಸ್ರೇಲ್ ವಸಹಾತು ವಿಸ್ತರಣೆ ಮತ್ತು ಗ್ರಾಮದ ನೈಸರ್ಗಿಕ ವಸಂತ, ಅದರ ಪ್ರಾಥಮಿಕ ನೀರಿನ ಮೂಲವನ್ನು ಇಸ್ರೇಲ್ ಪಡೆಗಳು ವಶಪಡಿಸಿಕೊಂಡ್ಡಿದ್ದರು. ಇದರ ವಿರುದ್ಧ ಭಾರೀ ಹೋರಾಟವನ್ನು ಗ್ರಾಮಸ್ಥರು ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಇಸ್ರೇಲ್ ನ ಈ ದಾಳಿಯ ವಿರುದ್ಧ ತಮಿಮಿ ಕುಟುಂಬವು ಪ್ರತಿಭಟನೆ ಮಾಡುವಲ್ಲಿ ಹೆಸರುವಾಸಿಯಾಗಿತ್ತು, ಇದರಿಂದಾಗಿ ಇಸ್ರೇಲ್ ಪಡೆಗಳಿಂದ ಹೆಚ್ಚಿನ ಕಿರುಕುಳ ಅನುಭವಿಸುತ್ತಿದ್ದರು. ಇವರ ಬಂಧನ ಕಾನೂನು ಬಾಹಿರ ಹಾಗೂ ರಾಜಕೀಯ ಉದ್ದೇಶದಿಂದ ಕೂಡಿತ್ತು ಎನ್ನುತ್ತಾರೆ ತಮಿಮಿ ಅವರ ವಕೀಲರಾದ ಗಬಿ ಲಾಸ್ಕಿ. ಮಾನವ ಹಕ್ಕುಗಳ ಚಳವಳಿಯ ಒಮರ್ ಶಕೀರ್ ಅವರ ಪ್ರಕಾರ ಇಸ್ರೇಲ್ ನ ಕಾನೂನು ವ್ಯವಸ್ಥೆ ಯಲ್ಲಿ ಪ್ಯಾಲೇಸ್ಟಿನಿಯನ್ ಮಕ್ಕಳಿಗೆ ಅನಾರೋಗ್ಯಕರ ಚಿಕಿತ್ಸೆ ನೀಡುತ್ತಾರೆ. ಇಸ್ರೇಲ್ ಜೈಲಿನಲ್ಲಿ ಒಟ್ಟು 6500 ಪ್ಯಾಲೇಸ್ಟಿನಿಯನ್ ಸೆರೆಯಾಳುಗಳಲ್ಲಿ ಕನಿಷ್ಟಪಕ್ಷ 350 ಕ್ಕು ಹೆಚ್ಚುವರಿ ಯಾಗಿ ಪ್ಯಾಲೇಸ್ಟಿನಿಯನ್ ಮಕ್ಕಳು ಇದ್ದಾರೆ. ಇಸ್ರೇಲ್ ನ್ಯಾಯಾಲಯದಲ್ಲಿ ಶೇಕಡಾ 99 ರಷ್ಟು ಅನುಚಿತವಾದ ಅಪರಾದ ಪ್ರಕರಣಗಳು ಪ್ಯಾಲೇಸ್ಟಿನಿಯನ್ ಜನರ ಮೇಲಿದೆ ಎಂಬುದನ್ನು ಅಹೆದ್ ತಮಿಮಿ ಪ್ರಕರಣ ಬೆಳಕು ಚೆಲ್ಲಿ ಸಾಬೀತು ಪಡಿಸಿದೆ. ●

"ಮಾರ್ಕ್ಸ್ ಪ್ರಣೀತ ಮನುಷ್ಯ–ವಿಶ್ವದ ಕಲ್ಪನೆ........ ಪುಟ 16 ರಿಂದ

ಮಾತಿನಲ್ಲಿ "ಮಾರ್ಕ್ಸ್‌ವಾದದ ಪಿಡುಗಿ"ನ ಬಗ್ಗೆ ಎಚ್ಚರವಾಗಿರಬೇಕು ಎಂದು ಓದುಗರನ್ನು ಎಚ್ಚರಿಸಿದ ಕೌತುಕ ನಡೆದಿದೆ. ಮಾರ್ಕ್ಸ್‌ವಾದದ ಬಗ್ಗೆ ಪ್ರಜ್ಞಾಪೂರ್ವಕ ಹಂತದಲ್ಲಿ ಮುಂದೆ ಕನ್ನಡ ಸಾಹಿತಿಗಳ ಮತ್ತು ಪ್ರಕಟಣೆಗಳ ಧೋರಣೆಗೆ ಇದು ಪ್ರತೀಕವಾಗಿತ್ತು. ಅದೇ ರೀತಿ ಮಾರ್ಕ್ಸ್‌ವಾದವನ್ನು ತಿರುಚುವ ತಪ್ಪುತಪ್ಪಾಗಿ ಅರ್ಥೈಸುವ ಪರಂಪರೆ ಸಹ ಅಲ್ಲಿಂದಲೇ ಆರಂಭವಾಯಿತು. ಮುಖ್ಯವಾಹಿನಿಯ ಹೆಚ್ಚಿನ ಲೇಖಕರು (ಕಾರಂತ, ಶಾಂತಿನಾಥ ದೇಸಾಯಿ, ಲಂಕೇಶ್, ಅನಂತಮೂರ್ತಿ, ತೇಜಸ್ವಿ ಇತ್ಯಾದಿ) ತಮ್ಮ ಕೃತಿಗಳಲ್ಲಿ ಮಾರ್ಕ್ಸ್‌ವಾದಿ ಪಾತ್ರವನ್ನು ವಿಷಯಲಂಪಟ, ಹಿಂಸಾರತಿಯ ವ್ಯಕ್ತಿಯಾಗಿ ಕ್ಯಾರಿಕೇಚರ್ ಮಾಡಿ ವಿಕೃತಗೊಳಿಸಲು ಪ್ರಯತ್ನಿಸಿದ್ದಾರೆ. ಪ್ರಗತಿಶೀಲ, ದಲಿತ–ಬಂಡಾಯ ಸಾಹಿತ್ಯ ನಮ್ಮ ವ್ಯವಸ್ಥೆಯ ಕ್ರೌರ್ಯ, ಹುಳುಕುಗಳ ಬಗ್ಗೆ ಎಷ್ಟು ಖಾರವಾಗಿ ತೀಕ್ಷ್ಣವಾಗಿ ವಿಡಂಬನೆ–ಟೀಕೆ ಮಾಡಿತೋ ಅದಕ್ಕೆ ಏನೂ ಕಡಿಮೆಯಿಲ್ಲದಂತೆ ಮಾಡಿದರೂ, ಮಾರ್ಕ್ಸ್‌ವಾದ ಜತೆ ನೇರಾನೇರ ಮುಖಾಮುಖಿಯಾಗದೆ ಅದರ ಬಗ್ಗೆ ಆತಂಕ, ಭಯ, ಹಿಂಜರಿಕೆ ತೋರಿಸಿದ್ದಾರೆ. ಅಲ್ಲದೆ ಮಾರ್ಕ್ಸ್‌ವಾದದ ಅನುಸಂಧಾನ ಯಾವಾಗಲೂ ದಕ್ಷಿಣ ಕರ್ನಾಟಕದಲ್ಲಿ ಲೋಹಿಯಾವಾದದ ಮೂಲಕ, ಉತ್ತರ ಕರ್ನಾಟಕದಲ್ಲಿ ಎಂ.ಎನ್. ರಾಯ್ ಮೂಲಕ ಆಗುವುದು ಯಾಕೆ ಎಂಬ ಪ್ರಶ್ನೆಯನ್ನು ಡಾ. ಎಂ.ಜಿ.ಹೆಗಡೆ ಎತ್ತಿದರು. ಇದಕ್ಕೆ ಎರಡು ಕಾರಣಗಳಿರಬಹುದು. ಅನಂತಮೂರ್ತಿ ಮತ್ತು ಗೌರೀಶ ಕಾಯ್ಕಿಣಿಯವರು ಹೇಳಿದಂತೆ 'ಕನ್ನಡಿಗರು ಭಾವಜೀವಿಗಳು, ಆಧ್ಯಾತ್ಮಿಕ ಧೋರಣೆಯುಳ್ಳವರು. ಗಾಂಧಿ ಮಾರ್ಕ್ಸ್ ನಂತಹ ವೈಚಾರಿಕ ತಾತ್ವಿಕ ಸಂಗತಿಗಳಿಗಿಂತ ರಾಮಕೃಷ್ಣ ಪರಮಹಂಸರಿಗೆ ತೆರೆದುಕೊಳ್ಳುವರು' ಇರಬಹುದೇ. ಎರಡನೇಯದಾಗಿ, ಅನುಭೂತಿ ಪ್ರಾಧಾನ್ಯದ ಕಾವ್ಯವನ್ನು ವಿಶೇಷೀಕರಿಸಿದ ಸಾಹಿತ್ಯದ ಪರಿಕಲ್ಪನೆಯಿಂದಾಗಿ ತಾತ್ವಿಕ ವೈಚಾರಿಕ ಅನುಸಂಧಾನ ಸಾಧ್ಯವಾಗಿರಲಿಕ್ಕಿಲ್ಲ ಎಂಬ 'ಅನುಮಾನ'ವನ್ನು ಚರ್ಚೆಗಾಗಿ ಮುಂದಿಟ್ಟರು.


ಸಂವಾದದಲ್ಲಿ ಭಾಗವಹಿಸಿದ ಡಾ ಅಶೋಕ ಶೆಟ್ಟರ ಪ್ರಗತಿಶೀಲ ಚಳುವಳಿಯ ಹುಟ್ಟು ವಿಕಾಸ ಏಳು–ಬೀಳುಗಳ ಬಗೆಗೆ ವಿವರವಾಗಿ ಮಾತನಾಡಿದರು.

ಕನ್ನಡ ಸಾಹಿತ್ಯ ಮಾರ್ಕ್ಸ್‌ವಾದದ ಜತೆ ಮೂರು ಪರಿಯಲ್ಲಿ ಅನುಸಂಧಾನ ನಡೆಸಿದೆ. ಮಾರ್ಕ್ಸ್‌ವಾದಿ ಚಾರಿತ್ರಿಕ ವ್ಯಕ್ತಿಗಳ ಮತ್ತು ಘಟನೆಗಳಿಗೆ ಪ್ರತಿಸ್ಪಂದನೆ ಹಾಗೂ ಅದನ್ನು ಒಂದು ದರ್ಶನವಾಗಿ ಅಂತರ್ಗತ ಮಾಡಿಕೊಂಡು ಅನುಸಂಧಾನ ನಡೆಸಿದ ಪರಿಗಳೇ ಆ ಮೂರು ಪರಿಗಳು. ಮೊದಲ ಪರಿಯಲ್ಲಿ ಮಾರ್ಕ್ಸ್, ಲೆನಿನ್. ಮಾವೋ ಮುಂತಾದ ವ್ಯಕ್ತಿಗಳಿಗೆ ಸ್ಪಂದಿಸಿದ್ದು ಕಂಡು ಬರುತ್ತದೆ. ಎರಡನೇ ಪರಿಯಲ್ಲಿ ಚಾರಿತ್ರಿಕ ಘಟನೆಗಳಿಗೆ (ಚೀನಾದ ಸಾಂಸ್ಕೃತಿಕ ಕ್ರಾಂತಿಗೆ ಸ್ಪಂದಿಸಿದ ಕಂಬಾರ, ಸೋವಿಯೆಟ್ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ಸ್ಪಂದಿಸಿದ ಕುವೆಂಪು). ಮೂರನೇಯ ಪರಿಯಲ್ಲಿ – ನಿರಾಕರಣೆಯ ಮತ್ತು ಸಂಶಯದ (ಅಡಿಗ, ಲಂಕೇಶ, ತೇಜಸ್ವಿಯವರ ಮಾರ್ಕ್ಸ್‌ವಾದದ ದುರುಳೀಕರಣದ) ಮಾದರಿ, ಬಿಡುಗಡೆಯ ಸಂಭ್ರಮದ (ಸಿದ್ಧಲಿಂಗಯ್ಯ) ಮಾದರಿ, ದಾರ್ಶನಿಕ ಸಂಕರದ (ಎಸ್.ಎಸ್. ಹಿರೇಮಠ, ರಂಜಾನ್ ದರ್ಗಾ) ಹಾಗೂ ವಿಮುಖತೆಯ (ಅನಕೃ, ತರಾಸು, ಡಿ.ಆರ್. ನಾಗರಾಜ್) – ನಾಲ್ಕು ಚಹರೆಗಳಿವೆ, ಎಂದು ವಿಚಾರ ಸಂಕಿರಣದ ಅಧ್ಯಕ್ಷೀಯ ಮಾತುಗಳನ್ನಾಡಿದ ಪ್ರೊ. ರಹಮತ ತರೀಕೆರೆ ವಿವರಿಸಿದರು. ■

JANASHAKTHI KANNADA VARA PATRIKE AUG 06-12, 2018 Price: Rs. 10/- Date of Publication: 03 AUG 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283








ಧಾರವಾಡದಲ್ಲಿ ಮಾರ್ಕ್ಸ್200-ಕ್ಯಾಪಿಟಲ್150 ಆಚರಣೆ

"ಮೊದಲು 'ಸಿಪಾಯಿ ದಂಗೆ'ಯನ್ನು 'ಪ್ರಥಮ ಸ್ವಾತಂತ್ರ್ಯ ಯುದ್ಧ' ಎಂದು ಕರೆದದ್ದು ಮಾರ್ಕ್ಸ್, ಸಾವರ್ಕರ್ ಅಲ್ಲ"

ಹಿರಿಯ ಗೆಂದವರು ನಾಡಿನ ಖ್ಯಾತ ಚಿಂತಕ ಡಾ.ಜಿ.ರಾಮಕೃಷ್ಣ. ಅವರು ಧಾರವಾಡದ ಆಲೂರು ವೆಂಕಟರಾವ್ ಭವನದಲ್ಲಿ ಇಂದು (ಜುಲೈ 29) "ಮಾರ್ಕ್ಸ್200–ಕ್ಯಾಪಿಟಲ್150" ಮಾಲಿಕೆಯ ಇನ್ನೆರಡು ಪುಸ್ತಕಗಳ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ನವಕರ್ನಾಟಕ ಮತ್ತು ಕ್ರಿಯಾ ಜಂಟಿಯಾಗಿ ಹಮ್ಮಿಕೊಂಡಿದ್ದ ಈ ಪ್ರಕಟಣಾ ಯೋಜನೆಯ ಭಾಗವಾಗಿ "ಭಾರತವನ್ನು ಕುರಿತು ಮಾರ್ಕ್ಸ್" ಮತ್ತು "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೊಂದು ಕೊಡುಗೆ" ಇಂದು ಬಿಡುಗಡೆಯಾದ ಪುಸ್ತಕಗಳು. ಎರಡೂ ಪುಸ್ತಕಗಳಲ್ಲಿ ಕಂಡು ಬರುವ ಅಪಾರ ಮಾಹಿತಿ ಸಂಗ್ರಹ, ವಿದ್ವತ್ತಿನ ಆಳ, ನಿಷ್ಕೃಷ್ಟವಾದ ವಿಶ್ಲೇಷಣಾ ವಿಧಾನ, ಸ್ಪಷ್ಟ ರಾಜಕೀಯ ಆರ್ಥಿಕ ಮತ್ತು ತತ್ವಶಾಸ್ತ್ರೀಯ ಚೌಕಟ್ಟು ಈಗಲೂ ಅನುಕರಣೀಯ. ಇವನ್ನು ಎಲ್ಲಾ ಮಾರ್ಕ್ಸ್ ಕೃತಿಗಳಲ್ಲಿ ಕಾಣಬಹುದು ಎಂದು ಮುಂದುವರೆದು ಹೇಳಿದರು. 1848ರಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆ ಬಿಡುಗಡೆಯಾದ 2 ವರ್ಷಗಳ ನಂತರದಿಂದ ಆರಂಭವಾಗಿ ಕಳೆದ ಸುಮಾರು 170 ವರ್ಷಗಳಿಂದಲೂ 'ಮಾರ್ಕ್ಸವಾದ ಸತ್ತಿದೆ' ಎಂದು ಅದರ ವಿರೋಧಿಗಳು ಒಂದು ಕಡೆ ಹೇಳುತ್ತಾ ಬರುತ್ತಿದ್ದಾರೆ. ಇನ್ನೊಂದು ಕಡೆ ಅದು ಅಪಾಯಕಾರಿ, ಅದನ್ನು ಹರಡಲು ಬಿಡಬಾರದು ಎಂದೂ ಹೇಳುತ್ತಾರೆ. 1991ರಲ್ಲಂತೂ ಪುನಃ 'ಮಾರ್ಕ್ಸವಾದದ ಕತೆ ಮುಗಿದೇ ಹೋಯಿತು' ಎಂದರು. ಆದರೆ 2008ರ ಆರ್ಥಿಕ ಬಿಕ್ಕಟ್ಟಿನ ನಂತರ 'ಕ್ಯಾಪಿಟಲ್' ಗ್ರಂಥವನ್ನು ಬೂರ್ಜ್ವಾ ಅರ್ಥಶಾಸ್ತ್ರಜ್ಞರೂ ಗಂಭೀರವಾಗಿ ಅಧ್ಯಯನ ಮಾಡಲಾರಂಭಿಸಿದ್ದಾರೆ ಎಂದು ವರದಿಯಾಗಿತ್ತು. ಅವರ ಎಲ್ಲಾ ಮಾತುಗಳನ್ನು ಹುಸಿಗೊಳಿಸಿ ಮಾರ್ಕ್ಸ್‌ವಾದ ಉಳಿದಿದೆ, ಬೆಳೆದಿದೆ. ಈಗ ಬಹುಶಃ ಅದು ಪ್ರಭಾವ ಬೀರದ – ಅರ್ಥಶಾಸ್ತ್ರ, ವಿಜ್ಞಾನ, ಚರಿತ್ರೆ, ಸಾಹಿತ್ಯ ವಿಮರ್ಶೆ ಇತ್ಯಾದಿ – ಜ್ಞಾನಕ್ಷೇತ್ರವಿಲ್ಲ. ಮಾರ್ಕ್ಸ್ ದ್ವಿ–ಶತಾಬ್ದಿ ಮತ್ತು ಕ್ಯಾಪಿಟಲ್ 150ನೇ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. 1928ರಲ್ಲಿ ಖೋತಿ ಸತ್ಯಾಗ್ರಹದ ಸಂದರ್ಭದಲ್ಲಿ ಮುಂಬಯಿಯ ಸಾರ್ವಜನಿಕ ಸಭೆಯೊಂದರಲ್ಲಿ ಡಾ. ಅಂಬೇಡ್ಕರ್ ಹೇಳಿದಂತೆ ಮಾರ್ಕ್ಸ್‌ವಾದ ಜಗತ್ತಿನ ತುಳಿತಕ್ಕೊಳಗಾದ ಎಲ್ಲಾ ಜನರ ವಿಮೋಚನೆಯ ಅಸ್ತ್ರ. ಅದನ್ನು ಕಮ್ಯುನಿಸ್ಟರು ಅಂಬೇಡ್ಕರ್ ವಾದಿಗಳು ಐಕ್ಯ ಹೋರಾಟಗಳ ಮೂಲಕ ಮುಂದಕ್ಕೊಯ್ಯಬೇಕು ಎಂದು ಡಾ.ಜಿ.ರಾಮಕೃಷ್ಣ. ಕರೆ ನೀಡಿದರು.



ಆಡಂ ಸ್ಮಿತ್, ರಿಕಾರ್ಡೋ ಆದಿಯಾಗಿ ಆರಂಭವಾಗಿ ಇತ್ತೀಚಿನ ಅಭಿವೃದ್ಧಿ ಹಾಗೂ ಬಿಹೆವಿಯೊರಲ್ ಅರ್ಥಶಾಸ್ತ್ರದವರೆಗಿನ ಎಲ್ಲಾ ಪ್ರಮುಖ ಅಂಶಗಳನ್ನು ಮಾರ್ಕ್ಸ್ ನ ರಾಜಕೀಯ ಅರ್ಥಶಾಸ್ತ್ರ ಒಳಗೊಂಡಿದ್ದು ಶ್ರಮದ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಮುಂದೆ ಬಂಡವಾಳದ ಬಗೆಗೆ ಗ್ರಂಥಸರಣಿಯ ರಚನೆಗೆ ರೂಪುರೇಷೆಯಾಗಿ ಬರೆದ ಕೃತಿ "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೊಂದು ಕೊಡುಗೆ" ಎಂದು ಆ ಕೃತಿಯನ್ನು ಪರಿಚಯ ಮಾಡಿಕೊಡುತ್ತಾ ಖ್ಯಾತ ಲೇಖಕ ಮತ್ತು ಹಿರಿಯ ಪತ್ರಕರ್ತ ಡಾ.ಜಗದೀಶ ಕೊಪ್ಪ ಹೇಳಿದರು. ಇದು ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ಆಕರ ಗ್ರಂಥವಾಗಬಹುದಾದ ಕೃತಿ. ಕನ್ನಡಕ್ಕೆ ಬರಲೇಬೇಕಾದ ಕೃತಿ ಬಂದಿದೆ. ಈಗಿನ ತಲೆಮಾರಿಗೆ ಮಾರ್ಕ್ಸ್ ಚಿಂತನೆಗಳನ್ನು ಸಂಕ್ಷಿಪ್ತವಾಗಿ ಸರಳವಾಗಿ ವ್ಯಾಖ್ಯಾನದೊಂದಿಗೆ ಹೇಳುವ ಕೃತಿಗಳ ರಚನೆ ಅಗತ್ಯವಿದೆ. ಅದು ನವಕರ್ನಾಟಕ, ಕ್ರಿಯಾ ಮಾತ್ರವಲ್ಲ, ನಮ್ಮೆಲ್ಲರ ಜವಾಬ್ದಾರಿ ಎಂದು ಅವರು ಹೇಳಿದರು.

ಮಾರ್ಕ್ಸ್ 1853–58ರ ನಡುವೆ ಅಮೆರಿಕದ ಒಂದು ಪತ್ರಿಕೆಗೆ ಬರೆದ 357 ಲೇಖನಗಳಲ್ಲಿ ಅರ್ಧದಷ್ಟು ಲೇಖನಗಳು ಭಾರತದ ಬಗ್ಗೆ ಇದ್ದು, ಅವುಗಳಲ್ಲಿ ಆಯ್ದ 20 ಪ್ರಮುಖ ಲೇಖನಗಳು "ಭಾರತವನ್ನು ಕುರಿತು ಮಾರ್ಕ್ಸ್"ನಲ್ಲಿವೆ ಎಂದು ಆ ಪುಸ್ತಕದ ಪರಿಚಯ ಮಾಡುತ್ತಾ ಖ್ಯಾತ ಚಿಂತಕ ಸದಾಶಿವ ಮಿರ್ಜಿ ಅವರು ಹೇಳಿದರು. ಪುಸ್ತಕದಲ್ಲಿ 1857ರ ದಂಗೆಯ ಮತ್ತು ಅದರ ಮೊದಲಿನ ಸುಮಾರು 100 ವರ್ಷಗಳ ಬ್ರಿಟಿಷ್ ಆಡಳಿತದ ಪರಿಣಾಮಗಳ ಬಗ್ಗೆ ವಿವರವಾದ ಚಿತ್ರಣ ಮತ್ತು ವಿಶ್ಲೇಷಣೆ ಇದೆ. 1857ರ ದಂಗೆ ಬ್ರಿಟಿಷರೇ ನೇಮಿಸಿದ ಭಾರತೀಯ ಸೈನಿಕರ ದಂಗೆಯಾಗಿತ್ತೇ ವಿನಹ ಅರೆಹೊಟ್ಟೆಯಲ್ಲಿರುವ ಜೀವನಾಶ್ಯಕತೆಗಳು ಸಿಗದೆ ನರಳುತ್ತಿರುವ ರೈತರ ದಂಗೆಯಾಗಿರಲಿಲ್ಲ ಎಂದು ಮಾರ್ಕ್ಸ್ ಗುರುತಿಸಿದ್ದಾರೆ ಎಂದು ಹೇಳಿದರು.

ಬಿ.ಎನ್.ಪೂಜಾರಿ ಅವರು ಸ್ವಾಗತ ಮಾಡಿ, ಪುಸ್ತಕ ಬಿಡುಗಡೆ ಕಾರ್ಯಕ್ರಮದ ನಿರ್ವಹಣೆ ಮಾಡಿದರು. ನವಕರ್ನಾಟಕದ ಡಾ. ಸಿದ್ಧನಗೌಡ ಪಾಟೀಲ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕ್ರಿಯಾದ ವಸಂತರಾಜ ಎನ್.ಕೆ. ವಂದನಾರ್ಪಣೆ ಮಾಡಿದರು. ಆ ನಂತರ "ಕನ್ನಡ ಸಾಹಿತ್ಯ ಮತ್ತು ಮಾರ್ಕ್ಸ್‌ವಾದ" ಎಂಬ ವಿಷಯದ ಕುರಿತು ವಿಚಾರ ಸಂಕಿರಣ ನಡೆಯಿತು. (ಈ ಬಗ್ಗೆ ಪ್ರತ್ಯೇಕ ವರದಿ ಜತೆಗಿದೆ) ●

"ಮಾರ್ಕ್ಸ್ ಪ್ರಣೀತ ಮನುಷ್ಯ–ವಿಶ್ವದ ಕಲ್ಪನೆ ಕನ್ನಡ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿದೆ"

20ನೇ ಶತಮಾನದ ಆದಿಯಲ್ಲಿ ಫ್ರಾಯ್ಡ್, ಐನಸ್ಟೀನ್, ಮಾರ್ಕ್ಸ್ ಅವರ ಚಿಂತನೆಗಳ ಪ್ರಭಾವ ಹರಡಲಾರಂಭಿಸಿದ್ದು ಮನುಷ್ಯ–ವಿಶ್ವದ ಕಲ್ಪನೆ ಆಮೂಲಾಗ್ರವಾಗಿ ಬದಲಾಯಿತು. ಅದರ ಪ್ರಭಾವ ಗಡಿಗಳನ್ನು ಮೀರಿ ಜಗತ್ತಿನ ತುಂಬಾ ಹರಡಿ ಕನ್ನಡ ಸಾಹಿತ್ಯದ ಮೇಲೆ ಬಿದ್ದಿದೆ. ಮಾರ್ಕ್ಸ್‌ವಾದದ ಪ್ರಭಾವ ನೇರವಾಗಿ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ದಶಕದಿಂದ ಪ್ರಾರಂಭವಾದ ಪ್ರಗತಿಶೀಲ ಚಳುವಳಿ ಮತ್ತು 1980ರ ದಶಕದಲ್ಲಿ ಆರಂಭವಾದ ದಲಿತ–ಬಂಡಾಯ ಚಳುವಳಿಯ ಕಾಲದಲ್ಲಿ ಆದರೂ, ಮೇಲೆ ಹೇಳಿದ ಅರ್ಥದಲ್ಲಿ, ಕಾರಂತರಿಂದ ಹಿಡಿದು ತೇಜಸ್ವಿಯ ವರೆಗೆ ಎಲ್ಲಾ ಪ್ರಮುಖ ಕನ್ನಡದ ಮುಖ್ಯವಾಹಿನಿಯ ಸಾಹಿತಿಗಳ ಕೃತಿಗಳಲ್ಲಿ ಅಪ್ರಜ್ಞಾಪೂರ್ವಕವಾಗಿ ಆಗಿದೆ. ಉದಾಹರಣೆಗೆ ಶಿವರಾಮಮ ಕಾರಂತರು ಮಾರ್ಕ್ಸ ವಾದವನ್ನು ತ್ರಿಕರಣಪೂರ್ವಕವಾಗಿ ತಿರಸ್ಕರಿಸಿದರೂ, ಅವರ



ಕಾದಂಬರಿಯ ಚೋಮ ಧಣಿ ಭೂಮಿ ಕೊಡಲು ನಿರಾಕರಿಸಿದಾಗ, ನನ್ನ ಭೂಮಿಯನ್ನು ಉಳಲಾಗದ ನೇಗಿಲು ಯಾಕಿರಬೇಕು ಎಂದು ಅದನ್ನು ಮುರಿದು ಹಾಕುತ್ತಾನೆ. ಆದರೆ ಮಾರ್ಕ್ಸ್‌ವಾದವನ್ನು ಕನ್ನಡ ಲೇಖಕರು ಒಂದು ದರ್ಶನವಾಗಿ ಅಂಗೀಕರಿಸುವ ಬಗ್ಗೆ ಮತ್ತು ಅದನ್ನು ವಿರೋಧಿಸುವವರೂ ಅದರ ಜತೆ ನೇರವಾಗಿ ಮುಖಾಮುಖಿಯಾಗುವುದರಲ್ಲಿ ಆತಂಕ, ಭಯ, ಹಿಂಜರಿಕೆ ಏಕೆ ತೋರಿಸಿದ್ದಾರೆ ಎಂಬ ಪ್ರಶ್ನೆಯನ್ನು ಎತ್ತಿ ಉತ್ತರಿಸಲು ಪ್ರಯತ್ನಿಸಿದವರು ಡಾ. ಎಂ.ಜಿ.ಹೆಗಡೆ. ಅವರು "ಕನ್ನಡ ಸಾಹಿತ್ಯ ಮತ್ತು ಮಾರ್ಕ್ಸ್‌ವಾದ" ಮೇಲೆ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ವಿಚಾರ ಮಂಡನೆ ಮಾಡಿ ಮಾತನಾಡುತ್ತಿದ್ದರು.

ಧಾರವಾಡದ ಆಗಿನ ವೈಚಾರಿಕ ಪುಸ್ತಕಗಳ ಪ್ರಮುಖ ಪ್ರಕಾಶಕನ ಸಂಸ್ಥೆಯಾದ "ಮಿಂಚಿನ ಬಳ್ಳಿ" ಹೇಳಿ ಬರೆಸಿ ಪ್ರಕಟಿಸಿದ ಗೌರೀಶ ಕಾಯ್ಕಿಣಿಯ ಅವರ ಮಾರ್ಕ್ಸ್‌ವಾದದ ಬಗೆಗಿನ ಮೊದಲ ಪುಸ್ತಕದ ಪ್ರಕಾಶಕರ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**